

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 30 ಭಾನುವಾರ 2022

ಸಂಪುಟ: 43 | ಸಂಚಿಕೆ: 193 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಬಿಜೆಪಿ 150 ಸ್ಥಾನ ಗಳಿಸಿ ಮತ್ತೆ ಅಧಿಕಾರಕ್ಕೆ ಬಂದೇ ಬರುತ್ತೆ...

●ಪಕ್ಷದ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿಶ್ವಾಸ ●ಇದರೊಂದಿಗೆ ಅಮ್ಮ–ಮಗ, ಅಪ್ಪ–ಮಕ್ಕಳ ಪಕ್ಷ ಮೂಲೆಗುಂಪು ●ಕೆ.ಆರ್.ಕ್ಷೇತ್ರದಲ್ಲಿ 'ಕಾರ್ಯಕರ್ತರ ಸಂಕಲ್ಪ ಸಭೆ'



ಮೈಸೂರು, ಅ.29(ಎಸ್‌ಬಿಡಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲೂ ಬಿಜೆಪಿ 150 ಸ್ಥಾನಗಳೊಂದಿಗೆ ಸರ್ಕಾರ ರಚಿಸಲಿದ್ದು, ಅಮ್ಮ–ಮಕ್ಕಳ ಪಕ್ಷ ದೆಹಲಿಗೆ ಹಾಗೂ ಅಪ್ಪ–ಮಕ್ಕಳ ಪಕ್ಷ ಗೂಡು ಸೇರುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಉದ್ಘರಿಸಿದರು.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಭೂತಾಳೆ ಆಟದ ಮೈದಾನದಲ್ಲಿ ಬಿಜೆಪಿ ಕೃಷ್ಣರಾಜ ಕ್ಷೇತ್ರದ ವತಿಯಿಂದ ಶನಿವಾರ ನಡೆದ 'ಕಾರ್ಯಕರ್ತರ ಸಂಕಲ್ಪ ಸಭೆ'ಯನ್ನು ಶಂಖ ಊದುವ ಮೂಲಕ ಉದ್ಘಾಟಿಸಿ ಮಾತನಾಡಿ, ಕಾಂಗ್ರೆಸ್ ಹಾಗೂ ಜೆಡಿಎಸ್ ನಾಯಕರು ವಿರುದ್ಧ ಹರಿಹಾಯ್ದರಲ್ಲದೆ ಮುಂಬರುವ ಸಾರ್ವತ್ರಿಕ ಚುನಾವಣೆ ಫಲಿತಾಂಶವೂ ಬಿಜೆಪಿ ತೆಕ್ಕೆ ಸೇರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

▶ 8ನೇ ಪುಟಕ್ಕೆ

ಖಳನಾಯಕ, ನರಹಂತಕ ಅನ್ನದೆ ಮತ್ತೇನೇಳುವುದು?

ಮೈಸೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ನರಹಂತಕ ಅನ್ನದೆ ಮತ್ತೇನೇಳುವುದು? ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಪ್ರಶ್ನಿಸಿದರು.

ಮೈಸೂರಿನ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ಸಂಕಲ್ಪ ಸಭೆಯಲ್ಲಿ ಮಾತನಾಡಿ, ಸಿದ್ದರಾಮಯ್ಯ ಭ್ರಷ್ಟಾಚಾರ ಹಾಗೂ ಸಾಮರಸ್ಯದ ಬಗ್ಗೆ ಮಾತನಾಡುತ್ತಾರೆ. ಆದರೆ ಅವರ ಅಧಿಕಾರಾವಧಿಯಲ್ಲಿ 24 ಹಿಂದೂ ಕಾರ್ಯಕರ್ತರ ಹತ್ಯೆಯಾಯಿತು. ಒಮ್ಮೆಯೂ ಸಿದ್ದರಾಮಯ್ಯ ಕಂಬನಿ ಮಿಡಿಯಲಿಲ್ಲ, ಒಂದು ಕುಟುಂಬಕ್ಕೂ ಸಾಂತ್ವನ ಹೇಳಲಿಲ್ಲ. 3 ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡರು. ಯಾರ ಕುಟುಂಬಕ್ಕೂ ಪರಿಹಾರ ಕೊಡಲಿಲ್ಲ. ಗೋಹತ್ಯೆ ನಿಷೇಧ ಕಾಯ್ದೆ ಹಿಂಪಡೆದು ಗೋಹತ್ಯೆ ಮುಂದುವರೆಯಲು ಅವಕಾಶ ನೀಡಿದರು. 2 ಸಾವಿರ ಪಿಎಫ್‌ಐ ಕಾರ್ಯಕರ್ತರನ್ನು ಜೈಲಿನಿಂದ ಬಿಡಿಸಿದರು. ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಮೇಲಿನ ಹಲ್ಲೆಗೂ ಪ್ರತಿಕ್ರಿಯಿಸಲಿಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಹಿಂದೂ ಕಾರ್ಯಕರ್ತರು, ರೈತರು, ಮಹಿಳೆಯರು, ಅಧಿಕಾರಿಗಳು ಯಾರಿಗೂ ರಕ್ಷಣೆ ಇರಲಿಲ್ಲ. ನಾಡಿಗೆ ಮರೆಯಲಾಗದ ಕೊಡುಗೆ ನೀಡಿರುವ ಮೈಸೂರು ಒಡೆಯ ರನ್ನು ಏಕ ವಚನದಲ್ಲಿ ನಿಂದಿಸಿ, ನೀಚ ರಾಜಕಾರಣ ಮಾಡಿದರು. ಹೀಗಿರುವಾಗ ಸಿದ್ದರಾಮಯ್ಯನವರನ್ನು ಖಳನಾಯಕ, ನರಹಂತಕ ಅನ್ನದೇ ಮತ್ತೇನೇಳುವುದು ಎಂದರು.

ಕುಕ್ಕರಹಳ್ಳಿ ಕೆರೆ ಏರಿಯಲ್ಲಿ ಅಪಾಯದ ಆತಂಕ

ತಜ್ಞರ ತಂಡದಿಂದ ಕೆರೆ ಸುರಕ್ಷತೆ ಅವಲೋಕನ



ಕುಕ್ಕರಹಳ್ಳಿ ಕೆರೆಗೆ ಕೆಇಆರ್‌ಎಸ್ ತಜ್ಞರ ತಂಡ ಶನಿವಾರ ಭೇಟಿ ನೀಡಿ ಪರಿಶೀಲಿಸಿತು.

ಮೈಸೂರು, ಅ.29(ಎಂಟಿವೈ)– ಸತತ ಮಳೆಯಿಂದ ಅಪಾಯ ಮಟ್ಟಕ್ಕೆ ನೀರು ಸಂಗ್ರಹವಾಗಿದ್ದ ಮೈಸೂರಿನ ಕುಕ್ಕರಹಳ್ಳಿ ಕೆರೆಗೆ ಶನಿವಾರ ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್(ಕೆಇಆರ್‌ಎಸ್) ಹಿರಿಯ ಇಂಜಿನಿಯರ್ ನೇತೃತ್ವದಲ್ಲಿ ತಜ್ಞರ ತಂಡ ಭೇಟಿ ನೀಡಿ, ಕೆರೆ ಏರಿಯ ಸುರಕ್ಷತೆ ಸಂಬಂಧ ಪರಿಶೀಲಿಸಿ ನಾಲ್ಕು ಸ್ಥಳಗಳಲ್ಲಿ ಮಣ್ಣಿನ ಮಾದರಿ ಸಂಗ್ರಹಿಸಿದೆ.

ಎರಡು ತಿಂಗಳಿಂದ ಮೈಸೂರು ಭಾಗದಲ್ಲಿ ಸುರಿದ ಧಾರಾಕಾರ ಮಳೆಯಿಂದ ಕುಕ್ಕರಹಳ್ಳಿ ಕೆರೆಯಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹವಾಗಿದ್ದು, ಈ ಮಧ್ಯೆ ನಿರ್ವಹಣೆ ಕೊರತೆ ಹಿನ್ನೆಲೆಯಲ್ಲಿ ಕೆರೆಗೆ ಅಳವಡಿಸಿದ್ದ ತೂಬು ಗೇಟ್ ತುಕ್ಕು ಹಿಡಿದು, ತೆರೆಯಲಾಗದೇ ಸಮಸ್ಯೆ ತಲೆದೋರಿತ್ತು. ಹೆಚ್ಚುವರಿ ನೀರು ಹೊರ ಹೋಗಲಾಗದೇ ಅಪಾಯದ ಮಟ್ಟಕ್ಕೇರಿತ್ತು. ಕೆರೆಯ ಆವರಣದಲ್ಲಿರುವ ಮೈಸೂರು ವಿಶ್ವವಿದ್ಯಾಯಲಯ ಯುಜಿಸಿ ಕೇಂದ್ರಕ್ಕೂ ನೀರು ನುಗ್ಗಿತ್ತು. ಅಲ್ಲದೆ, ಹುಣಸೂರು ರಸ್ತೆಗೆ ಹೊಂದಿಕೊಂಡಂತಿರುವ ಕೆರೆ ಭಾಗದಲ್ಲೂ ಭಾರೀ ಪ್ರಮಾಣದ ನೀರು ಸಂಗ್ರಹವಾಗಿದ್ದರಿಂದ ವಾಯುವಿಹಾರಿಗಳ ಮಾರ್ಗ ನೀರಲ್ಲಿ ಮುಳುಗಡೆಯಾಗಿತ್ತು. ಮುನ್ನೆಚ್ಚರಿಕಾ ಕ್ರಮವಾಗಿ ಭದ್ರತೆಯ ದೃಷ್ಟಿಯಿಂದ ವಾಯುವಿಹಾರಿಗಳ ಪ್ರವೇಶ ನಿರ್ಬಂಧಿಸಲಾಗಿತ್ತು. ಕೆರೆ ಏರಿಯಲ್ಲೂ ಅಲ್ಲಲ್ಲಿ ನೀರು ಜಿನುಗುವ ಮೂಲಕ ಮತ್ತಷ್ಟು ಆತಂಕಕ್ಕೆ ಕಾರಣವಾಗಿತ್ತು.

ಸುರಕ್ಷತೆ ಅವಲೋಕಿಸುವಂತೆ ಪತ್ರ ಸ್ಥಳೀಯರು, ವಾಯುವಿಹಾರಿಗಳು ಹಾಗೂ ಪರಿಸರ ಪ್ರೇಮಿಗಳು ಕೆರೆ ಏರಿಯ ಭದ್ರತೆ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಮೈಸೂರು ವಿಶ್ವವಿದ್ಯಾನಿಲಯವು ಕೆಆರ್‌ಎಸ್ ಬಳಿಯಿರುವ

▶ 6ನೇ ಪುಟಕ್ಕೆ

"ತಜ್ಞರನ್ನು ಕರೆಸಿ ಪರಿಶೀಲಿಸಲಾಗಿದೆ. ನೀರು ಜಿನುಗುವ ಸ್ಥಳದಿಂದ ಮಣ್ಣನ್ನು ತೆಗೆದುಕೊಂಡಿದ್ದಾರೆ. ಮಣ್ಣಿನ ಪರೀಕ್ಷೆಯ ಫಲಿತಾಂಶ ಬರಲು ಒಂದು ವಾರ ಆಗುತ್ತದೆ. ವರದಿ ಬಂದ ನಂತರ ನಿರ್ದೇಶಕ ಮಹೇಶ್ ಆಗಮಿಸಿ ವರದಿಯಲ್ಲಿ ಉಲ್ಲೇಖವಾಗಿರುವಂತೆ ಏನೇನು ಕ್ರಮ ಕೈಗೊಳ್ಳಬೇಕು ಎಂದು ತಿಳಿಸುತ್ತಾರೆ. ನೀರು ಇದ್ದಾಗಲೇ ಕೆರೆ ಏರಿಗೆ ಪಿಚ್ಚಿಂಗ್ ಕಟ್ಟಲು ಬಳಸುವ ತಂತ್ರಜ್ಞಾನ ಬಳಸಿ, ಕೆರೆ ರಕ್ಷಿಸುವಂತೆ ಮನವಿ ಮಾಡಲಾಗಿದೆ. ಕೆರೆ ನೀರನ್ನು ಹೊರ ಹಾಕಿ ದುರಸ್ತಿ ಮಾಡುವುದು ಸರಿಯಲ್ಲ. ಕೆರೆಯೂ ಉಳಿಯಬೇಕು, ನೀರನ್ನೂ ಉಳಿಸಬೇಕು ಎಂಬುದು ನಮ್ಮ ಆಶಯವಾಗಿದೆ.

– ಪ್ರೊ.ಕೆ.ಎಂ.ಜಯರಾಮಯ್ಯ,
ಕುಕ್ಕರಹಳ್ಳಿ ಕೆರೆ ಸಂರಕ್ಷಣಾ ಸಮಿತಿ



ಕೆರೆ ಏರಿಯಿಂದ ನೀರು ಜಿನುಗುತ್ತಿರುವ ಸ್ಥಳ ಪರಿಶೀಲಿಸುತ್ತಿರುವುದು



ಎಲೆ ತೋಟದ ಬಳಿ ಬಾಯ್ತೆರೆದ ಮೊಸಳೆ ಪ್ರತ್ಯಕ್ಷ

ಮೈಸೂರು,ಅ.29(ಎಂಟಿವೈ)– ಮೈಸೂರಿನ ರಾಮಾನುಜ ರಸ್ತೆಯ 9ನೇ ಕ್ರಾಸ್‌ಗೆ ಹೊಂದಿಕೊಂಡಂತಿರುವ ಎಲೆ ತೋಟದ ರಸ್ತೆಯಲ್ಲಿ ಬೃಹತ್ ಗಾತ್ರದ ಮೊಸಳೆ ಬಾಯ್ತೆರೆದು ಮಲಗಿ, ಸ್ಥಳೀಯರ ನಿದ್ದೆಗೆಡಿಸಿದೆ. ಕಳೆದ ಕೆಲವು ದಿನಗಳಿಂದ ಪದೇ ಪದೆ ಕಾಣಿಸಿ ಕೊಳ್ಳುತ್ತಿರುವ ಈ ಮೊಸಳೆ ಅರಣ್ಯ ಇಲಾಖೆ ಸಿಬ್ಬಂದಿಗೆ ಚಳ್ಳೆಹಣ್ಣು ತಿನ್ನಿಸುತ್ತಲೇ ಇದ್ದು, ಸ್ಥಳೀಯರಲ್ಲಿ ಆತಂಕ ಮನೆ ಮಾಡಿದೆ. ಎಲೆ ತೋಟದ ಬಳಿಯಿರುವ ದೊಡ್ಡ ಮೋರಿಯಲ್ಲಿ ಅ.15ರಂದು ಕಾಣಿಸಿಕೊಂಡಿದ್ದ ಈ ಬೃಹತ್ ಗಾತ್ರದ ಮೊಸಳೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿಯಲು ಪ್ರಯತ್ನಿಸಿದ್ದರು.

▶ 6ನೇ ಪುಟಕ್ಕೆ



ಅಶೋಕ ರಸ್ತೆ, ಮೈಸೂರು. ಫೋ: 0821–2521926,
ದೇವಸ್ಥಾನದ ರಸ್ತೆ ವಿ.ವಿ.ಮೊಹಲ್ಲಾ, ಮೈಸೂರು.
ಫೋ: 0821–2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು,
ನಂಜನಗೂಡು. ಫೋ: 08221–200926

SDJ GOLD

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.

ಒಂದು ಗ್ರಾಂ ಚಿನ್ನಕ್ಕೆ 5500

8884304444



ಪುನೀತ್ ಪ್ರಥಮ ಪುಣ್ಯಸ್ಮರಣೆ: ಸಮಾಧಿ ಸ್ಥಳದಲ್ಲಿ ಕುಟುಂಬದಿಂದ ವಿಶೇಷ ಪೂಜಾ ಕಾರ್ಯಕ್ರಮ

●ದಿನವಿಡೀ ಅಭಿಮಾನಿಗಳಿಂದ ನೆಚ್ಚಿನ ನಟನಿಗೆ ನಮನ ●ನೂರಾರು ಗಾಯಕರಿಂದ ಸ್ವರ ಶ್ರದ್ಧಾಂಜಲಿ

ಬೆಂಗಳೂರು, ಅ.29–ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಮ್ಮನ್ನಗಲಿ ಇಂದಿಗೆ ಒಂದು ವರ್ಷ. ಪ್ರಥಮ ಪುಣ್ಯಸ್ಮರಣೆ ದಿನವಾದ ಇಂದು ಅವರ ಸಮಾಧಿ ಇರುವ ಕಂಠೀರವ ಸ್ಟುಡಿಯೋದಲ್ಲಿ ಅಭಿಮಾನಿಗಳು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಪುನೀತ್ ಅವರ ಕುಟುಂಬ ವರ್ಗದವರು ಬೆಳಗ್ಗೆ 9 ಗಂಟೆ ಸುಮಾರಿಗೆ ಸಮಾಧಿಗೆ ಆಗಮಿಸಿ ಪೂಜೆ ಸಲ್ಲಿಸಿದರು.

ಅಪ್ಪು ಪ್ರಥಮ ಪುಣ್ಯ ಸ್ಮರಣೆಯ ಅಂಗವಾಗಿ ನಿನ್ನೆ ರಾತ್ರಿಯಿಂದಲೇ ಕಲಾವಿದರು ಗೀತ ನಮನ ಕಾರ್ಯಕ್ರಮವನ್ನು ಆರಂಭಿಸಿದ್ದು, 24 ಗಂಟೆ ಕಾಲ ಹಲವಾರು ಕಲಾವಿದರು ಪುನೀತ್ ರಾಜ್‌ಕುಮಾರ್ ಅವರ ಗೀತೆಗಳನ್ನು ಹಾಡುವ ಮೂಲಕ ನಮನ ಸಲ್ಲಿಸಿದರು. ಶಿವರಾಜ್ ಕುಮಾರ್ ಅವರೂ ಕೂಡ ಒಂದು ಗೀತೆಯನ್ನು ಹಾಡಿ, ಸಹೋದರನಿಗೆ ನಮನ ಸಲ್ಲಿಸಿದರು. ಗೀತ ನಮನ ಕಾರ್ಯಕ್ರಮಕ್ಕೆ ನಿನ್ನೆ ರಾತ್ರಿ ಆಗಮಿಸಿದ್ದ ಪುನೀತ್ ಪತ್ನಿ ಅಶ್ವಿನಿ ಭಾವುಕರಾದರು. ಕುಟುಂಬ ಸಮೇತ ಕಂಠೀರವ ಸ್ಟುಡಿಯೋಗೆ ಆಗಮಿಸಿದ್ದ ಅಶ್ವಿನಿ ಅವರಿಗೆ ಅಪ್ಪು ಅಭಿಮಾನಿಗಳು ಆಳೆತ್ತರದ ಹಾರ ಹಾಕುವ ಮೂಲಕ ಅಭಿಮಾನ ಮೆರೆದರು. ಈ ವೇಳೆಯೂ ಅಶ್ವಿನಿ ಪತಿಯನ್ನು ನೆನೆದು ಭಾವುಕರಾದರು.

ನಿನ್ನೆ ರಾತ್ರಿಯಿಂದಲೇ ಅಪ್ಪು ಅಭಿಮಾನಿಗಳು ಕಂಠೀರವ ಸ್ಟುಡಿಯೋಗೆ ಆಗಮಿಸಿ ಪುನೀತ್ ರಾಜ್‌ಕುಮಾರ್ ಅವರಿಗೆ ಗೌರವ ಸಲ್ಲಿಸಲಾರಂಭಿಸಿದರು. ಇಂದು ಸಂಜೆಯಾದರೂ ಸಾವಿರಾರು ಅಭಿಮಾನಿಗಳ ದಂಡು ಸಾಲಿನಲ್ಲಿ ನಿಂತಿದ್ದು ಕಂಡು ಬಂತು. ಕಂಠೀರವ ಸ್ಟುಡಿಯೋ ರಸ್ತೆಯಲ್ಲಿ ಪುನೀತ್ ಅವರ ಕಟೌಟ್‌ಗಳನ್ನು ಅಳವಡಿಸಲಾಗಿತ್ತು. ಅಲ್ಲದೇ ಅಲ್ಲಲ್ಲಿ ಡಾ. ರಾಜ್‌ಕುಮಾರ್ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ಅವರ ಕಟೌಟ್‌ಗಳನ್ನೂ ಕೂಡ ಹಾಕಲಾಗಿತ್ತು. ಸ್ಟುಡಿಯೋಗೆ ಆಗಮಿಸಿದ್ದ ಅಭಿಮಾನಿಗಳಿಗೆ

▶ 6ನೇ ಪುಟಕ್ಕೆ

ಬೇಕಾಗಿದ್ದಾರೆ

ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.

10,000/- Basic Salary
+ 10,000/- Incentive


8884171888

ಮೈಸೂರು ವಿಮಾನ ನಿಲ್ದಾಣದಿಂದ ಪ್ರಯಾಣಿಸುವವರ ಸಂಖ್ಯೆ ದ್ವಿಗುಣ

ತ್ವರಿತ ಪ್ರಯಾಣಕ್ಕೆ ಉದ್ಯಮಿಗಳು, ವೈದ್ಯರು, ಪ್ರವಾಸಿಗರು, ಗಣ್ಯರ ಮೊದಲ ಆಯ್ಕೆ ವಿಮಾನ ಯಾನ

ಕಳೆದ, ಪ್ರಸಕ್ತ ವರ್ಷ ಮೈಸೂರಿಂದ ಪಯಣಿಸಿದ ಪ್ರಯಾಣಿಕರ ವಿವರ

ತಿಂಗಳು	ವರ್ಷ	ಪ್ರಯಾಣಿಕರ ಸಂ.	ತಿಂಗಳು	ವರ್ಷ	ಪ್ರಯಾಣಿಕರ ಸಂ.
ಏಪ್ರಿಲ್	2021	9,281	ಏಪ್ರಿಲ್	2022	15,017
ಮೇ	2021	1951	ಮೇ	2022	17,045
ಜೂನ್	2021	2988	ಜೂನ್	2022	16,349
ಜುಲೈ	2021	7060	ಜುಲೈ	2022	23,199
ಆಗಸ್ಟ್	2021	8474	ಆಗಸ್ಟ್	2022	16,181
ಸೆಪ್ಟೆಂಬರ್	2021	8330	ಸೆಪ್ಟೆಂಬರ್		16,539



ಮೈಸೂರು, ಅ. 29(ಆರ್‌ಕೆ)– ಕೆಲ ವರ್ಷದ ಹಿಂದೆ ತಿಂಗಳಿಗೆ ಒಂದೋ ಎರಡೋ ವಿಮಾನಗಳು ಹಾರಾಟ ನಡೆಸುತ್ತಿದ್ದ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಈಗ ಪ್ರತಿನಿತ್ಯ ಸಾಕಷ್ಟು ಸಂಖ್ಯೆಯಲ್ಲಿ ಜನರು ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾರೆ.

ಮಾಹಿತಿ ತಂತ್ರಜ್ಞಾನ ಮತ್ತು ಬಯೋ ಟೆಕ್ನಾಲಜಿ (ಐಟಿ–ಬಿಟಿ) ಕ್ಷೇತ್ರದಲ್ಲಿ ಮಹತ್ತರ ಪ್ರಗತಿ, ಕೈಗಾರಿಕೋದ್ಯಮ ವೇಗವಾಗಿ ಬೆಳೆಯುತ್ತಿದೆ. ಹಾಗಾಗಿ ಉದ್ದಿಮೆದಾರರು ಕಡಿಮೆ ಅವಧಿಯಲ್ಲಿ ಸಂಚರಿಸಬಹುದಾದ ವಿಮಾನ ಪ್ರಯಾಣವನ್ನು ಆಯ್ಕೆ ಮಾಡಿಕೊಳ್ಳುತ್ತಿರುವುದರಿಂದ ಮೈಸೂರು ವಿಮಾನ ನಿಲ್ದಾಣದಿಂದ ಪ್ರಯಾಣಿಸುವವರ ಸಂಖ್ಯೆ ಕಳೆದ ವರ್ಷಕ್ಕೆ ಹೋಲಿಸಿದರೆ ದ್ವಿಗುಣಗೊಂಡಿದೆ. ಕರ್ನಾಟಕ ರಾಜ್ಯದಲ್ಲಿರುವ 8 ವಿಮಾನ ನಿಲ್ದಾಣಗಳ ಪೈಕಿ ಮೈಸೂರು, ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಮಂಗಳೂರು, ಹುಬ್ಬಳ್ಳಿ ಮತ್ತು ಬೀದರ್ ವಿಮಾನ ನಿಲ್ದಾಣಗಳಲ್ಲಿ ಮಾತ್ರ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ ಎಂದು ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರ (ಎಎಐ)ವು ಮಾಹಿತಿ ನೀಡಿದೆ. 2021ರ ಆಗಸ್ಟ್ ತಿಂಗಳಲ್ಲಿ 8,474 ಮಂದಿ ಮೈಸೂರು ವಿಮಾನ ನಿಲ್ದಾಣದಿಂದ ವಿವಿಧ ನಗರಗಳಿಗೆ ಪ್ರಯಾಣ ಮಾಡಿದ್ದರು. ಆದರೆ ಈ ವರ್ಷ ಆಗಸ್ಟ್ ತಿಂಗಳಲ್ಲಿ 16,181 ಮಂದಿ ವಿಮಾನದಲ್ಲಿ ಪ್ರಯಾಣಿಸಿದ್ದಾರೆ ಎಂದು ಪ್ರಾಧಿಕಾರ ತಿಳಿಸಿದೆ.

2022ರ ಏಪ್ರಿಲ್‌ನಲ್ಲಿ 15,017 ಪ್ರಯಾಣಿಕರು ಪ್ರಯಾಣಿಸಿದ್ದರೆ, 2021ರ ಏಪ್ರಿಲ್‌ನಲ್ಲಿ ಕೇವಲ 9,281 ಮಂದಿ ಪ್ರಯಾಣಿಸಿದ್ದರು. 2021ರ ಮೇನಲ್ಲಿ ಕೇವಲ 1,951 ಮಂದಿ ಸಂಚರಿಸಿದ್ದರೆ, ಪ್ರಸಕ್ತ ಸಾಲಿನ ಮೇ ತಿಂಗಳಲ್ಲಿ 17,045 ಮಂದಿ ಮೈಸೂರು ವಿಮಾನ ನಿಲ್ದಾಣದಿಂದ ಪ್ರಯಾಣಿಸಿದ್ದಾರೆ.

2021ರ ಜೂನ್‌ನಲ್ಲಿ ಕೇವಲ 2,988 ಮಂದಿ ಇದ್ದ ಪ್ರಯಾಣಿಕರ ಸಂಖ್ಯೆ ಪ್ರಸಕ್ತ ಸಾಲಿನ ಜೂನ್‌ನಲ್ಲಿ 16,349ಕ್ಕೇರಿದೆ.

▶ 8ನೇ ಪುಟಕ್ಕೆ

ನಾಳೆಯಿಂದ ಮೈಸೂರು–ಕೊಚ್ಚಿನ್ ವಿಮಾನ ಸ್ಥಗಿತ

ಮೈಸೂರು, ಅ.29(ಆರ್‌ಕೆ)–ಮೈಸೂರು–ಕೊಚ್ಚಿನ್ ವಿಮಾನ ಅಕ್ಟೋಬರ್ 31 ರಿಂದ ಸ್ಥಗಿತಗೊಳ್ಳಲಿದೆ.

ಪ್ರಯಾಣಿಕರ ಕೊರತೆ ಹಿನ್ನೆಲೆಯಲ್ಲಿ ನಷ್ಟ ಉಂಟಾಗುತ್ತಿರುವುದರಿಂದ ಮೈಸೂರಿಂದ ಕೊಚ್ಚಿನ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಡುವೆ ಸಂಚರಿಸುತ್ತಿದ್ದ ವಿಮಾನವನ್ನು ಸೋಮವಾರದಿಂದ ಸ್ಥಗಿತಗೊಳಿಸಲು ಏರ್ ಅಲಯನ್ಸ್ ಸಂಸ್ಥೆಯು ನಿರ್ಧರಿಸಿದೆ. ಅಕ್ಟೋಬರ್ 30ರವರೆಗೆ ಬುಕ್ಕಿಂಗ್ ಆಗಿರುವ ಟಿಕೆಟ್‌ಗಳನ್ನು ಮಾತ್ರ ಮಾನ್ಯ ಮಾಡಿ, ಅಕ್ಟೋಬರ್ 31ರಿಂದಾಚೆಗೆ ಬುಕ್ಕಿಂಗ್ ಆಗಿರುವ ಏರ್ ಟಿಕೆಟ್‌ಗಳನ್ನು ರದ್ದುಪಡಿಸಲಾಗುವುದು.

ಈ ಕುರಿತು ಮಾಹಿತಿ ನೀಡಿರುವ ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಆರ್.ಮಂಜುನಾಥ್ ಅವರು, ಏರ್ ಅಲಯನ್ಸ್ ಸಂಸ್ಥೆಯು ಬೆಂಗಳೂರಿನಿಂದ ಮೈಸೂರು ಮಾರ್ಗ ಕೊಚ್ಚಿನ್‌ಗೆ ವಿಮಾನ ಹಾರಾಟ ಮಾಡುತ್ತಿದೆ. ಆದರೆ ಮೈಸೂರು–ಕೊಚ್ಚಿನ್ ನಡುವೆ ಅಗತ್ಯವಿರುವಷ್ಟು ಪ್ರಯಾಣಿಕರು ಸಂಚರಿಸದಿರುವುದರಿಂದ ಈ ಮಾರ್ಗ ವಿಮಾನ ಹಾರಾಟವನ್ನು ಸಂಸ್ಥೆ ರದ್ದು ಮಾಡುತ್ತಿದೆ ಎಂದರು. ಆದರೆ ಬೆಂಗಳೂರಿನಿಂದ ನೇರವಾಗಿ ಕೊಚ್ಚಿನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಿಮಾನ ಹಾರಾಟ ಮುಂದುವರಿಯಲಿದೆ. ಮಾರ್ಗ ಮಧ್ಯೆ ಮೈಸೂರು ವಿಮಾನ ನಿಲ್ದಾಣದಲ್ಲಿ ಏರ್ ಅಲಯನ್ಸ್ ಫ್ಲೈಟ್ ಲ್ಯಾಂಡಿಂಗ್ ಮತ್ತು ಟೇಕ್ ಆಫ್ ಆಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ಮೈಸೂರಿಂದ ಬೆಂಗಳೂರಿಗೂ ಈ ವಿಮಾನಕ್ಕೆ ಆಸನಗಳು ಭರ್ತಿಯಾಗುವುದಿಲ್ಲವಾದ್ದರಿಂದ ಏರ್ ಅಲಯನ್ಸ್ ವಿಮಾನ ಮೈಸೂರಲ್ಲಿ ಇಳಿಯದೇ ಅ.31ರಿಂದ ಬೆಂಗಳೂರು–ಕೊಚ್ಚಿನ್ ನಗರಗಳ ನಡುವೆ ಮಾತ್ರ ಹಾರಾಟ ಮಾಡಲಿದೆ ಎಂದಿರುವ ಮಂಜುನಾಥ್, ಮೈಸೂರು–ಕೊಚ್ಚಿನ್ ನಗರಗಳ ನಡುವೆ ಸೇವೆ ಒದಗಿಸಲು ಸಂಸದ ಪ್ರತಾಪ್ ಸಿಂಹ ಅವರು ಇನ್ನಿತರ ವಿಮಾನ ಸಂಸ್ಥೆಗಳೊಂದಿಗೆ ಸಂಪರ್ಕ ಸಾಧಿಸಿ ಪ್ರಯತ್ನಿಸುತ್ತಿದ್ದಾರೆ ಎಂದರು.



ಬೇರೊಬ್ಬರ ಪತ್ನಿಗೆ ಮೆಸೇಜ್ ಮಾಡಿದ ಟೈಲರ್ ಹತ್ಯೆ: ಐವರ ಬಂಧನ

ಚನ್ನರಾಯಪಟ್ಟಣ,ಅ.29–ಪತ್ನಿಗೆ ಮೆಸೇಜ್ ಮಾಡಿದನೆಂಬ ಕಾರಣಕ್ಕಾಗಿ ಟೈಲರ್‌ವೊಬ್ಬನನ್ನು ಹತ್ಯೆ ಮಾಡಿದ ಪ್ರಕರಣದಲ್ಲಿ ಗೃಹಿಣಿಯ ಪತಿ ಸೇರಿ ಐವರನ್ನು ಚನ್ನರಾಯಪಟ್ಟಣ ಟೌನ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ತಾಲೂಕಿನ ಜನಿವಾರ ಗ್ರಾಮದ ಭರತ್, ಅಭಿಷೇಕ್, ಚಿರಂಜೀವಿ, ಕುಮಾರ್ ಮತ್ತು ಅಭಿ ಬಂಧಿತರಾಗಿದ್ದು, ತಾಲೂಕಿನ ಊಪಿನಹಳ್ಳಿ ಗ್ರಾಮದವನಾಗಿದ್ದು, ಚನ್ನರಾಯಪಟ್ಟಣದ ರೇಣುಕಾಂಬ ರಸ್ತೆಯ ಎಂ.ಜಿ.ಟೈಲರ್ಸ್ ಅಂಗಡಿ ಮಾಲೀಕ ಗಂಗಾಧರ(39) ಕೊಲೆಯಾದವನು.

ವಿವರ: ಭರತ್‌ನ ಪತ್ನಿಗೆ ಟೈಲರ್ ಗಂಗಾಧರ ಮೆಸೇಜ್ ಮಾಡುತ್ತಿದ್ದ ಎಂಬ ವಿಚಾರವಾಗಿ ಅವರಿಬ್ಬರ ನಡುವೆ ಒಮ್ಮೆ ಗಲಾಟೆ ನಡೆದಿತ್ತಂತೆ. ಅ.13ರಂದು ಬೆಳಗ್ಗೆ ಗಂಗಾಧರ್ ತನ್ನ ಅಂಗಡಿಯಲ್ಲಿದ್ದಾಗ ಆತನನ್ನು ಭರತ್ ಮತ್ತು ನಾಲ್ವರು ಸ್ನೇಹಿತರು ಎಳೆದೊಯ್ದಿದ್ದಾರೆ ಎಂದು ಹೇಳಲಾಗಿದೆ. ಟೈಲರ್ ಗಂಗಾಧರ್‌ನ ಚಿಕ್ಕಮ್ಮನ ಮಗ ಕಾಂತರಾಜು ಎಂಬಾತ ಅಂದು ಬೆಳಗ್ಗೆ 11 ಗಂಟೆ ಸುಮಾರಿನಲ್ಲಿ ಗಂಗಾಧರ್‌ನ ಮೊಬೈಲ್‌ಗೆ ಕರೆ ಮಾಡಿದ್ದಾನೆ. ಆ ವೇಳೆ ಕರೆ ಸ್ವೀಕರಿಸಿದ ಬೇರೊಬ್ಬ ವ್ಯಕ್ತಿಯು 'ಗಂಗಾಧರ ನನ್ನ ಸ್ನೇಹಿತನ ಪತ್ನಿಗೆ ಮೆಸೇಜ್ ಮಾಡಿದ್ದಾನೆ. ಅವನನ್ನು ನಾವು ಜನಿವಾರ ಗ್ರಾಮದ ಬಳಿ ಕರೆದುಕೊಂಡು ಬಂದಿದ್ದೇವೆ' ಎಂದು ತಿಳಿಸಿದ್ದಾನೆ.

ತಕ್ಷಣವೇ ಕಾಂತರಾಜು, ತನ್ನ ಸ್ನೇಹಿತ ಚೇತನ್ ಜೊತೆಗೂಡಿ ಬೈಕ್‌ನಲ್ಲಿ ಶನಿವಾರ ಗ್ರಾಮದೆಡೆಗೆ ತೆರಳುತ್ತಿದ್ದಾಗ ಗ್ರಾಮದ ಬಳಿ ಇರುವ ರೈಲ್ವೇ ಟ್ರ್ಯಾಕ್ ಬಳಿ ಭರತ್ ಮತ್ತು ಆತನ ಸ್ನೇಹಿತರು ಗಂಗಾಧರ್ ಮೇಲೆ ದೊಣ್ಣೆಗಳಿಂದ ಹಲ್ಲೆ ನಡೆಸುತ್ತಿದ್ದು, ಕಾಂತರಾಜು ಮತ್ತು ಚೇತನ್‌ನನ್ನು ಕಂಡು ಪರಾರಿಯಾಗಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಗಂಗಾಧರ್‌ನನ್ನು ಚನ್ನರಾಯಪಟ್ಟಣದ ಖಾಸಗಿ ಆಸ್ಪತ್ರೆಗೆ ಕೊಂಡೊಯ್ಯಲಾಯಿತಾದರೂ, ಅಷ್ಟರಲ್ಲಿ ಆತ ಮೃತಪಟ್ಟಿದ್ದ. ಈ ಸಂಬಂಧ ಭರತ್, ಆತನ ಪತ್ನಿ ಹಾಗೂ ಸ್ನೇಹಿತರ ವಿರುದ್ಧ ಪ್ರಕರಣ ದಾಖಲಾಗಿತ್ತು. ಚನ್ನರಾಯಪಟ್ಟಣ ಟೌನ್ ಪೊಲೀಸರು ಇಂದು ಐವರನ್ನು ಬಂಧಿಸಿದ್ದಾರೆ.

ಅರಣ್ಯ ಇಲಾಖೆ ವಸತಿಗೃಹದ ಹಿಂದೆ ಸಂಗ್ರಹಿಸಿದ್ದ ರೈಲ್ವೆ ಕಂಬಿ ಕಳವು

● ಆರು ಕಂಬಿಗಳು ಪತ್ತೆ ● ಪೊಲೀಸರಿಗೆ ದೂರು ಸಲ್ಲಿಕೆ

ಹುಣಸೂರು,ಅ.29–ಅರಣ್ಯ ಇಲಾಖೆ ವಸತಿಗೃಹದ ಹಿಂಭಾಗ ಸಂಗ್ರಹಿಸಿಟ್ಟಿದ್ದ ಆನೆ ತಡೆ ರೈಲ್ವೆ ಕಂಬಿಗಳನ್ನು ಕಳವು ಮಾಡಿರುವ ಘಟನೆ ಬೆಳಕಿಗೆ ಬಂದಿದ್ದು, ಅರಣ್ಯ ಸಿಬ್ಬಂದಿ 6 ರೈಲ್ವೆ ಕಂಬಿಗಳನ್ನು ವಶಪಡಿಸಿಕೊಂಡು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಹುಣಸೂರು ವನ್ಯಜೀವಿ ವಲಯ ಕಚುವನಹಳ್ಳಿ ಶಾಖೆಯ ಗಾಡಿಪಾಳ್ಯ ಗಸ್ತಿನ ಅರಣ್ಯ ರಕ್ಷಕ ಕೃಷ್ಣ ಮಾದರ್ (24) ಹಾಗೂ ಇನ್ನಿತರ ಸಿಬ್ಬಂದಿ ಅ.27ರಂದು ಗಸ್ತಿನಲ್ಲಿರುವ ವೇಳೆ ಬಾತ್ಮಿದಾರರು ನೀಡಿದ ಖಚಿತ ಮಾಹಿತಿ ಮೇರೆಗೆ ಕಡೇಮನುಗನಹಳ್ಳಿ ಅರಣ್ಯ ವ್ಯಾಪ್ತಿಯ ಹೊನ್ನೆಮರದ ಗೇಟ್‌ನಲ್ಲಿ ವಾಹನ ತಪಾಸಣೆ ಮಾಡುತ್ತಿದ್ದ ವೇಳೆ ಆಟೋ (ಕೆಎ 12–5099)ದಲ್ಲಿ 6 ರೈಲ್ವೆ ಕಂಬಿಗಳನ್ನು ಸಾಗಿಸುತ್ತಿರುವುದು ಪತ್ತೆಯಾಗಿದೆ. ಅದರ ಚಾಲಕ ಹುಣಸೂರು ಟೌನ್ ಶಬ್ಬೀರ್‌ನಗರ ನಿವಾಸಿ ಅಲ್ತಾಫ್‌ಪಾಷ(42) ಎಂಬಾತನನ್ನು ವಿಚಾರಣೆಗೊಳಪಡಿಸಿದಾಗ, ಆತ ತಾನು ಗುಜರಿ ವ್ಯಾಪಾರಿಯಾಗಿದ್ದು, ತನಗೆ ಯಾರೋ ವ್ಯಕ್ತಿಗಳು ಈ ಕಂಬಿಗಳನ್ನು ಮಾರಾಟ ಮಾಡಿದ್ದಾಗಿ ತಿಳಿಸಿದ್ದಾನೆ. ಈ ಹಿನ್ನೆಲೆಯಲ್ಲಿ ರೈಲ್ವೆ ಕಂಬಿಗಳೊಂದಿಗೆ ಆತನನ್ನು ವಶಕ್ಕೆ ಪಡೆದ ಅರಣ್ಯ ಸಿಬ್ಬಂದಿ ಈ ಸಂಬಂಧ ಅಲ್ತಾಫ್ ಪಾಷ ಮತ್ತು ಆತನಿಗೆ ಕಂಬಿಗಳನ್ನು ಮಾರಾಟ ಮಾಡಿರುವ ಅಪರಿಚಿತ ವ್ಯಕ್ತಿಗಳ ವಿರುದ್ಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಬದುಕಿರುವ ಗುತ್ತಿಗೆದಾರನ ಡೆತ್ ಸರ್ಟಿಫಿಕೇಟ್ ವಿತರಣೆ: ವಂಚನೆ ಸಂಚಿನ ಬಗ್ಗೆ ಪೊಲೀಸರಿಗೆ ದೂರು

ಮೈಸೂರು, ಅ. 29– ಜೀವಂತವಿರುವ ಗುತ್ತಿಗೆದಾರರೊಬ್ಬರ ಹೆಸರಿನಲ್ಲಿ ಮರಣ ಪ್ರಮಾಣಪತ್ರ ಪಡೆದಿರುವ ಬಗ್ಗೆ ದೂರು ದಾಖಲಾಗಿದ್ದು, ಆಸ್ತಿ ಕಬಳಿಸುವ ಉದ್ದೇಶದಿಂದ ತನ್ನ ಹೆಸರಿನಲ್ಲಿ ಮರಣ ಪ್ರಮಾಣಪತ್ರ ಪಡೆಯಲಾಗಿದೆ ಎಂದು ಗುತ್ತಿಗೆದಾರ ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಿದ್ದಾರೆ.

ವಿವರ: ಮೂಲತಃ ಪಿರಿಯಾಪಟ್ಟಣ ತಾಲೂಕು ಕೊತ್ತವಳ್ಳಿ ಕೊಪ್ಪಲು ಗ್ರಾಮದವರಾಗಿದ್ದು, ಹಾಲಿ ಮೈಸೂರಿನ ಶ್ರೀರಾಂಪುರ 1ನೇ ಹಂತದಲ್ಲಿ ವಾಸವಿರುವ ಗುತ್ತಿಗೆದಾರ ಕೆ.ಆರ್.ಮಹೇಶ (50), ಪೊಲೀಸರಿಗೆ ದೂರು ಸಲ್ಲಿಸಿದ್ದು, ಕೊತ್ತವಳ್ಳಿ ಕೊಪ್ಪಲು ಗ್ರಾಮದ ಮುದ್ದಪ್ಪ ಮತ್ತು ನಿಂಗಮ್ಮ(ಈರಮ್ಮ) ಎಂಬುವರ ಪುತ್ರ ವೃಷಭೇಂದ್ರ ಎಂಬುವರು 2020ರ ಮೇ 9ರಂದು ಕೋವಿಡ್‌ನಿಂದಾಗಿ ಮೈಸೂರಿನ ಡಿಆರ್‌ಎಂ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಆದರೆ, ಅವರ ಪತ್ನಿ ಕೆ.ಹೆಚ್.ಸುಧಾ(50) ಮತ್ತು ಅವರ ಇಬ್ಬರು ಮಕ್ಕಳು ಸೇರಿ ಕೋವಿಡ್‌ನಿಂದ ಮೃತಪಟ್ಟಿದ್ದು ಗುತ್ತಿಗೆದಾರ ಕೆ.ಆರ್. ಮಹೇಶ ಎಂದು ತಿಳಿಸಿ ಅವರ ಹೆಸರಿನಲ್ಲಿ ಮೈಸೂರಿನ ಆಕಾಶವಾಣಿ ವೃತ್ತದಲ್ಲಿರುವ ನಗರಪಾಲಿಕೆ ವಲಯ ಕಚೇರಿ 4ರಲ್ಲಿ ಮರಣ ಪ್ರಮಾಣಪತ್ರ ಪಡೆದಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಕೆ.ಆರ್.ಮಹೇಶ ಅವರ ತಂದೆ ಹಾಗೂ ತಾಯಿ ಹೆಸರನ್ನು ಕೂಡ ಮರಣ ಪ್ರಮಾಣಪತ್ರದಲ್ಲಿ ಉಲ್ಲೇಖಿಸಲಾಗಿದ್ದು, ತಮ್ಮ ಆಸ್ತಿ ಕಬಳಿಸುವ ಉದ್ದೇಶದಿಂದ ತಮ್ಮ ಹೆಸರಿನಲ್ಲಿ ಮರಣ ಪ್ರಮಾಣಪತ್ರ ಪಡೆಯಲಾಗಿದೆ ಎಂದು ವೃಷಭೇಂದ್ರ ಅವರ ಪತ್ನಿ ಕೆ.ಹೆಚ್.ಸುಧಾ ಹಾಗೂ ಇಬ್ಬರ ಮಕ್ಕಳ ವಿರುದ್ಧ ದೂರನ್ನು ಭಾರತೀಯ ದಂಡ ಸಂಹಿತೆ 120ಬಿ, 420, 467, 468, 470, 471, 34ರಡಿ ದಾಖಲಿಸಿಕೊಂಡಿರುವ ವಿವಿಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಮೈಸೂರಿನ ಕುಂಬಾರಕೊಪ್ಪಲಿನ ಕೆಂಪೇಗೌಡ ಕ್ರೀಡಾಂಗಣದಲ್ಲಿ ದೀಪಾವಳಿ ಹಬ್ಬ ಹಾಗೂ ಶ್ರೀ ಮಲೆ ಮಹದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಕುಂಬಾರ ಕೊಪ್ಪಲು ಗ್ರಾಮಸ್ಥರು ಹಾಗೂ ಶ್ರೀ ಅಭ್ಯುದಯ ಸಂಘ ಹಾಗೂ ಗಂಧರ್ವ ಸ್ಪೋರ್ಟ್ಸ್ ಕ್ಲಬ್‌ನ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕುಂಬಾರಕೊಪ್ಪಲು ಕಬಡ್ಡಿ ಲೀಗ್ ಮ್ಯಾಟ್ ಪಂದ್ಯಾವಳಿಯಲ್ಲಿ ಆಟಗಾರರನ್ನು ಶಾಸಕ ಎಲ್.ನಾಗೇಂದ್ರ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಜಿ.ಡಿ.ಹರೀಶ್‌ಗೌಡ ಸನ್ಮಾನಿಸಿದರು. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ಅನಿಲ್‌ಕುಮಾರ್, ಚೇತನ್, ಟೆಂಟ್ ರವಿ, ಭೈರಪ್ಪ, ಸಂಜೀವಿನಿ ಕುಮಾರ್, ಅಶ್ವಥ್‌ಗೌಡ, ಮಹೇಶ್, ಜಿಪಂ ಮಾಜಿ ಸದಸ್ಯ ನಾಗನಹಳ್ಳಿ ದಿನೇಶ್ ಇದ್ದಾರೆ

ಇನ್‌ಸ್ಪೆಕ್ಟರ್ ನಂದೀಶ್ ಸಾವಿನ ಸಂಬಂಧ ಉನ್ನತ ತನಿಖೆಗೆ ಕುರುಬರ ಸಂಘ ಆಗ್ರಹ

ಮೈಸೂರು,ಅ.29(ಪಿಎಂ)–ಬೆಂಗಳೂರು ಕೆಆರ್‌ಪುರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ನಂದೀಶ್ ಹೃದಯಾಘಾತದಿಂದ ಸಾವನ್ನಪ್ಪಲು ಕಾರಣವಾದ ಅಂಶಗಳು ಹಾಗೂ ಅವರ ವರ್ಗಾವಣೆಗೆ ನೈಜ ಕಾರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಕರ್ನಾಟಕ ಪ್ರದೇಶ ಕುರುಬರ ಸಂಘ ಆಗ್ರಹಿಸಿದೆ.



ಬಿ.ಸುಬ್ರಹ್ಮಣ್ಯ

ಈ ಸಂಬಂಧ ಪ್ರಕಟಣೆ ನೀಡಿರುವ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಇದು ಸರ್ಕಾರದಿಂದಲೇ ಆಗಿರುವ ಕಗ್ಗೊಲೆಯೇ? ಕಾಸಿಗಾಗಿ ಸರ್ಕಾರ ಹುದ್ದೆ ಕೊಡುತ್ತಿದೆಯೇ? ಇದೇ ಹಿನ್ನೆಲೆಯಲ್ಲಿ ಈ ಸಾವು ಸಂಭವಿಸಿದೆಯೇ? ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ.

ನಂದೀಶ್ ಅವರ ಹೃದಯಾಘಾತಕ್ಕೆ ಕಾರಣವೇನು? ಅವರು ಹೃದಯಾಘಾತಕ್ಕೆ ಒಳಗಾಗುವಷ್ಟು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರೆ? ಎಂಬ ಬಗ್ಗೆ ಸತ್ಯಗಳು ಹೊರಬರಬೇಕು. ಅವಧಿ ಮೀರಿ ವಹಿವಾಟು ನಡೆಸುತ್ತಿದ್ದ ಪಬ್ ವಿರುದ್ಧ ಕ್ರಮ ಕೈಗೊಳ್ಳದ ಆರೋಪದಡಿ ಅವರನ್ನು ಅಮಾನತು ಮಾಡಲಾಗಿತ್ತು. ಬೆಂಗಳೂರು ನಗರದಲ್ಲಿ ಕೆಲವು ಪಬ್ ಅನಧಿಕೃತವಾಗಿ ನಡೆಯಲು ಪೊಲೀಸ್ ಇಲಾಖೆಯವರ ಸಹಕಾರವೂ ಇದೆ. ಇದಕ್ಕೆ ಪ್ರಮುಖ ರಾಜಕಾರಣಿಗಳ ಕುಮ್ಮಕ್ಕು ಇದೆ ಎಂದು ದೂರಿದ್ದಾರೆ.

ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆಗೆ 40ರಿಂದ 80 ಲಕ್ಷ ರೂ. ಕೊಡಬೇಕಿದೆ ಎನ್ನಲಾಗುತ್ತಿದೆ. ಪ್ರತಿಪಕ್ಷ ಮಾತ್ರವಲ್ಲದೆ, ಆಡಳಿತ ಪಕ್ಷದ ನಾಯಕರೂ ಇದಕ್ಕೆ ಪುಷ್ಟಿ ನೀಡುವಂತೆ ಮಾತನಾಡಿದ್ದಾರೆ. ಈ ಪ್ರಕರಣದಲ್ಲಿ ನಂದೀಶ್ ಅವರಿದ್ದ ಠಾಣೆಗೆ ಬೇರೊಬ್ಬರನ್ನು ವರ್ಗಾಯಿಸುವ ಉದ್ದೇಶವಿತ್ತು. ಹಾಗಾಗಿ ಪಬ್ ನೆಪವೊಡ್ಡಿ ಅವರನ್ನು ಅಮಾನತು ಮಾಡಲಾಯಿತು ಎಂಬ ಅನುಮಾನ ವ್ಯಕ್ತವಾಗುತ್ತಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಉನ್ನತ ಮಟ್ಟದ ತನಿಖೆ ಆಗಲೇಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಸರ್ಕಾರಿ ಶಾಲೆಗಳಿಗೆ ಆಧುನಿಕ ವ್ಯವಸ್ಥೆ

ಮಲ್ಲೇಶ್ವರಂ ಮಾದರಿ ಅನುಸರಣೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ



ಬೆಂಗಳೂರು,ಅ.29(ಕೆಎಂಶಿ)–ಆಧುನಿಕ ವ್ಯವಸ್ಥೆಗಳನ್ನು ಕಲ್ಪಿಸುವ ಮೂಲಕ ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಮಲ್ಲೇಶ್ವರಂ ಮಾದರಿಯನ್ನು ಅನುಸರಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಲ್ಲೇಶ್ವರಂ 18ನೇ ಕ್ರಾಸ್ ಬಳಿ ಇರುವ ಸರ್ಕಾರ ಪ್ರೌಢ ಶಾಲೆಯಲ್ಲಿ ಆಯೋಜಿಸಿದ್ದ ಮಲ್ಲೇಶ್ವರಂ ಸ್ಕೂಲ್ ಮಾಡೆಲ್ ಹಾಗೂ ಪುನೀತ್ ಸ್ಯಾಟಲೈಟ್ ವರ್ಕ್ ಸ್ಟೇಷನ್ ಉದ್ಘಾಟಿಸಿ ಮಾತನಾಡಿದರು. ಮಲ್ಲೇಶ್ವರಂ ಮಾದರಿ ಶಾಲೆಯಲ್ಲಿ ಮಕ್ಕಳೇ ತಯಾರಿಸಿರುವ ಸ್ಯಾಟಲೈಟ್ ಇಂದು ಅನಾವರಣವಾಗಿದೆ. ಪುನೀತ್ ರಾಜಕುಮಾರ್ ಅವರ ಹೆಸರಿನಲ್ಲಿ ಆಗಿದ್ದು. ಬಹಳ ಯೋಗ್ಯ ವ್ಯಕ್ತಿ ಹೆಸರಿನಲ್ಲಿ ಕೆಲಸವಾಗುತ್ತಿದೆ ಎಂದರು.

ಪುನೀತ್ ರಾಜ್‌ಕುಮಾರ್ ಅವರ ಪುಣ್ಯ ಸ್ಮರಣೆಯಂದು ಅವರಿಗೆ ಗೌರವ ಸಮರ್ಪಣೆ ಮಾಡುವ ರೀತಿಯಲ್ಲಿ ಈ ಸ್ಯಾಟಿಲೈಟ್‌ನ್ನು ಗಗನಕ್ಕೇರಿಸುವ ಕೆಲಸ ಶ್ಲಾಘನೀಯ. ಆಕಾಶದೆತ್ತರಕ್ಕೆ ಮಲ್ಲೇಶ್ವರಂ ಶಾಲೆಯ ಖ್ಯಾತಿ ಏರಲಿ ಎಂದರು. ಪುನೀತ್ ಅವರು ಸದಾ ಹೊಸ ತನ್ನು ಹುಡುಕುವ, ಪ್ರಯೋಗಶೀಲ, ಅಂತಃಕರಣವುಳ್ಳ ವ್ಯಕ್ತಿ. ಅತ್ಯಂತ ಸಣ್ಣ ವಯಸ್ಸಿನಲ್ಲೇ ಈ ಲೋಕ ಬಿಟ್ಟರೂ ಅವರು ಬದುಕಿದ ಕೆಲ ದಿನಗಳಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಭೂಮಿಯಲ್ಲಿ ಬಿಟ್ಟುಹೋಗಿದ್ದಾರೆ. ಪರೋಪಕಾರಿ ಕಾರ್ಯಗಳು, ವಿದ್ಯಾಭ್ಯಾಸ ನೀಡುವ ಸಂಸ್ಥೆ, ಅನಾಥ ಮಕ್ಕಳ ಶಕ್ತಿಧಾಮ, ಸಹಾಯ, ನಗುಮುಖದಿಂದ ಎಲ್ಲರ ದುಃಖ ದುಮ್ಮಾನಗಳನ್ನು ದೂರ ಮಾಡಿದ್ದಾರೆ. ಅವರು ನಮ್ಮ ಜೊತೆಗೆ ಎಂದಿಗೂ ಇರುತ್ತಾರೆ. ರಾಜ್ಯದ ಉದ್ದಗಲಕ್ಕೂ ಅವರ ಖ್ಯಾತಿ ಪಸರಿಸಿದೆ. ಮಲ್ಲೇಶ್ವರಂ ಶಾಲೆ ಪುನೀತ್ ಖ್ಯಾತಿಯನ್ನು ಸ್ಯಾಟಲೈಟ್ ಮೂಲಕ ಆಕಾಶದೆತ್ತರಕ್ಕೆ ಕೊಂಡೊಯ್ಯುತ್ತಾರೆ ಎಂದು ನಂಬಿದ್ದೇನೆ ಎಂದರು.

ಶಿಕ್ಷಣ ಬಹಳ ಮುಖ್ಯ. 21ನೇ ಶತಮಾನ ಜ್ಞಾನದ ಶತಮಾನ. ಜ್ಞಾನಾರ್ಜನೆ ಬಹಳ ಮುಖ್ಯವಾಗುತ್ತದೆ. ಕಲಿಯುವಾಗ ಗುಣಾತ್ಮಕ ಹಾಗೂ ನೈತಿಕ ವಿದ್ಯೆಯನ್ನು ಕಲಿಯಬೇಕು. ವಿಜ್ಞಾನ ಮತ್ತು ಗಣಿತವನ್ನು ಎಲ್ಲರೂ ಕಲಿಯಲೇಬೇಕು. ಮಕ್ಕಳು ತರ್ಕಬದ್ಧವಾಗಿ ಯೋಚಿಸಬೇಕು. ಯಾಕೆ, ಏನು, ಎಲ್ಲಿ ಹೇಗೆ ಎಂದು ಪ್ರಶ್ನಿಸಬೇಕು. ಆಗ ತರ್ಕಬದ್ಧವಾಗಿ ಯೋಚಿಸಬಹುದು. ಬಾಯಿಪಾಠದ ಅಗತ್ಯವಿರುವುದಿಲ್ಲ. ಈ ಪಂಚಪ್ರಶ್ನೆಗಳು ಮಕ್ಕಳ ಯಶಸ್ಸಿನ ಮೆಟ್ಟಿಲುಗಳು. ಕಠಿಣ ಗಣಿತವನ್ನು ನಾಲ್ಕು ಜನರಿಗೆ ಹೇಳಿಕೊಟ್ಟರೆ, ಅದನ್ನು ಮರೆಯುವ ಪ್ರಮೇಯವೇ ಇರುವುದಿಲ್ಲ. ಜ್ಞಾನ ಹಂಚಿಕೊಂಡಷ್ಟೂ ಗಟ್ಟಿಯಾದ ಜ್ಞಾನದ ಭಂಡಾರ ಉಳಿಯಲಿದೆ. ಮಕ್ಕಳನ್ನು ಕಂಡಾಗ ಭಾರತ ಹಾಗೂ ಕನ್ನಡ ನಾಡಿನ ಭವಿಷ್ಯ ಉಜ್ವಲವಾಗಿದೆ ಎಂದು ಅನ್ನಿಸುತ್ತದೆ. ಮಕ್ಕಳಲ್ಲಿ ಉತ್ಸಾಹ, ಕುತೂಹಲ ಬಹಳ ಮುಖ್ಯ ಮಕ್ಕಳಲ್ಲಿ ಕುತೂಹಲ ಹಾಗೂ ಮುಗ್ಧತೆ ಎರಡನ್ನೂ ಜೀವಂತವಾಗಿಡುವ ಶಿಕ್ಷಕ ನಂಬರ್ ಒನ್ ಗುರುವಾಗುತ್ತಾರೆ ಎಂದು ಅಭಿಪ್ರಾಯಪಟ್ಟರು. ವಿದ್ಯೆ ಶಕ್ತಿ ಮತ್ತು ಅವಕಾಶಗಳನ್ನು ನೀಡುತ್ತದೆ. ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ ವಿದ್ಯೆ ಕಲಿಸಿದ ವಿನಯವನ್ನು ಬಿಟ್ಟುಕೊಡಬಾರದು. ಇತರರಿಗಾಗಿ ಬದುಕಿದಾಗ ಸುಖ, ಶಾಂತಿ, ನೆಮ್ಮದಿಯ ಬದುಕು ನಮ್ಮದಾಗುತ್ತದೆ. ನಾಡಿನ ಭವ್ಯ ಭವಿಷ್ಯಕ್ಕೆ ತಂತ್ರಜ್ಞಾನ, ನೈತಿಕತೆ, ವಿಜ್ಞಾನ ಸಹಾಯಕ. ಶಾಲೆಗಳಲ್ಲಿ ಬಹುಪಯೋಗಿ ಸ್ಯಾಟಲೈಟ್ ನಿರ್ಮಾಣ ಮಾಡುವ ಅವಕಾಶವಿದ್ದು, ಅಗತ್ಯವಿರುವ ತರಬೇತಿ, ವಿನ್ಯಾಸಕ್ಕೆ ತಗಲುವ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಲಿದೆ ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದರು.

ಸಿ.ಎನ್.ಅಶ್ವಥ್ ನಾರಾಯಣ್ ಅವರು ಮಲ್ಲೇಶ್ವರಂ ಎಂಬ ಕುಟುಂಬದ ಮುಖ್ಯಸ್ಥನಂತೆ ಕೆಲಸ ಮಾಡುತ್ತಿದ್ದಾರೆ. ಅಂತಃಕರಣ ಎನ್ನುವುದು ಬಹಳ ಮುಖ್ಯ. ನಮಗೆ ಹುಟ್ಟಿದ ಮಕ್ಕಳು ಮಾತ್ರ ನಮ್ಮ ಮಕ್ಕಳು ಎನ್ನುವುದು ಸಂಕುಚಿತ ಭಾವನೆ. ನನ್ನ ಕ್ಷೇತ್ರದ ಎಲ್ಲಾ ಮಕ್ಕಳೂ ನನ್ನ ಮಕ್ಕಳು ಎಂದು ತಿಳಿದು, ಆ ಮಕ್ಕಳ ಭವಿಷ್ಯಕ್ಕೆ ಶಾಲೆಗಳ ಅಭಿವೃದ್ಧಿ ಮಾಡುವುದು. ಕೇವಲ ಕಟ್ಟಡಗಳು ಮಾತ್ರವಲ್ಲ ಕಲಿಕಾ ವ್ಯವಸ್ಥೆ, ಆಧುನೀಕರಣ, ಡಿಜಿಟಲೀಕರಣ, ಅಗತ್ಯವಿರುವ ವೈಫೈ, ಬ್ರಾಡ್‌ಬ್ಯಾಂಡ್ ಮುಂತಾದ ವ್ಯವಸ್ಥೆ, ಶಿಕ್ಷಕರನ್ನು ತಯಾರಿಸಿ,ಕಲಿಕೆಯಲ್ಲಿ ಆಸಕ್ತಿ ಹುಟ್ಟಿಸಿ ಮಕ್ಕಳ ಬುದ್ಧಿಶಕ್ತಿ, ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಆಗುತ್ತಿದೆ ಇಡೀ ರಾಜ್ಯಕ್ಕೇ ಈ ಶಾಲೆಯನ್ನು ಮಾದರಿಯಾಗಿಸಲಾಗುವುದು ಎಂದರು.



ಮೈಸೂರಿನ ಎನ್‌ಐಐಟಿಇ ಕಾಲೇಜು ಮೈದಾನದಲ್ಲಿ ವಿಶ್ವ ರತ್ನ ಸ್ಪೋರ್ಟ್ಸ್ ಕ್ಲಬ್‌ನಿಂದ ಆಯೋಜಿಸಿದ್ದ ಮೋದಿ ಕಪ್ ಕ್ರಿಕೆಟ್ ಪಂದ್ಯಾವಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು. ಸಂಸದ ಪ್ರತಾಪ್ ಸಿಂಹ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ರವಿಕುಮಾರ್, ಚಾಮುಂಡೇಶ್ವರಿ ಕ್ಷೇತ್ರದ ಮುಖಂಡ ಅರುಣ್‌ಕುಮಾರ್‌ಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸ್‌ಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾನಂದೀಶ್, ಮುಖಂಡರಾದ ಕೆ.ಜೆ.ರಮೇಶ್, ಸೋಮಶೇಖರ್, ಗೋಪಾಲ್‌ಗೌಡ ಇದ್ದರು.

ಅಜೀಜ್ ಸೇಠ್‌ನಗರದಲ್ಲಿ ಅಪಾಯಕ್ಕಾಗಿ ಕಾಯುತ್ತಿದೆ ಜಲ್ಲಿ ಗುಡ್ಡೆ

ಮೈಸೂರು,ಅ.29(ಆರ್‌ಕೆ)–ರಸ್ತೆ ಮೆಟ್ಲಿಂಗ್ ಕಾಮಗಾರಿಗಾಗಿ ಅಜೀಜ್ ಸೇಠ್‌ನಗರದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಬಳಿ ಸುರಿದಿರುವ ಜಲ್ಲಿಗುಡ್ಡೆಯು ಕಳೆದ 15 ದಿನಗಳಿಂದ ಅಪಾಯಕ್ಕಾಗಿ ಕಾಯುತ್ತಿದೆ.



ಪಾಲಿಕೆ 34ನೇ ವಾರ್ಡಿನ ಅಜೀಜ್ ಸೇಠ್‌ನಗರದ ಶಾಲು ಬೇಕರಿ ಬಳಿ ರಸ್ತೆ ಬದಿಯ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅಡಿ ಸುರಿದಿರುವ ಜಲ್ಲಿಗುಡ್ಡೆ ಮೇಲೆ, ಆ ಮಾರ್ಗ ನಡೆದುಕೊಂಡು ಹೋಗುವ ಶಾಲಾ ಮಕ್ಕಳು ಹತ್ತುತ್ತಾರೆ. ಮೇಲೇರುತ್ತಿದ್ದಂತೆಯೇ ಟ್ರಾನ್ಸ್‌ಫಾರ್ಮರ್‌ಗೆ ತಗುಲುವ ಸಾಧ್ಯತೆ ಇದೆ. ಜೊತೆಗೆ ಆಟವಾಡುವಾಗ ಮಕ್ಕಳು ಜಲ್ಲಿಗುಡ್ಡೆ ಮೇಲೆ ಓಡಾಡುತ್ತಾರೆ. ಆಕಸ್ಮಿಕವಾಗಿ ಟ್ರಾನ್ಸ್‌ಫಾರ್ಮರ್‌ಗೆ ತಗುಲಿದಲ್ಲಿ ಪ್ರಾಣಾಪಾಯ ಸಂಭವಿಸುವ ಸಾಧ್ಯತೆ ಇದೆ. ಕಳೆದ 15 ದಿನಗಳಿಂದ ಹೀಗೆ ಸುರಿದಿರುವ ಜಲ್ಲಿ ಕಲ್ಲನ್ನು ರಸ್ತೆ ಕಾಮಗಾರಿ ಕೈಗೊಳ್ಳದ ಕಾರಣ ಬಳಸಿಲ್ಲ. ಅಧಿಕಾರಿಗಳು, ಜನಪ್ರತಿನಿಧಿಗಳು ನಿತ್ಯ ಅದೇ ಮಾರ್ಗ ಓಡಾಡುತ್ತಿದ್ದರೂ, ಅಪಾಯಕ್ಕಾಗಿ ಕಾಯುತ್ತಿರುವ ಜಲ್ಲಿಗುಡ್ಡೆಯನ್ನು ಚದುರಿಸುವ ಗೋಜಿಗೆ ಹೋಗಿಲ್ಲ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ. ಕಾಮಗಾರಿ ಗುತ್ತಿಗೆದಾರನ ನಿರ್ಲಕ್ಷ್ಯದಿಂದಾಗಿ ಜಲ್ಲಿಗುಡ್ಡೆ ಬಲಿ ಪಡೆಯಲು ಕಾಯುತ್ತಿದೆ. ಅಪಾಯ ಸಂಭವಿಸುವ ಮುನ್ನ ಅಗತ್ಯ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ತಾತ್ಕಾಲಿಕ ವೇಳಾಪಟ್ಟಿ ಪ್ರಕಟ ಏಪ್ರಿಲ್ 1ರಿಂದ ಪರೀಕ್ಷೆ ಆರಂಭ

ಬೆಂಗಳೂರು, ಅ.29– 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ತಾತ್ಕಾಲಿಕ ವೇಳಾಪಟ್ಟಿಯನ್ನು ಎಸ್‌ಎಸ್‌ಎಲ್‌ಸಿ ಬೋರ್ಡ್ ಪ್ರಕಟ ಮಾಡಿದೆ. ಏಪ್ರಿಲ್ 1 ರಿಂದ 15 ರವರೆಗೆ ಪರೀಕ್ಷೆ ನಡೆಸಲು ದಿನಾಂಕ ನಿಗದಿ ಮಾಡಲಾಗಿದೆ.

ಎಸ್‌ಎಸ್‌ಎಲ್‌ಸಿ ಬೋರ್ಡ್ ಬಿಡುಗಡೆ ಮಾಡಿರುವ ತಾತ್ಕಾಲಿಕ ವೇಳಾಪಟ್ಟಿಗೆ ವಿದ್ಯಾರ್ಥಿಗಳು ಮತ್ತು ಪೋಷಕರು ಆಕ್ಷೇಪಣೆ ಸಲ್ಲಿಸಲು ನವೆಂಬರ್ 28ರವರೆಗೆ ಅವಕಾಶ ನೀಡಲಾಗಿದೆ.

ತಾತ್ಕಾಲಿಕ ವೇಳಾಪಟ್ಟಿ ವಿವರ:

ಏಪ್ರಿಲ್ 1– ಪ್ರಥಮ ಭಾಷೆ ವಿಷಯ, ಏಪ್ರಿಲ್ 4–ಗಣಿತ, ಏಪ್ರಿಲ್ 6– ದ್ವಿತೀಯ ಭಾಷೆ ವಿಷಯ, ಏಪ್ರಿಲ್ 10 – ವಿಜ್ಞಾನ, ಏಪ್ರಿಲ್ 12– ತೃತೀಯ ಭಾಷೆ ವಿಷಯ, ಏಪ್ರಿಲ್ 15–ಸಮಾಜ ವಿಜ್ಞಾನ ವಿಷಯ.

ಮುರುಘಾ ಶ್ರೀಗಳ ಪ್ರಕರಣ ಎಸ್‌ಜೆಎಂ ಮಾಜಿ ಕಾರ್ಯದರ್ಶಿ ಪರಮಶಿವಯ್ಯ ಬಂಧನ

ಚಿತ್ರದುರ್ಗ, ಅ.29– ಇಬ್ಬರು ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಜೈಲು ಪಾಲಾಗಿರುವ ಮುರುಘಾ ಶ್ರೀಗಳ ವಿರುದ್ಧದ ಪೋಕ್ಸೋ ಪ್ರಕರಣದ ನಾಲ್ಕನೇ ಆರೋಪಿ, ಕಳೆದ 2 ತಿಂಗಳಿಂದ ತಲೆಮರೆಸಿ ಕೊಂಡಿದ್ದ ಎಸ್‌ಜೆಎಂ ವಿದ್ಯಾಪೀಠದ ಮಾಜಿ ಕಾರ್ಯದರ್ಶಿ ಪರಮಶಿವಯ್ಯ ಅವರನ್ನು ಪೊಲೀಸರು ಕೊನೆಗೂ ಶನಿವಾರ ಬಂಧಿಸಿದ್ದಾರೆ.

ಪರಮಶಿವಯ್ಯ ಅವರನ್ನು ಇಂದು ಬಂಧಿಸಲಾಗಿದ್ದು, ತನಿಖಾ ತಂಡ ಡಿವೈಎಸ್‌ಪಿ ಕಚೇರಿಯಲ್ಲಿ ಆರೋಪಿಯ ವಿಚಾರಣೆ ನಡೆಸಿತು. ಬಳಿಕ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ಪರೀಕ್ಷೆ ನಡೆಸಿತು.

ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಸೇರಿದಂತೆ ಐವರು ಆರೋಪಿಗಳ ವಿರುದ್ಧ ಪೋಕ್ಸೊ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯಡಿ ಆಗಸ್ಟ್ 28ರಂದು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಬಂಧನ ಭೀತಿಯಿಂದ ತಲೆಮರೆಸಿ ಕೊಂಡಿದ್ದ ಪರಮಶಿವಯ್ಯ ಅವರನ್ನು ಎರಡು ತಿಂಗಳ ನಂತರ ಪೊಲೀಸರು ಬಂಧಿಸಿದ್ದಾರೆ. ನಿನ್ನೆಯಷ್ಟೇ ಮುರುಘಾ ಶ್ರೀಗಳ ವಿರುದ್ಧ 694 ಪುಟಗಳ ಆರೋಪಪಟ್ಟಿಯನ್ನು ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.10.2022 ಭಾನುವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ : ಮೂಲ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ

■ **ರೋಟರಿ ಮೈಸೂರು ಪೂರ್ವ :** ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಬೆಳಗ್ಗೆ 7ಕ್ಕೆ ಸೀರೆಯುಟ್ಟು ನಡಿಗೆ ವಾಕಥಾನ್, ಚಾಲನೆ : ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಅಧ್ಯಕ್ಷತೆ : ರೋಟರಿ ಅಧ್ಯಕ್ಷ ಎಲಿಜಬೆತ್ ಶಕುಂತಲಾ, ಬೆಳಗ್ಗೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಸ್ತನ ಕ್ಯಾನ್ಸರ್ ತಪಾಸಣಾ ಶಿಬಿರ, ಕೂದಲು ಸಂಗ್ರಹಿಸಲು ಕೇಶದಾನ ಶಿಬಿರ, ಸ್ಥಳ: ಅರಮನೆ ಉತ್ತರದ್ವಾರ.

■ **ರೋಟರಿ ಹೆರಿಟೇಜ್, ಮೈಸೂರು, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಮೈಸೂರು ಜಿಲ್ಲಾ ಘಟಕ :** ಸಮುದಾಯ ಸೇವೆ ಮಾಸಾಚರಣೆ ಪ್ರಯುಕ್ತ ರಕ್ತದಾನ ಶಿಬಿರ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಕಾಮಾಕ್ಷಿ ಆಸ್ಪತ್ರೆ ಆಡಳಿತಾಧಿಕಾರಿ ಡಾ. ಕೆ.ಆರ್. ಕಾಮತ್, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ರಾಜ್ಯಾಧ್ಯಕ್ಷ ಡಾ. ಎನ್.ಕೆ. ಶಿವಣ್ಣ, ಪೊಲೀಸ್ ಅಧೀಕ್ಷಕರಾದ ಡಾ. ಬಿ.ಟಿ. ಕವಿತಾ, ಜಯದೇವ ಹೃದ್ರೋಗ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ, ಅಧ್ಯಕ್ಷತೆ : ರೋಟರಿ ಹೆರಿಟೇಜ್ ಅಧ್ಯಕ್ಷ ಜಿ.ಎಂ. ಸುರೇಶ್, ಸ್ಥಳ: ರೋಟರಿ ಪಶ್ಚಿಮ ಶಾಲೆ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಮುಂಭಾಗ, ಸರಸ್ವತಿಪುರಂ, ಬೆಳಗ್ಗೆ 8 ರಿಂದ.

■ **ಡಾ.ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗ:** ಪುನೀತ್ ಮೊದಲನೇ ವರ್ಷದ ಸ್ಮರಣೆ ಕಾರ್ಯಕ್ರಮ, ಉದ್ಘಾಟನೆ: ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಅಧ್ಯಕ್ಷತೆ: ಬೋಗಾದಿ ಗ್ರಾಪಂ ಸದಸ್ಯ ಕೆ.ಚಂದ್ರಶೇಖರ್, ಅತಿಥಿಗಳು: ಲಯನ್ ನಾಗರಾಜ್ ವಿ.ಭೈರಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ರವಿಕುಮಾರ್, ವೃತ್ತ ಆರಕ್ಷಕ ನಿರೀಕ್ಷಕ ರವೀಂದ್ರ, ಸ್ಥಳ: ಹೋಟೆಲ್ ಹಿಲ್‌ಟಾಪ್ ಮುಂಭಾಗ, ಬೋಗಾದಿ ರಿಂಗ್ ರೋಡ್, ಬೆಳಗ್ಗೆ 10ಕ್ಕೆ.

■ **ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟ :** ಉದ್ಘಾಟನಾ ಸಮಾರಂಭ, ಬಲೆ ತೆಲಿಪಾಲೆ ಆವೃತ್ತಿ 10ರ ಮೊದಲ ಸುತ್ತಿನ ಸ್ಪರ್ಧೆ, ಉಪಸ್ಥಿತರು : ಮೇಯರ್ ಶಿವಕುಮಾರ್, ಸಂಗೀತ ನಿರ್ದೇಶಕ ಗುರುಕಿರಣ್, ಮುಖ್ಯ ಅತಿಥಿಗಳು: ಸುರೇಶ್ ಶೆಟ್ಟಿ ಗುರ್ಮೆ, ಡಾ. ಶಿವಶರಣ ಶೆಟ್ಟಿ, ಒಕ್ಕೂಟದ ಗೌರವ ಅಧ್ಯಕ್ಷ ಸುಧಾಕರ ಶೆಟ್ಟಿ, ಒಕ್ಕೂಟದ ಅಧ್ಯಕ್ಷ ಗ್ರೇಶಿಯನ್ ರೋಡ್ರಿಗಸ್, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ


■ **ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ದಸರಾ ಸಾಂಸ್ಕೃತಿಕ ಕಾರ್ಯಕ್ರಮ, ಕರ್ನಾಟಕ ರತ್ನ ಅಪ್ಪು ಅಭಿಮಾನಿ ಬಳಗ:** ಗಂಧದಗುಡಿ ಚಿತ್ರಕಲಾ ಸ್ಪರ್ಧೆ, ಮುಖ್ಯ ಅತಿಥಿಗಳು: ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಕಾರ್ಯ ನಿರ್ವಹಣಾಧಿಕಾರಿ ಕೆ.ರುದ್ರೇಶ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ಸುದರ್ಶನ್, ಡಾ.ರಾಜ್‌ಕುಮಾರ್ ಅಭಿಮಾನಿಗಳ ಬಳಗದ ಅಧ್ಯಕ್ಷ ಎಂ.ರಾಮೇಗೌಡ, ವೈ.ಡಿ.ರಾಜಣ್ಣ, ಹೇಮಾ ನಂದೀಶ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಪಿ. ಕಾಳಿಂಗರಾವ್ ಗಾನಮಂಟಪ, ವಸ್ತುಪ್ರದರ್ಶನದ ಆವರಣ, ಬೆಳಗ್ಗೆ 10.30ಕ್ಕೆ

■ **ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ :** 103ನೇ ಸಂಸ್ಥಾಪನಾ ದಿನಾಚರಣೆ, ಸ್ಥಳ : ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11 ರಿಂದ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ :** ಬೆಳಗ್ಗೆ 10ಕ್ಕೆ ವರ ವಿಶ್ವೇಶ್ವರ ಸುರಬಿ ಸಿಂಚನ ವಿಶೇಷ ಸಂಚಿಕೆ ಲೋಕಾರ್ಪಣೆ, ಮಹಾಗುರುವಿಗೊಂದು ಅಕ್ಷರ ನಮನ, ವಿಶೇಷ ಆಹ್ವಾನಿತರು : ಸಂಸ್ಕೃತ ವಿದ್ವಾಂಸ ಡಾ. ಹೆಚ್.ವಿ. ನಾಗರಾಜರಾವ್, ಉಪಸ್ಥಿತರು : ಪ್ರೊ. ರಾ. ವಿಶ್ವೇಶ್ವರನ್, ಬೆಳಗ್ಗೆ 11.30ರಿಂದ ಪ್ರೊ. ರಾ. ವಿಶ್ವೇಶ್ವರನ್ ಅವರಿಂದ ವೀಣಾವಾದನ, ವಿದ್ವಾನ್ ತುಮಕೂರು ಬಿ. ರವಿಶಂಕರ್ –ಮೃದಂಗ, ಸ್ಥಳ: ಸಂಗೀತ ಕಲಾನಿಧಿ ಮೈಸೂರು ಕೆ. ವಾಸುದೇವಾಚಾರ್ಯ ಕಲಾಭವನ, ಜೆಎಲ್‌ಬಿ ರಸ್ತೆ.

■ **ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ :** ಒಕ್ಕಲಿಗ ವಧು–ವರರ ಸಮಾವೇಶ, ಅಧ್ಯಕ್ಷತೆ : ಟ್ರಸ್ಟ್ ಗೌರವ ಅಧ್ಯಕ್ಷ ಪ್ರೊ. ಕೆ.ಆರ್. ರಂಗಯ್ಯ, ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಉಪಸ್ಥಿತರು : ಜಾನಪದ ವಿದ್ವಾಂಸ ಪ್ರೊ. ವ.ನಂ. ಶಿವರಾಮು, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ. ಮರಿಸ್ವಾಮಿ, ಸಿಂಡಿಕೇಟ್ ಸದಸ್ಯ ಡಾ. ಇ.ಸಿ. ನಿಂಗರಾಜ್‌ಗೌಡ, ಟ್ರಸ್ಟ್ ಉಪಾಧ್ಯಕ್ಷ ಬರಕ್ಕಿ ಪಿ. ಮಹಾದೇವಪ್ಪ, ಸ್ಥಳ: ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಕೆ.ಜಿ. ಕೊಪ್ಪಲು, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಗುಣಪಾಲ್ ಜೈನ್, 6.20 ಗೀತಾರಾಧನ, 6.35"ಬದುಕು ಮಣ್ಣಿನೊಂದಿಗೆ" ಲೇಖನ ಮತ್ತು ಪ್ರಸ್ತುತಿ– ಎ.ಪಿ. ಚಂದ್ರಶೇಖರ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಸಿ ಅಂಬಯ್ಯನುಲಿ, ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.40 ನಮ್ಮ ಆರೋಗ್ಯ– ಹಿರಿಯರಲ್ಲಿ ಕಂಡು ಬರುವ ಪಾಕಿನ್ಸನ್ ಕಾಯಿಲೆ–ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಬಿ.ಎಸ್. ಕೇಶವ್ ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಚಾಮರಾಜನಗರದ ಆದರ್ಶ ವಿದ್ಯಾಲಯದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮನ್ ಕೀ ಬಾತ್–ಪ್ರಧಾನಿ ನರೇಂದ್ರ ಮೋದಿಯವರ ದೇಶದ ಜನತೆ ಯೊಂದಿಗಿನ ಮನದ ಮಾತು ನಂತರ ಮನ್ ಕೀ ಬಾತ್ ಪ್ರಧಾನಿ ನರೇಂದ್ರ ಮೋದಿಯವರ ದೇಶದ ಜನತೆಯೊಂದಿಗಿನ ಮನದ ಮಾತಿನ ಕನ್ನಡ ಅನುವಾದ **ಮಧ್ಯಾಹ್ನ:** 12.05 ವನಿತಾ ವಿಹಾರ–ಶಾರದಾ ಸಂಗೀತ ವಿದ್ಯಾಲಯದ ಸದಸ್ಯರಿಂದ ಸಂಗೀತ ವೈವಿಧ್ಯ, 12.45 ಜನಪದ ಸಂಗೀತ– ಚಿಕ್ಕ ಮಂಚಮ್ಮ ಮತ್ತು ತಂಡ, 4.00 T–20 ವಿಶ್ವಕಪ್ ಕ್ರಿಕೆಟ್ ಅಂಗವಾಗಿ ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳ ನಡುವಿನ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 8.00 ಮನ್ ಕೀ ಬಾತ್–ಪ್ರಧಾನಿ ನರೇಂದ್ರ ಮೋದಿಯವರ ದೇಶದ ಜನತೆಯೊಂದಿಗಿನ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ವಿದುಷಿ ಸಂಗೀತಾ ಶಂಕರ್–ವಯೋಲಿನ್ ವಾದನ

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ವರುಣಾ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರು, ಪದಾಧಿಕಾರಿಗಳ ಪದಗ್ರಹಣ ಸಮಾರಂಭ, ಉದ್ಘಾಟನೆ : ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್, ಅಧ್ಯಕ್ಷತೆ : ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಉಪಸ್ಥಿತರು : ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಬಿ. ಮಲ್ಲೇಶ್ ಕೋಟೆ, ಸ್ಥಳ: ಇಂದಿರಾ ಕಾಂಗ್ರೆಸ್ ಭವನ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ನೇಹ ಸಿಂಚನ ಟ್ರಸ್ಟ್ :** ಆಕಾಶವಾಣಿ ನಿವೃತ್ತ ಕಾರ್ಯಕ್ರಮ ನಿರ್ವಾಹಕರಾದ ಎನ್.ವಿ.ರಮೇಶ್ ಅವರಿಗೆ ಜೀವಮಾನ ಸಾಧಕ ರಾಜ್ಯ ಪ್ರಶಸ್ತಿ ಪ್ರದಾನ, ನವರಾತ್ರಿ ಗೊಂಬೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಕವಯತ್ರಿ ಡಾ. ಲತಾರಾಜಶೇಖರ್, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ : ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಬಹುಮಾನ ವಿತರಣೆ : ವಿಜ್ಞಾನ ಲೇಖಕ ಎಸ್. ರಾಮಪ್ರಸಾದ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4ಕ್ಕೆ.

■ **ನಟನ ರಂಗಶಾಲೆ :** ಕೊಳ್ಳೇಗಾಲದ ಕಲಾಧಾಮ ಕಲಾವಿದರಿಂದ 'ಸೇತು ಮಾಧವನ ಸಲ್ಲಾಪ' ನಾಟಕ ಪ್ರದರ್ಶನ, ನಿರ್ದೇಶನ : ಅಂಕರಾಜು ಎನ್. ಕೊಳ್ಳೇಗಾಲ, ನಾಟಕ ರಚನೆ : ಟಿ.ಎನ್. ನರಸಿಂಹನ್, ಸಂಗೀತ : ದಿಗ್ವಿಜಯ ಹೆಗ್ಗೋಡು, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ

■ **ಶ್ರುತಿಮಂಜರಿ ಪ್ರತಿಷ್ಠಾನ :** ಶ್ರೀ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳಾಧಾರಿತ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಹೆಮ್ಮಿಗೆ ಎಸ್. ಪ್ರಶಾಂತ್–ಹಾಡುಗಾರಿಕೆ, ವಿದುಷಿ ನಳಿನಿ ಮೋಹನ್–ಪಿಟೀಲು, ವಿದ್ವಾನ್ ಅನಿರುದ್ಧ ಭಟ್–ಮೃದಂಗ, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸರಸ್ವತಿಪುರಂ, ಸಂಜೆ 6ಕ್ಕೆ.

■ **ವಿಕ್ರಮ ಉಜ್ವಲ ರಾಷ್ಟ್ರೀಯ ಕನ್ನಡ ವಾರಪತ್ರಿಕೆ :** ಸಾಂಸ್ಕೃತಿಕ ಸೊಬಗಿನ ಮೈಸೂರು ಕೈ ಹೊತ್ತಿಗೆ ಬಿಡುಗಡೆ ಸಮಾರಂಭ, ಲೋಕಾರ್ಪಣೆ : ಕೆಎಸ್ ಮತ್ತು ಡಿಎಲ್ ಅಧ್ಯಕ್ಷ ಮಾಡಾಳು ವಿರೂಪಾಕ್ಷಪ್ಪ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಸಾನ್ನಿಧ್ಯ : ಶ್ರೀರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದಜಿ ಮಹಾರಾಜ್, ಆಶಯ ನುಡಿ : ಪ್ರಾಂತ ಕಾರ್ಯಕಾರಿಣಿ ಸದಸ್ಯ ಮ. ವೆಂಕಟರಾಮು, ಸ್ಥಳ: ಮಾಧವಕೃಪಾ ಸಭಾಂಗಣ, ಸಂಜೆ 6ಕ್ಕೆ.

■ **ಗಾನಭಾರತೀ :** ಭವನ ದಿನಾಚರಣೆ, ವಿದ್ವಾನ್ ಮುಡಿಕೊಂಡಾನ್ ರಮೇಶ್–ವೀಣೆ, ವಿದ್ವಾನ್ ಚೆಲುವರಾಜು–ಮೃದಂಗ, ವಿದ್ವಾನ್ ಎನ್. ಗುರುಮೂರ್ತಿ–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣದ ರೆಪರ್ಟರಿ ಕಲಾವಿದರಿಂದ 'ಹಲಗಲಿ ಸಮರ' ನಾಟಕ ಪ್ರದರ್ಶನ, ನಿರ್ದೇಶನ : ಅಡ್ಡಂಡ ಸಿ. ಕಾರ್ಯಪ್ಪ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ, ನಂಜನಗೂಡು ತಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಗಳವರ ಕರ್ತೃಗದ್ದುಗೆ ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು.

ದಿವಂಗತ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಪ್ರಥಮ ಪುಣ್ಯಸ್ಮರಣೆ

ಮೈಸೂರಲ್ಲಿ ಅಪ್ಪುಗೆ ಭಾವಪೂರ್ಣ ನಮನ: ವಿವಿಧ ಸೇವಾ ಕಾರ್ಯ, ಅನ್ನಸಂತರ್ಪಣೆ


ವಸ್ತುಪ್ರದರ್ಶನ ಆವರಣದಲ್ಲಿ ಜೆಡಿಎಸ್ ಮುಖಂಡ ಮಂಜುಗೌಡರ ನೇತೃತ್ವದಲ್ಲಿ ಮಳಿಗೆದಾರರು ಹಾಗೂ ಪುನೀತ್ ರಾಜಕುಮಾರ್ ಅಭಿಮಾನಿಗಳ ವತಿಯಿಂದ ಅನ್ನದಾನ ನಡೆಸಿ, ಪುನೀತ್‌ಗೆ ಪ್ರಥಮ ಪುಣ್ಯಸ್ಮರಣೆಯ ನಮನ ಸಲ್ಲಿಸಲಾಯಿತು.


ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಪುನೀತ್ ರಾಜಕುಮಾರ್ ಅವರ ಪ್ರಥಮ ಪುಣ್ಯಸ್ಮರಣೆ ಆಚರಿಸಲಾಯಿತು. ರಾಜ್ಯ ಹಿಂದುಳಿದ ಜಾಗೃತ ವೇದಿಕೆ ರಾಜ್ಯಾಧ್ಯಕ್ಷರೂ ಆದ ಕನ್ನಡ ಸಾಹಿತ್ಯ ಪರಿಷತ್ತಿನ ನಗರಾಧ್ಯಕ್ಷ ಕೆ.ಎಸ್.ಶಿವರಾಮು ಪುನೀತ್‌ರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು. ಈ ವೇಳೆ ಕಸಾಪ ಮಾಜಿ ಜಿಲ್ಲಾಧ್ಯಕ್ಷ ಎಂ.ಚಂದ್ರಶೇಖರ್, ಚಂದ್ರಣ್ಣ, ಮುಖಂಡರಾದ ನಾಗೇಶ್, ಲೋಕೇಶ್ ಮಾದಾಪುರ, ರೋಹಿತ್, ಸುನಿಲ್‌ಗೌಡ, ಆರ್.ಕೆ.ರವಿ, ಕಾಗಿನೆಲೆ ಮಹೇಂದ್ರ, ಹರೀಶ್ ಮೊಗಣ್ಣ ಇತರರಿದ್ದರು.

ಅಪ್ಪು ನೆನಪಿನಾರ್ಥ ಮಹಾಲಕ್ಷ್ಮಿ ಸ್ವೀಟ್ಸ್ ಸಿಬ್ಬಂದಿಗೆ ಬೈಕ್ ಕೊಡುಗೆ


ಕನ್ನಡ ಚಿತ್ರರಂಗದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಪ್ರಥಮ ಪುಣ್ಯತಿಥಿಯಂದು, ಪುನೀತ್ ಸ್ಮರಣಾರ್ಥ ಅವರ ಅಭಿಮಾನಿಗಳೂ ಆದ ಮಹಾಲಕ್ಷ್ಮಿ ಸ್ವೀಟ್ಸ್ ಮಾಲೀಕರಾದ ಶಿವಕುಮಾರ್, ಅವರ ಪುತ್ರ ನಿತಿನ್ ಶಿವಕುಮಾರ್ 'ಶ್ರೀ ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್' ವತಿಯಿಂದ ಸಂಸ್ಥೆಯ 108 ಹಿರಿಯ ನೌಕರರಿಗೆ ದ್ವಿಚಕ್ರ ವಾಹನಗಳ ಕೊಡುಗೆ ನೀಡಲು ನಿರ್ಧರಿಸಿ, ಐವರಿಗೆ ಸಾಂಕೇತಿಕವಾಗಿ ಬೈಕ್‌ಗಳನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರ ಸಮ್ಮುಖದಲ್ಲಿ ಶನಿವಾರ ವಿತರಿಸಿದರು. ಈ ವೇಳೆ ಯುವ ಮುಖಂಡರಾದ ಮದನ್‌ಗೌಡ, ಸಿಬ್ಬಂದಿ ವರ್ಗ ಉಪಸ್ಥಿತರಿದ್ದಾರೆ.


ಮೈಸೂರಿನ ದಟ್ಟಗಳ್ಳಿಯಲ್ಲಿರುವ ನಯನಕುಮಾರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಶನಿವಾರ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಹಾಲಿನ ಪ್ಯಾಕೆಟ್ ಮೇಲೂ ಗೌರವ

ನಂದಿನಿ ಹಾಲಿನ ಪ್ಯಾಕೆಟ್‌ಗಳ ಮೇಲೂ ಅಪ್ಪುವಿನ ಗಂಧದಗುಡಿ ಚಿತ್ರದ ಹೆಸರು ಮುದ್ರಿಸುವ ಮೂಲಕ ಕೆಎಂಎಫ್ ತನ್ನ ರಾಯಭಾರಿಯೂ ಆದ ಪುನೀತ್‌ರಿಗೆ ಗೌರವ ಸಲ್ಲಿಸಲಾಯಿತು. ಇದು ಇಂದಿನಿಂದ 15 ದಿನಗಳ ಕಾಲ ಮುಂದುವರಿಯಲಿದೆ. ಕೆಎಂಎಫ್‌ನ ಜಾಹೀರಾತುಗಳಿಗೆ ಯಾವುದೇ ಸಂಭಾವನೆ ಪಡೆಯದೇ ನಟಿಸುತ್ತಿದ್ದ ಪುನೀತ್‌ಗೆ ಈ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಗುತ್ತಿದೆ.



ಮೈಸೂರು,ಅ.29(ಎಂಟಿವೈ)– ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಮೊದಲ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಶನಿವಾರ ವಿವಿಧ ಸಮಾಜ ಸೇವಾ ಕಾರ್ಯ ನಡೆಸುವ ಮೂಲಕ ಅಭಿಮಾನಿಗಳು ನೆಚ್ಚಿನ ನಟನ ಪುಣ್ಯಸ್ಮರಣೆಯಲ್ಲಿ ಭಾಗಿಯಾದರು.

ಮೈಸೂರಿನ ಬಹುತೇಕ ಬಡಾವಣೆಗಳಲ್ಲಿ ಶನಿವಾರ ಅಪ್ಪು ನಮನ ಕಾರ್ಯಕ್ರಮ ನಡೆಸಿದ ಅಭಿಮಾನಿಗಳು ಅನ್ನಸಂತರ್ಪಣೆ ಸೇರಿದಂತೆ ವಿವಿಧ ಕಾರ್ಯಕ್ರಮ ನಡೆಸುವ ಮೂಲಕ ಪುನೀತ್ ರಾಜ್‌ಕುಮಾರ್ ಅವರ ಆತ್ಮಕ್ಕೆ ಶಾಂತಿ ಕೋರಿದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ: ಮೈಸೂರಿನ ದಟ್ಟಗಳ್ಳಿಯಲ್ಲಿರುವ ನಯನ ಕುಮಾರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಆಸ್ಪತ್ರೆಯ ಮುಂಭಾಗ ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಆಸ್ಪತ್ರೆಯ ವೈದ್ಯರು ಒಳಗೊಂಡಂತೆ ಎಲ್ಲಾ ಸಿಬ್ಬಂದಿ ಹಾಗೂ ರೋಗಿಗಳು ಪುಷ್ಪಾರ್ಚನೆ ಮಾಡಿ, ನಮಿಸಿದರು.

ಬಳಿಕ ಆಸ್ಪತ್ರೆ ನ್ಯೂರೋ ವಿಭಾಗ, ಆರ್ಥೋ, ಓಬಿಜಿ, ಮಕ್ಕಳ ವಿಭಾಗ, ಸ್ತ್ರೀರೋಗ ವಿಭಾಗ, ಜನರಲ್ ಸರ್ಜನ್, ಜನರಲ್ ಮೆಡಿಸನ್ ವಿಭಾಗ ಸೇರಿದಂತೆ ಎಲ್ಲಾ ವಿಭಾಗದಲ್ಲೂ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸಲಾಯಿತು. ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ನಡೆದ ಆರೋಗ್ಯ ತಪಾಸಣಾ ಶಿಬಿರದಲ್ಲಿ 150ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಗಾಗಿ ಚಿಕಿತ್ಸೆ ಪಡೆದರು.

ಇದೇ ವೇಳೆ ಆಸ್ಪತ್ರೆಯ ಮುಖ್ಯಸ್ಥ ಕುಮಾರ್(ಕೆ.ಬಿ.ಕುಮಾರ್) ಮಾತನಾಡಿ, ಪುನೀತ್ ರಾಜ್‌ಕುಮಾರ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಇಂದು ದಿನವಿಡೀ ಉಚಿತವಾಗಿ ಆರೋಗ್ಯ ತಪಾಸಣೆ ನಡೆಸಲಾಗಿದೆ. ಅಲ್ಲದೇ, ಇನ್ನು 3 ತಿಂಗಳವರೆಗೂ ಶೇ.10ರಷ್ಟು ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಈಗಾಗಲೇ ಆಸ್ಪತ್ರೆಯಲ್ಲಿ 350ಕ್ಕೂ ಹೆಚ್ಚು ಕ್ಲಿಷ್ಟಕರ ಶಸ್ತ್ರಚಿಕಿತ್ಸೆಯನ್ನು ರಿಯಾಯಿತಿ ದರದಲ್ಲಿ ನಡೆಸಲಾಗಿದೆ. ನುರಿತ ವೈದ್ಯರು ನಮ್ಮ ಆಸ್ಪತ್ರೆಯಲ್ಲಿದ್ದು, ಗುಣಮಟ್ಟದ ಆರೋಗ್ಯ ಸೇವೆ ಒದಗಿಸುತ್ತಿದ್ದಾರೆ ಎಂದರು.

ವಿವಿಧೆಡೆ ಅನ್ನಸಂತರ್ಪಣೆ: ಮೈಸೂರಿನ ವಿವಿಧೆಡೆ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರಿಗೆ ನಮನ ಸಲ್ಲಿಸಲಾಯಿತು. ವಿವಿಧ ಸಂಘ– ಸಂಸ್ಥೆಗಳ ವತಿಯಿಂದ ನಾನಾ ಸೇವಾ ಕಾರ್ಯ ಕೈಗೊಳ್ಳುವ ಮೂಲಕ 'ಯುವರತ್ನ'ನಿಗೆ ನಮಿಸಲಾಯಿತು. ಅನ್ನ ಸಂತರ್ಪಣೆ ಏರ್ಪಡಿಸಿ ಸಾವಿರಾರು ಮಂದಿಗೆ ಊಟದ ವ್ಯವಸ್ಥೆ ಮಾಡಲಾಯಿತು. ಈ ಸಂದರ್ಭದಲ್ಲಿ ಬೆಳಗ್ಗೆಯಿಂದ ಸಂಜೆವರೆಗೂ ಅಪ್ಪು ಅಭಿನಯದ ಚಲನಚಿತ್ರಗಳ ಹಾಡುಗಳನ್ನು ಬಿತ್ತರಿಸಲಾಯಿತು.

ರಾಮಕೃಷ್ಣನಗರದಲ್ಲಿರುವ ರಾಮಕೃಷ್ಣ ಪರಮಹಂಸ ವೃತ್ತದ ಸುತ್ತಲು 'ನಟಸಾರ್ವಭೌಮ'ನ ಭಾವಚಿತ್ರ ಹಾಕಿ ಗಮನ ಸೆಳೆಯಲಾಯಿತು. ಚಾಮುಂಡಿಪುರಂ ವೃತ್ತದಲ್ಲಿ ಅಂಜನಿಪುತ್ರನನ್ನು ಸ್ಮರಿಸಲಾಯಿತು. ಅಗ್ರಹಾರ, ಬನ್ನಿಮಂಟಪ, ಬೋಗಾದಿ ರಿಂಗ್ ರಸ್ತೆ, ಶಾರದಾದೇವಿನಗರ, ಸರಸ್ವತಿಪುರಂ, ಟಿ.ಕೆ.ಲೇಔಟ್, ಟೆರಿಷಿಯನ್ ಕಾಲೇಜು ವೃತ್ತ, ಆಲನಹಳ್ಳಿ, ಪಡುವಾರಹಳ್ಳಿ, ಒಂಟಿಕೊಪ್ಪಲ್, ಕೆಸರೆ, ರಾಜೇಂದ್ರನಗರ, ಬಂಡೀಪಾಳ್ಯ, ಎಪಿಎಂಸಿ ಯಾರ್ಡ್ ಸೇರಿದಂತೆ ಬಹುತೇಕ ಸ್ಥಳದಲ್ಲಿ ಅಪ್ಪು ಭಾವಚಿತ್ರವನ್ನು ಪೂಜಿಸಿ, ಅನ್ನಸಂತರ್ಪಣೆ ಆಯೋಜಿಸಿ ಗೌರವ ಸಲ್ಲಿಸಲಾಯಿತು.

ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಮಂಜುಳಾ ಸೌಂಡ್ ಸಿಸ್ಟಮ್‌ನಲ್ಲಿ ಅಪ್ಪು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ, ರೋಹಿತ್, ಎನ್.ಆರ್.ನಾಗೇಶ್, ಲೋಕೇಶ್‌ಕುಮಾರ್ ಮಾದಾಪುರ, ಹರೀಶ್ ಮೊಗಣ್ಣ, ಚಂದ್ರಶೇಖರ್ ಹಲವರು ಉಪಸ್ಥಿತರಿದ್ದರು.

ಪೂಜೆ ಸಲ್ಲಿಕೆ: ಪಡುವಾರಹಳ್ಳಿಯಲ್ಲೂ ದೊಡ್ಮನೆ ಹುಡುಗನಿಗೆ ಮೊದಲ ವರ್ಷದ ಪುಣ್ಯಸ್ಮರಣೆ ಮಾಡಲಾಯಿತು. ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗದ ವತಿಯಿಂದ ಅಪ್ಪು ಪ್ರತಿಮೆ ಹಾಗೂ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು. ಬಳಿಕ ಅನ್ನ ಸಂತರ್ಪಣೆ ಮಾಡಿ ಅಭಿಮಾನ ಪ್ರದರ್ಶಿಸಿದರು. ಬಳಗದ ರಮೇಶ್, ಚಂದ್ರು, ಸೋಮು ಇನ್ನಿತರರು ಇದ್ದರು.

ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನದ ಬಳಿ ಅಪ್ಪು ಅಭಿಮಾನಿಗಳು ಪುನೀತ್ ರಾಜಕುಮಾರ್ ಅವರ ಬೃಹತ್ ಕಟೌಟ್‌ಗೆ ಹೂವಿನ ಹಾರ ಹಾಕಿ, ಅನ್ನ ಸಂತರ್ಪಣೆ ಮಾಡುವ ಮೂಲಕ ಅಪ್ಪುಗೆ ನಮನ ಸಲ್ಲಿಸಿದರು. ಮುಂಭಾಗದ ಪದ್ಮ ಚಿತ್ರಮಂದಿರದಲ್ಲಿ ಗಂಧದಗುಡಿ ಚಿತ್ರ ಪ್ರದರ್ಶನವಾಗುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಅಭಿಮಾನಿಗಳು ಅಪ್ಪು ಸ್ಮರಿಸಿ ಭಾವುಕರಾದರು. ಜತೆಗೆ ಬೆಳಗ್ಗೆಯಿಂದ ಸಂಜೆವರೆಗೆ ಪುನೀತ್ ರಾಜ್‌ಕುಮಾರ್ ನಟಿಸಿರುವ ಚಿತ್ರಗಳ ಗೀತೆಗಳು ಮೇಳೈಸಿದವು. ನಗರದ ಪ್ರಮುಖ ವೃತ್ತಗಳಲ್ಲೂ ಅಪ್ಪು ಭಾವಚಿತ್ರಗಳು ರಾರಾಜಿಸಿದವು. ರಾಮಸ್ವಾಮಿ ವೃತ್ತ, ಬಲ್ಲಾಳ್ ವೃತ್ತ ಸೇರಿದಂತೆ ಇನ್ನಿತರ ವೃತ್ತಗಳಲ್ಲಿ 'ಯುವರತ್ನ'ನ ಭಾವಚಿತ್ರ ಇಟ್ಟು ಪುಷ್ಪ ನಮನ ಸಲ್ಲಿಸಿದರು. ಜತೆಗೆ, ಅಪ್ಪು ಅಭಿಯನದ ಚಿತ್ರಗಳ ಗೀತೆಗಳು ಮೊಳಗಿದವು.

ರಕ್ತದಾನ ಶಿಬಿರ: ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ಪುನೀತ್ ರಾಜ್‌ಕುಮಾರ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ 200ಕ್ಕೂ ಹೆಚ್ಚು ಮಂದಿ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ಇದೇ ವೇಳೆ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ 50ಕ್ಕೂ ಹೆಚ್ಚು ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ರೈಸ್‌ಬಾತ್ ಹಾಗೂ ಕೇಸರಿಬಾತ್ ವಿತರಿಸಲಾಯಿತು. ಬಳಿಕ ಲೋಹಿತ್ ಸಂಗೀತ ವಾದ್ಯ ಸಂಸ್ಥೆ ವತಿಯಿಂದ ಪುನೀತ್ ರಾಜ್‌ಕುಮಾರ್ ಅಭಿನಯದ ಚಿತ್ರಗಳ ಗೀತೆಯ ಗಾಯನದ ಮೂಲಕ ಸಂಗೀತ ನಮನ ಸಲ್ಲಿಸಲಾಯಿತು.

ಸಿದ್ಧಾರ್ಥನಗರದಲ್ಲೂ ರಕ್ತದಾನ ಶಿಬಿರ: ಮೈಸೂರಿನ ಸಿದ್ಧಾರ್ಥನಗರದ ಡಾ.ಪಿ.ಹೆಚ್.ರಾಘವೇಂದ್ರ ಶೆಟ್ಟಿ ನಾಗಮಣಿ ಸಭಾಂಗಣದಲ್ಲಿ ನರೇಂದ್ರ ಮೋದಿ ಸೇವಾ ಟ್ರಸ್ಟ್, ಸಮಾಜ ಸೇವಾ ಟ್ರಸ್ಟ್, ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ, ಸೇವಾ ಭಾರತಿ, ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರ ಸಹಯೋಗದೊಂದಿಗೆ 50ಕ್ಕೂ ಹೆಚ್ಚು ದಾನಿಗಳು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿದರು. ಈ ಸಂದರ್ಭದಲ್ಲಿ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಮಾಜ ಸೇವಕ ಮಹೇಂದ್ರ ಸಿಂಗ್ ಕಾಳಪ್ಪ ಮುಡಾ ಸದಸ್ಯೆ ಲಕ್ಷ್ಮೀದೇವಿ, ಸವಿತಾ ಘಾಟ್ಕೆ, ಕೇಬಲ್ ವಿಜಿ, ಆಟೋ ಸದಾಶಿವ, ಚಂದ್ರು, ವಿದ್ಯಾ, ಬ್ಲಡ್ ಆನ್ ಕಾಲ್ ಕ್ಲಬ್ ಮೈಸೂರು ದೇವೇಂದ್ರ ಪರಿಹಾರಿಯ, ಆನಂದ್ ಮಂಡೂತ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಅಹಿಂದ ನಟ ರಾಜ್ ಹಾಗೂ ಇನ್ನಿತರರು ಹಾಜರಿದ್ದರು.


ಜೀವಧಾರ ರಕ್ತನಿಧಿ ಕೇಂದ್ರದಿಂದ ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಲಾಯಿತು.



ಮಂಡಿ ಮೊಹಲ್ಲಾದಲ್ಲಿ ಅಪ್ಪು ಫ್ಯಾನ್ಸ್ ವತಿಯಿಂದ ಪುನೀತ್ ಪ್ರಥಮ ಪುಣ್ಯಸ್ಮರಣೆ ಆಚರಿಸಲಾಯಿತು. ಈ ವೇಳೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ರವಿಕುಮಾರ್ ರಾಜಕೀಯ, ವಿಠ್ಠಲ್ ವಿಜಿ, ಅಕ್ಷಯ್, ಕಿರಣ, ರಾಜೇಶ್, ಶ್ರೇಯಸ್, ಶಿವಕುಮಾರ್, ರವಿ ಉಪಸ್ಥಿತರಿದ್ದರು.


ಮೈಸೂರಿನ ಮಂಡಿ ಮೊಹಲ್ಲಾದಲ್ಲಿ ನಟ ಪುನೀತ್ ರಾಜ್‌ಕುಮಾರ್ ಅವರ ಪ್ರಥಮ ಪುಣ್ಯ ಸ್ಮರಣೆ ಆಚರಿಸಲಾಯಿತು. ಈ ವೇಳೆ ಸುಂದರ ಕುಮಾರ್, ವೆಂಕಿ, ಶ್ರೇಯಸ್, ಅಕ್ಷಯ್, ವಿಜಿ, ಕೆಂಚ, ರವಿ, ಶೇಖರ್, ಮಹದೇವ, ಬಸವರಾಜು ಇದ್ದರು.


ಮೈಸೂರಿನ ಲಕ್ಷ್ಮೀಪುರಂ ಠಾಣೆಯಲ್ಲಿ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರಿಗೆ ಪ್ರಥಮ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಭಾವಪೂರ್ಣ ನಮನ ಸಲ್ಲಿಸಲಾಯಿತು. ಇನ್‌ಸ್ಪೆಕ್ಟರ್ ಮೋಹಿತ್ ಸಹದೇವ್, ಎಎಸ್‌ಐಗಳಾದ ರಾಜು, ಗೌರಿಶಂಕರಸ್ವಾಮಿ, ಸಿಬ್ಬಂದಿಗಳಾದ ಮಹದೇವ, ಮಧು, ಸಂತೋಷ ಆರಾಧ್ಯ, ಶಿವಪ್ರಸಾದ್, ಪುಣ್ಯಶ್ರೀ ಹಾಗೂ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಪುನೀತ್ ಪ್ರಥಮ ಪುಣ್ಯಸ್ಮರಣೆ
ಪತ್ನಿ ಅಶ್ವಿನಿ ಪುನೀತ್ ಭಾವುಕ ಪತ್ರ

ಬೆಂಗಳೂರು, ಅ.29– ಪುನೀತ್ ರಾಜ್‌ಕುಮಾರ್ ಅಗಲಿ ಇಂದಿಗೆ ಒಂದು ವರ್ಷ. ಬೆಂಗಳೂರಿನ ಕಂಠೀರವ ಸ್ಟುಡಿಯೋ ಬಳಿ ಇರುವ ಅಪ್ಪು ಸಮಾಧಿಗೆ ಪುನೀತ್ ಕುಟುಂಬಸ್ಥರು ಆಗಮಿಸಿ ಪೂಜೆ ಸಲ್ಲಿಸಿದರು. ಜೊತೆಗೆ ಡಾ.ರಾಜ್‌ಕುಮಾರ್ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ಸಮಾಧಿಗೂ ಪೂಜೆ ಸಲ್ಲಿಸಲಾಯಿತು. ಪೂಜೆ ಸಲ್ಲಿಸುತ್ತಲೇ ಪುನೀತ್ ಪತ್ನಿ ಅಶ್ವಿನಿ ಕಣ್ಣೀರು ಹಾಕಿದರು. ಪೂಜೆ ಸಲ್ಲಿಸಿದ ನಂತರ ಅಭಿಮಾನಿಗಳಿಗೆ ಅಶ್ವಿನಿ ಪುನೀತ್ ರಾಜ್‌ಕುಮಾರ್ ಭಾವುಕ ಪತ್ರ ಬರೆದಿದ್ದಾರೆ.



'ನೆನಪಿನ ಸಾಗರದಲ್ಲಿ. ಅಪ್ಪು ಅವರು ನಮ್ಮ ನೆನಪುಗಳಲ್ಲಿ ಮಾತ್ರವಲ್ಲದೇ, ನಮ್ಮ ಆಲೋಚನೆಗಳು ಹಾಗೂ ನಾವು ಮಾಡುವ ಸತ್ಕಾರ್ಯಗಳಲ್ಲಿಯೂ ನಮ್ಮ ನಡುವೆ ಸದಾ ಜೀವಂತವಾಗಿದ್ದಾರೆ. ಅವರ ಕನಸು ಮತ್ತು ಮೌಲ್ಯಗಳನ್ನು ಜೀವಂತವಾಗಿಡಲು ನೂರಾರು ಕುಟುಂಬ ಸದಸ್ಯರು, ಅವರ ಸಾವಿರಾರು ಸ್ನೇಹಿತರು ಹಾಗೂ ಕೋಟ್ಯಂತರ ಅಭಿಮಾನಿಗಳಿಂದ ನಾನು ಪಡೆದ ಬೆಂಬಲದ ಶಕ್ತಿಯೇ ನನಗೆ ದಾರಿ ಮಾಡಿಕೊಟ್ಟಿದೆ. ಅಪ್ಪು ಅವರ ಮೇಲೆ ನಿಮ್ಮೆಲ್ಲರಿಗೆ ಇರುವ ಪ್ರೀತಿ ಮತ್ತು ಗೌರವದಿಂದ, ಸದಾ ಕಾಲ ಅವರನ್ನು ಜೀವಂತವಾಗಿರಿಸಿದ್ದಕ್ಕಾಗಿ ಎಲ್ಲರಿಗೂ ನನ್ನ ನಮನಗಳು' ಎಂದು ಬರೆದಿದ್ದಾರೆ ಅಶ್ವಿನಿ ಪುನೀತ್ ರಾಜ್‌ಕುಮಾರ್.

ಸಿಎಂ ಬೊಮ್ಮಾಯಿ ಸೇರಿ ಗಣ್ಯರ ಶ್ರದ್ಧಾಂಜಲಿ

ಬೆಂಗಳೂರು: ಬಾಲನಟನಾಗಿ ಚಿತ್ರರಂಗ ಪ್ರವೇಶಿಸಿ, ಪವರ್ ಸ್ಟಾರ್ ಆಗಿ ಕನ್ನಡಿಗರ ಜನಮಾನಸದಲ್ಲಿ ಶಾಶ್ವತ ಸ್ಥಾನ ಪಡೆದಿರುವ ಪ್ರೀತಿಯ 'ಅಪ್ಪು', ಡಾ.ಪುನೀತ್ ರಾಜ್‌ಕುಮಾರ್ ಪುಣ್ಯಸ್ಮರಣೆಯಂದು ಅವರಿಗೆ ಪ್ರೀತಿ ಪೂರ್ವಕ ನಮನಗಳು. ಅತಿ ಚಿಕ್ಕ ವಯಸ್ಸಿನಲ್ಲಿ ಅವರು ಮಾಡಿದ ಸಾಧನೆ, ಗಳಿಸಿದ ಜನಪ್ರಿಯತೆ, ಕೈಗೊಂಡ ಜನಸೇವೆ ವರ್ಣಿಸಲು ಪದಗಳೇ ಸಾಲದು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಟ್ವೀಟ್ ಮಾಡಿದ್ದಾರೆ.

ಜನಮಾನಸದಲ್ಲಿ ಚಿರಸ್ಥಾಯಿ ಆಗಿರುವ ನೆಚ್ಚಿನ ಕಲಾವಿದ, ನಮ್ಮೆಲ್ಲರ ಪ್ರೀತಿಯ 'ಅಪ್ಪು', ಪುನೀತ್ ರಾಜಕುಮಾರ್ ಅವರ ಪ್ರಥಮ ಪುಣ್ಯತಿಥಿಯಂದು ಅವರಿಗೆ ಭಾವಪೂರ್ಣ ನಮನಗಳು. ಅವರ ಕಲಾವಂತಿಕೆ, ಹೃದಯವಂತಿಕೆಯ ವ್ಯಕ್ತಿತ್ವ ಎಂದೆಂದಿಗೂ ಅಜರಾಮರ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಟ್ವೀಟ್ ಮಾಡಿದ್ದಾರೆ. ಒಳ್ಳೆಯದನ್ನು ಬಯಸುವವರ ಮನಸ್ಸು, ಹೃದಯದಲ್ಲಿ 'ಅಪ್ಪು' ಇನ್ನೂ ಬದುಕಿದ್ದಾರೆ. ತಮ್ಮ ಕನಸಿನ ಗಂಧದಗುಡಿ ಮೂಲಕ ಅವರು ಪರಿಸರದಲ್ಲಿ ಲೀನವಾಗಿದ್ದಾರೆ. ನಿಮ್ಮನು ಪಡೆದ ನಾವು ನಿಜಕ್ಕೂ ಪುನೀತ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಟ್ವೀಟ್ ಮಾಡಿದ್ದಾರೆ.

ಮರೆಯದ ಮಾಣಿಕ್ಯನಿಗೆ ನನ್ನದೊಂದು ನಮನ
ಕನ್ನಡದಲ್ಲಿಯೇ ದೆಹಲಿ ಸಿಎಂ ಕೇಜ್ರಿವಾಲ್ ಟ್ವೀಟ್

ನವದೆಹಲಿ: ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರು ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷವಾಯಿತು. ಈ ಹಿನ್ನೆಲೆಯಲ್ಲಿ ರಾಜಕೀಯ ನಾಯಕರು, ಗಣ್ಯರು ಹಾಗೂ ಅಭಿಮಾನಿಗಳು ಸೇರಿದಂತೆ ಎಲ್ಲರೂ ಅಪ್ಪುವನ್ನು ಇಂದು ಕೂಡ ಸ್ಮರಿಸಿಕೊಂಡಿದ್ದಾರೆ. ಈ ಮಧ್ಯೆ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಕೂಡ ಅಪ್ಪುವನ್ನು ನೆನಪು ಮಾಡಿಕೊಂಡಿದ್ದು, ಗಮನಸೆಳೆದಿದೆ. ಕನ್ನಡದಲ್ಲಿಯೇ ಟ್ವೀಟ್ ಮಾಡಿರುವ ಕೇಜ್ರಿವಾಲ್, 'ಮರೆಯದ ಮಾಣಿಕ್ಯನಿಗೆ ನನ್ನದೊಂದು ನಮನಗಳು. ಡಾ ಪುನೀತ್ ರಾಜ್‌ಕುಮಾರ್ ಅವರ ಪುಣ್ಯತಿಥಿಯಾಗಿರುವ ಇಂದು ಅವರನ್ನು ನಾನು ನೆನಪಿಸಿಕೊಳ್ಳುತ್ತೇನೆ. ಅವರು ನಟಿಸಿರುವ ಸಿನಿಮಾ, ಹಾಡುಗಳು ಮತ್ತು ಸಾಮಾಜಿಕ ಕಾರ್ಯಗಳು ಅವರು ನಮ್ಮನ್ನು ಎಂದಿಗೂ ಬಿಟ್ಟು ಹೋಗಿಲ್ಲ ಎಂದು ಅನಿಸುತ್ತದೆ. ಅವರು ಯಾವತ್ತೂ ಪವರ್ ಸ್ಟಾರ್ ಆಗಿಯೇ ಇರುತ್ತಾರೆ' ಎಂದು ತಿಳಿಸಿದ್ದಾರೆ.

ಪುನೀತ್‌ಗೆ ಕರ್ನಾಟಕ ರತ್ನ ಪ್ರದಾನ ಸಮಾರಂಭದಲ್ಲಿ ರಜನಿಕಾಂತ್, ಜೂನಿಯರ್ ಎನ್‌ಟಿಆರ್ ಭಾಗಿ




ಬೆಂಗಳೂರು: ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ ನ.1ರಂದು ಕನ್ನಡ ರಾಜ್ಯೋತ್ಸವ ದಿನದಂದು ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದ್ದು, ಸಮಾರಂಭದಲ್ಲಿ ತಮಿಳು ಸೂಪರ್ ಸ್ಟಾರ್ ರಜನಿ ಕಾಂತ್ ಹಾಗೂ ತೆಲುಗು ಸೂಪರ್ ಸ್ಟಾರ್ ಜೂನಿಯರ್ ಎನ್‌ಟಿಆರ್ ಭಾಗವಹಿಸಲಿದ್ದಾರೆ ಎಂದು ಕಂದಾಯ ಸಚಿವ ಆರ್.ಅಶೋಕ್ ಶನಿವಾರ ತಿಳಿಸಿದ್ದಾರೆ.

ಸಚಿವ ಅಶೋಕ್ ನೇತೃತ್ವದಲ್ಲಿ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದ ಸಮಿತಿ ರಚಿಸಲಾಗಿದ್ದು, ಕಾರ್ಯಕ್ರಮದ ರೂಪುರೇಷೆಗಳ ಕುರಿತು ಸಭೆ ನಡೆಸಲಾಯಿತು. ಸಭೆ ನಂತರ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಆರ್ ಅಶೋಕ್ ಅವರು, ರಾಜ್ಯೋತ್ಸವ ದಿನಂದು ಸಂಜೆ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಅದ್ದೂರಿ ಕಾರ್ಯಕ್ರಮದಲ್ಲಿ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಸಮಾರಂಭದಲ್ಲಿ ಪಾಲ್ಗೊಳ್ಳಲು ಹಿರಿಯ ನಟ ರಜನಿಕಾಂತ್, ಜೂ.ಎನ್‌ಟಿಆರ್ ಅವರಿಗೆ ಆಹ್ವಾನ ನೀಡಲಾಗಿದೆ. ಕರ್ನಾಟಕದ ಖ್ಯಾತ ಕಲಾವಿದರೊಬ್ಬರಿಗೆ ಆಹ್ವಾನ ನೀಡಲಾಗಿದೆ. ಸಮಾರಂಭದಲ್ಲಿ 5 ಸಾವಿರ ಜನರಿಗೆ ಪಾಸ್ ನೀಡಲಾಗುವುದು ಎಂದರು. ಕರ್ನಾಟಕ ರತ್ನ ಪ್ರಶಸ್ತಿಯ ಪದಕ ಪೂರ್ಣ ಬೆಳ್ಳಿಯಲ್ಲಿ ಇರುತ್ತದೆ. 50 ಗ್ರಾಂ ಚಿನ್ನದ ಪದಕ ಕೂಡ ಇರಲಿದೆ. ಈ ಮುಂಚೆ ಕಂಠೀರವ ಸ್ಟೇಡಿಯಂನಲ್ಲಿ ಕಾರ್ಯಕ್ರಮ ಮಾಡುವ ಯೋಜನೆ ಇತ್ತು ಆದರೆ ಅವರ ಸಹೋದರ, ಕುಟುಂಬದ ಆಶಯದ ಮೇರೆಗೆ ವಿಧಾನ ಸೌಧದ ಮುಂಭಾಗದಲ್ಲಿ ಮಾಡಲಾಗುತ್ತಿದೆ ಎಂದರು. ಈವರೆಗೆ ಎಂಟು ಸಾಧಕರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಲಾಗಿದೆ. 2009ರ ನಂತರ ಈಗ ಮೊದಲ ಬಾರಿಗೆ ಪುನೀತ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ.


ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಪ್ರಥಮ ವರ್ಷದ ಪುಣ್ಯಸ್ಮರಣೆ ಅಂಗವಾಗಿ ವಸ್ತು ಪ್ರದರ್ಶನದ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ಅಪ್ಪು ನಮನ ಸಂಗೀತ ಸಂಜೆ ಕಾರ್ಯಕ್ರಮ ನಡೆಯಿತು. ಈ ವೇಳೆ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಪಿ.ಆರ್.ಕೆ ಆರ್ಕೆಸ್ಟ್ರಾ ಕಲಾವಿದರಾದ ಜಯರಾಂ ಅನಿಲ್ ಗೌಡ, ಅಜಯ್ ಶಾಸ್ತ್ರಿ, ವೆಂಕಟೇಶ್, ಶಶಿಕಲಾ, ಸೌಮ್ಯ, ಸುಧೀಂದ್ರ, ಸರ್ವಮಂಗಳ, ಶಶಿಕುಮಾರ್, ಬಾಲು ಪುನೀತ್ ಭಾವಚಿತ್ರಕ್ಕೆ ನಮನ ಸಲ್ಲಿಸಿದರು.


ಚಾಮುಂಡಿಬೆಟ್ಟದಲ್ಲಿ ಶ್ರೀ ಜಯಚಾಮರಾಜ ಒಡೆಯರ್ ಪ್ರತಿಮೆ ಬಳಿ ಪುನೀತ್ ರಾಜ್‌ಕುಮಾರ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಮಾಡಲಾಯಿತು. ಈ ವೇಳೆ ಮೇಯರ್ ಶಿವಕುಮಾರ್, ಚಾಮುಂಡಿಬೆಟ್ಟದ ಗ್ರಾಪಂ ಅಧ್ಯಕ್ಷ ಕೆ.ಭರತ್, ನಾಯಕ ಜನಾಂಗದ ಮುಖಂಡ ಮಂಜುನಾಯಕ, ಮಹಾಬಲೇಶ್ವರ ಸೊಸೈಟಿ ನಿರ್ದೇಶಕ ದಿನೇಶ್, ವೆಂಕಟೇಶ್, ಚಾಮುಂಡಿಬೆಟ್ಟದ ಗ್ರಾಮಸ್ಥರು ಇದ್ದರು.

ನ.11ಕ್ಕೆ ಭಾರತ್ ಗೌರವ್ ಕಾಶಿ ದರ್ಶನದ ಮೊದಲ ರೈಲಿಗೆ ಪ್ರಧಾನಿ ಮೋದಿ ಚಾಲನೆ




ಬೆಂಗಳೂರು,ಅ.29–(ಕೆಎಂಶಿ)ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆ ಮಹತ್ವಾಕಾಂಕ್ಷಿ ಯೋಜನೆ–ಭಾರತ್ ಗೌರವ್ ಕಾಶಿ ದರ್ಶನ ಪ್ಯಾಕೇಜ್ ಟೂರ್‌ಗೆ ಬುಕ್ಕಿಂಗ್ ಪ್ರಾರಂಭವಾಗಿದೆ.

ಈ ಯೋಜನೆಯ ಮೊದಲ ರೈಲು ನವೆಂಬರ್ 11ರಂದು ಬೆಂಗಳೂರಿನಿಂದ ಹೊರಡಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ಅಮೃತ ಹಸ್ತದಿಂದ ಚಾಲನೆ ನೀಡುವ ನಿಟ್ಟಿನಲ್ಲಿ ಯೋಜಿಸಲಾಗುತ್ತಿದೆ ಎಂದು ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ. ಈ ಬಗ್ಗೆ ಪ್ರಕಟಣೆ ನೀಡಿರುವ ಅವರು, ಮಹತ್ವಾಕಾಂಕ್ಷಿ ಯೋಜನೆಯ ಬುಕ್ಕಿಂಗ್ ಪ್ರಾರಂಭವಾಗಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಮೋದಿ ಅವರ ಮುತುವರ್ಜಿಯಿಂದ ಮರು ನಿರ್ಮಾಣವಾಗಿರುವ 'ದಿವ್ಯ ಕಾಶಿ–ಭವ್ಯಕಾಶಿ'ಯನ್ನು ರಾಜ್ಯದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ಕಾಶಿ ವಿಶ್ವನಾಥನ ದರ್ಶನ ಪಡೆಯಲಿ ಎನ್ನುವ ಉದ್ದೇಶದಿಂದ ಈ ವಿಶೇಷ ಪ್ಯಾಕೇಜ್ ಟೂರನ್ನು ಆಯೋಜಿಸಲಾಗಿದೆ. ಕೇಂದ್ರ ಸರ್ಕಾರದ ಭಾರತ್ ಗೌರವ್ ಯೋಜನೆಯ ಅಡಿಯಲ್ಲಿ ರೈಲನ್ನು ಮುಜರಾಯಿ ಇಲಾಖೆ ಗುತ್ತಿಗೆಗೆ ಪಡೆದು ಈ ಯೋಜನೆ ಕಾರ್ಯಗತಗೊಳಿಸುತ್ತಿದೆ. ಕೇಂದ್ರ ರೈಲ್ವೇ ಸಚಿವರ ಸಂಪೂರ್ಣ ಸಹಕಾರದೊಂದಿಗೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಮೊದಲ ರೈಲು ನ.11ರಂದು ಬೆಂಗಳೂರಿನಿಂದ ಹೊರಡಲಿದೆ ಎಂದು ಹೇಳಿದ್ದಾರೆ. ಬೆಂಗಳೂರಿನಿಂದ ಹೊರಡುವ ಈ ರೈಲನ್ನು ಹತ್ತಲು ಉತ್ತರ ಕರ್ನಾ ಟಕದ ಪ್ರಮುಖ ನಿಲ್ದಾಣಗಳಲ್ಲೂ ಅವಕಾಶ ಕಲ್ಪಿಸಲಾಗಿದೆ. ಈ ರೈಲು ಬೆಂಗಳೂರು, ಬೀರೂರ್, ಹಾವೇರಿ, ಹುಬ್ಬಳ್ಳಿ, ಬೆಳಗಾವಿ ಹಾಗೂ ರಾಯಭಾಗ ಮಾರ್ಗವಾಗಿ ಕಾಶಿ, ಅಯೋಧ್ಯೆ ಮತ್ತು ಪ್ರಯಾಗರಾಜ್‌ಗೆ ಸಂಚರಿಸಲಿದೆ.

ಅತ್ಯಂತ ಕಡಿಮೆ ವೆಚ್ಚದಲ್ಲಿ ಕಾಶಿ ವಿಶ್ವನಾಥ ಹಾಗೂ ಅಯೋಧ್ಯೆ ರಾಮಲಲ್ಲಾ ದೈವ ಭೂಮಿಯ ವೈಭವ ಸವಿಯುವ ಅವಕಾಶ ಇದಾಗಿದೆ. 8 ದಿನಗಳ ಕಾಲದ ಈ ಟೂರ್ ಪ್ಯಾಕೇಜ್ ಎಲ್ಲಾ ಸವಲತ್ತುಗಳನ್ನು ಒಳಗೊಂಡಿರಲಿದೆ. ಟ್ರೈನ್ ದರ, ಪ್ರವಾಸಿ ಸ್ಥಳಗಳಲ್ಲಿ ಅಗತ್ಯವಿರುವ ಬಸ್ ವ್ಯವಸ್ಥೆ, ಉಳಿದುಕೊಳ್ಳಲು ಹೋಟೆಲ್ ಮತ್ತು 8 ದಿನಗಳ ಊಟ ಮತ್ತು ತಿಂಡಿ ವ್ಯವಸ್ಥೆ, ವಿಮೆಯನ್ನು ಸಹ ಈ ಪ್ಯಾಕೇಜ್ ಒಳಗೊಂಡಿರಲಿದೆ. ಐಆರ್ ಸಿಟಿಸಿ ಸಹಭಾಗಿತ್ವದ ಈ ಟೂರ್ ಪ್ಯಾಕೇಜ್ ತೆಗೆದುಕೊಳ್ಳುವ ಪ್ರತಿ ವ್ಯಕ್ತಿಗೂ 5 ಸಾವಿರ ರೂ.ಗಳ ಸಹಾಯಧನವನ್ನು ಸರಕಾರ ನೀಡಲಿದೆ. ಈ ಪ್ಯಾಕೇಜ್‌ನ ದರ ಮೂಲತಃ 20 ಸಾವಿರ ರೂ., ಪ್ರಯಾಣಿಕರು ಕೇವಲ 15,000 ರೂ.ಗಳನ್ನು ನೀಡಿದರೆ ಸಾಕು. ಉಳಿದ 5000 ರೂಗಳನ್ನು ಸರಕಾರ ಸಹಾಯ ಧನದ ರೂಪದಲ್ಲಿ ನೀಡಲಿದೆ. ಕರ್ನಾಟಕ–ಭಾರತ್ ಗೌರವ್ ಕಾಶಿ ದರ್ಶನ ರೈಲು ಯೋಜನೆಯ ಬುಕ್ಕಿಂಗ್ ಈಗಾಗಲೇ ಪ್ರಾರಂಭವಾಗಿದೆ. ಐಆರ್‌ಸಿಟಿಸಿ ಹಾಗೂ ಐಟಿಎಂಎಸ್ ವೆಬ್‌ಸೈಟ್‌ಗಳ ಮೂಲಕ ಬುಕ್ಕಿಂಗ್‌ಗೆ ಅವಕಾಶ ನೀಡಲಾಗಿದೆ.

https://www.irctctourism.com/pacakage_description?packageCode=SZKBG01
http://itms.kar.nic.in/hrcehome/index.php

ರಂಗ ಕಲಾವಿದರಿಂದ ಅಪ್ಪು ಸ್ಮರಣೆ

ಮೈಸೂರು,ಅ.29–ಹುಬ್ಬಳ್ಳಿಯ ಶ್ರೀ ಗಜಾನನ ಡ್ರಾಮಾ ಥೇಟರ್ ಮತ್ತು ಲಕ್ಷ್ಮೇಶ್ವರದ ಶ್ರೀ ಶರಣ ಬಸವೇಶ್ವರ ಕಲಾ ಸಂಘದ ವತಿಯಿಂದ ಮೈಸೂರಿನ ನಜರ್‌ಬಾದ್‌ನಲ್ಲಿರುವ ಜಯಮ್ಮ ಮಲ್ಲೇಗೌಡ ಹಾಲ್‌ನಲ್ಲಿ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್‌ರವರ ಪುಣ್ಯಸ್ಮರಣೆ ಆಚರಿಸಲಾಯಿತು. ಈ ವೇಳೆ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು ಡ್ರಾಮಾ ಥೇಟರ್‌ನ ಮಾಲೀಕ ಬಸವರಾಜ ಕುರಡಗಿಮಠ, ಶ್ರೀಮತಿ ಲತಾ ಕುರಡಗಿಮಠ, ಕಲಾವಿದರಾದ ಮೌಲಾಸಾಬಾ, ಮಾರುತಿ ಬೆಂಗೇರಿ, ನಾಗೇಶ್ ಶಿಗ್ಗಾಂವ್, ಪ್ರಕಾಶ್ ಕಡಪಟ್ಟಿ, ವಿಷ್ಣು ಕೆ. ಮೂರ್ತಿ ಕೊಪ್ಪಳ, ತಿಪ್ಪೇಶ್ ತಾರೆಹಳ್ಳಿ, ವೀಣಾ ಕಡಪಟ್ಟಿ, ಪಿ.ಎಲ್.ಮಮತಾ, ರೂಪಾ, ಮಹಾದೇವಿ, ವಿಜಯಕುಮಾರ್ ಮರೋಳ ಮತ್ತು ಶಿವಕುಮಾರ್ ಉಪಸ್ಥಿತರಿದ್ದರು.

ನಾಳೆಯಿಂದ ಉಚಿತ ಹೃದ್ರೋಗ ತಪಾಸಣೆ ಶಿಬಿರ

ಮೈಸೂರು,ಅ.29–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಅ.31ರಿಂದ ನ.5ರವರೆಗೆ ಉಚಿತ ಹೃದ್ರೋಗ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಉಚಿತ ಸಮಾಲೋಚನೆ ಇದ್ದು, ವೈದ್ಯರು ಸೂಚಿಸುವ ಇ.ಸಿ.ಜಿ., ಲಿಪಿಡ್ ಪ್ರೊಫೈಲ್, ಆರ್.ಬಿ.ಎಸ್., ಎಕೋ ಸ್ಕ್ರೀನಿಂಗ್, ಟಿ.ಎಂ.ಟಿ ಪರೀಕ್ಷೆಗಳಿಗೆ ವಿಶೇಷ ಪ್ಯಾಕೇಜ್ ಲಭ್ಯವಿರುತ್ತದೆ. ಮಾಹಿತಿಗೆ 0821–2533600, 9986399862 ಸಂಪರ್ಕಿಸಿ.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ಒಂದೇ ಸಲ ನಾಲ್ಕು ಹಲ್ಲು ಹೇಗೆ ಹೋಯ್ತು?
ಆತ : ನನ್ನ ಹೆಂಡತಿ ಚಕ್ಕುಲಿ ಮಾಡಿದ್ಲು.
ಡಾಕ್ಟರ್ : ಬೇಡ ಅನ್ನಬೇಕಾಗಿತ್ತು.
ಆತ : ತಿಂದಿದ್ದಕ್ಕೆ ಒಂದು ಹೋಯ್ತು. ಬೇಡ ಅಂದಿದ್ದಕ್ಕೆ ಮೂರು ಹೋಯ್ತು.

ಮೈಸೂರು ಮಿತ್ರ

ಭಾನುವಾರ, 30 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಗೆಲುವು ದ್ವೇಷಕ್ಕೆ ಕಾರಣವಾಗುವುದು. ಸೋತವನು ದುಃಖಕ್ಕೊಳಗಾಗುವನು. ಶಾಂತಿಯಿಂದ ಕೂಡಿರುವವನು ಸೋಲು–ಗೆಲುವುಗಳನ್ನು ತ್ಯಜಿಸಿ ಆನಂದದಿಂದ ಜೀವಿಸುವನು. – ಭಗವಾನ್ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೂಡಿದರೆ ಒಲೆ, ಮಾಡಿದರೆ ಮನೆ

ನಿಮ್ಮ ಪತ್ರಗಳು

ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಅರ್ಹರು ಆಯ್ಕೆಯಾಗಲಿ

ಮಾನ್ಯರೆ,

ರಾಜ್ಯ ಸರ್ಕಾರ ನೀಡುವ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಎರಡಂಕಿಗೆ ಸೀಮಿತವಾಗಿದೆ. ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಸಿಗದ ಸಾಧಕರಿಗೆ ಜಿಲ್ಲೆಯಲ್ಲಿ ಗುರುತಿಸಿ ಜಿಲ್ಲಾಡಳಿತದಿಂದ ಕನ್ನಡ ರಾಜ್ಯೋತ್ಸವದಂದು ಜಿಲ್ಲೆಯಲ್ಲಿನ ಸಾಧಕರಿಗೆ ಸನ್ಮಾನಿಸುವ ಪರಂಪರೆಯನ್ನು ಹಲವು ವರ್ಷಗಳಿಂದ ಮಾಡಿಕೊಂಡು ಬರುತ್ತಿರುವುದು ಸರಿಯಷ್ಟೆ. ಆದರೆ ಸಾಮಾಜಿಕ ಕಳಕಳಿಯಿಂದ ಸನ್ಮಾನಿಸದೆ ರಾಜಕೀಯ ಪ್ರಭಾವ ಬೀರುವವರಿಗೆ ಹಾಗೂ ಅರ್ಜಿ ಹಾಕಿದವರಿಗೆ ಮತ್ತು ಉಪ ಸಮಿತಿಯಲ್ಲಿರುವ ಕೆಲವು ಸದಸ್ಯರು ತಮ್ಮ ಸಂಪರ್ಕದಲ್ಲಿರುವವರಿಗೆ ಈ ಪ್ರಶಸ್ತಿಯನ್ನು ಕೊಡಿಸುತ್ತಿರುವುದು ನಿಜಕ್ಕೂ ಬೇಸರದ ಸಂಗತಿ.

ಉಪ ಸಮಿತಿಯವರು ತಾವು ಸೂಚಿಸಿದ ಪಟ್ಟಿ ಅನುಮೋದನೆ ಮಾಡಲಿಲ್ಲ ಎಂದು ಕೂಗಾಡಿ ಅರಚಾಡಿ ಜಿಲ್ಲಾಡಳಿತಕ್ಕೆ ಅಗೌರವ ತೋರಿಸಿರುವುದು ಕೂಡ ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಬಾರಿ ಜಿಲ್ಲಾ ರಾಜ್ಯೋತ್ಸವ ಸನ್ಮಾನಿತರ ಪಟ್ಟಿ ಗೊಂದಲಕ್ಕೆ ಕಾರಣವಾಗಿದೆ.

ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕ್ರೀಡೆ, ಕಲೆ, ಸಂಸ್ಕೃತಿ, ಸಾಹಿತ್ಯ, ಗಾಯನ, ರಂಗಭೂಮಿ, ಶಿಕ್ಷಣ, ಪರಿಸರ ಜಾಗೃತಿ, ಪೊಲೀಸ್ ಇಲಾಖೆ, ಸಮಾಜ ಸೇವೆ, ಕನ್ನಡ ಹೋರಾಟ, ವಿಶೇಷ ಚೇತನರನ್ನು ಒಳಗೊಂಡಂತೆ ಹೀಗೆ ಹಲವು ಕ್ಷೇತ್ರದವರನ್ನು ಆಯಾ ಆ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಪಡೆದು ಶೇಕಡ 75 ಭಾಗ ಕೆಲಸ ಮಾಡಿದವರನ್ನು ಸ್ವಪ್ರೇರಣೆಯಿಂದ ಗುರುತಿಸಿ, ಶೇಕಡ 25 ಭಾಗ ಮಾತ್ರ ಅರ್ಜಿ ಹಾಕಿದವರನ್ನು ಪರಿಗಣಿಸಿ ಸನ್ಮಾನಿಸಿ ಜಿಲ್ಲಾಡಳಿತ ತನ್ನ ಗೌರವ ಉಳಿಸಿಕೊಳ್ಳಬೇಕು. ಉಪ ಸಮಿತಿ ಸದಸ್ಯರು ಮೊದಲೇ ನಿರ್ಧಾರ ಮಾಡಿಕೊಂಡು ತರುವ ಪಟ್ಟಿಯನ್ನು ಯಾವುದೇ ಕಾರಣಕ್ಕೂ ಅನುಮೋದನೆ ನೀಡಬಾರದು ಎಂದು ಈ ಮೂಲಕ ಮನವಿ.

– ಅರವಿಂದ್ ಶರ್ಮ, ಮೈಸೂರು.

ಖಾಸಗಿ ಕನ್ನಡ ಶಾಲೆಗಳನ್ನು ಉಳಿಸಿ

ಮಾನ್ಯರೆ,

ಖಾಸಗಿ ಕನ್ನಡ ಮಾಧ್ಯಮ ಶಾಲೆಗಳ ಬಗ್ಗೆ 2006ರ ಬಳಿಕ ಬಂದ ಸರ್ಕಾರಗಳು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಾ ಬಂದಿವೆ. ಈ ಬಗ್ಗೆ ಬಹಳಷ್ಟು ಹೋರಾಟಗಳನ್ನು ನಡೆಸಿದಾಗ ಬಂದು ಮನವಿ ಸ್ವೀಕರಿಸಿ ಕಾಲಮಿತಿಯೊಳಗೆ ಬೇಡಿಕೆಗಳನ್ನು ಈಡೇರಿಸಿಕೊಡುವುದಾಗಿ ಭರವಸೆ ನೀಡಿದ ಸಚಿವರು ಈಗ ಚಕಾರವೆತ್ತುತ್ತಿಲ್ಲ. ಸರಕಾರದ ಕೆಲವು ನಿರ್ಧಾರದಿಂದ ಖಾಸಗಿ ಕನ್ನಡ ಮಾಧ್ಯಮ ಶಾಲೆಗಳು ತೀವ್ರ ಸಂಕಷ್ಟದ ಪರಿಸ್ಥಿತಿಯಲ್ಲಿ ಸಿಲುಕಿದೆ. ಭಾಷೆ, ನಾಡು, ನುಡಿಯ ಮೇಲಿನ ಅಭಿಮಾನದಿಂದ ಕನ್ನಡ ಮಾಧ್ಯಮ ಶಾಲೆಗಳನ್ನು ಸ್ವಾತಂತ್ರ್ಯ ಪೂರ್ವದಿಂದಲೂ ಖಾಸಗಿ ಸಂಸ್ಥೆಗಳು, ಮಠಗಳು ಸರಕಾರಕ್ಕೆ ಸರಿಸಮವಾಗಿ ನಡೆಸಿಕೊಂಡು ಬರುತ್ತಿವೆ. ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆ, ಮಾತೃಭಾಷೆ ಉಳಿಸಿ ಬೆಳೆಸಲು ಖಾಸಗಿ ಕನ್ನಡ ಮಾಧ್ಯಮ ಶಾಲೆಗಳು ಭಗೀರಥ ಪ್ರಯತ್ನ ಮಾಡುತ್ತಿವೆ. 1995ರ ನಂತರದ ಖಾಸಗಿ ಕನ್ನಡ ಶಾಲೆಗಳು ಮುಚ್ಚುವ ಹಂತಕ್ಕೆ ಬಂದಿವೆ. ಈಗ ಯಾವುದೇ ಸಂಸ್ಥೆಯವರು ಹೊಸದಾಗಿ ಕನ್ನಡ ಶಾಲೆಗಳನ್ನು ತೆರೆಯುತ್ತಿಲ್ಲ. ಇರುವ ಶಾಲೆಗಳೇ ಮುಚ್ಚುವ ಪರಿಸ್ಥಿತಿಗೆ ಬಂದಿವೆ. ಕನ್ನಡ ಮಾಧ್ಯಮ ಶಾಲೆಗಳ ಬಗ್ಗೆ ಸರಕಾರ ತಾತ್ಸಾರ ಮನೋಭಾವ ತೋರುತ್ತಿದೆ. 2006ರವರೆಗೆ ಅಧಿಕಾರದಲ್ಲಿದ್ದ ಸರಕಾರಗಳು ಖಾಸಗಿ ಕನ್ನಡ ಮಾಧ್ಯಮ ಶಾಲೆಗಳಿಗೆ ಅನುದಾನ ಕಲ್ಪಿಸುವ ಕೆಲಸಕ್ಕೆ ಅನುವು ಮಾಡುತ್ತಿದ್ದವು. ಆದರೆ ಆನಂತರ ಅಧಿಕಾರಕ್ಕೆ ಬಂದ ಸರಕಾರಗಳು ಅದನ್ನು ಕಡಿತಗೊಳಿಸಿದ್ದು, ಈಗ ಕೂಡಲೇ ಹಿಂದಿನಂತೆ ಅನುದಾನವನ್ನು ಮಂಜೂರು ಮಾಡಲು ಸರಕಾರ ಕ್ರಮ ಕೈಗೊಳ್ಳಬೇಕು. ಖಾಸಗಿ ಕನ್ನಡ ಮಾಧ್ಯಮ ಶಾಲೆಯನ್ನು ಉಳಿಸುವ ಮೂಲಕ ಕನ್ನಡ ಭಾಷೆಯನ್ನೂ ಉಳಿಸುವ ಮಹತ್ಕಾರ್ಯಕ್ಕೆ ಮುಂದಾಬೇಕು.

–ವಿಜಯಕುಮಾರ್ ಎಚ್.ಕೆ., ರಾಯಚೂರು

ನೂತನ ಬಸ್ ತಂಗುದಾಣ ನಿರ್ಮಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ. ನಗರ ಗೊಬ್ಬಳಿ ಮರ, ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ಎದುರು ಇರುವ ಬಸ್ ತಂಗುದಾಣ ಶಿಥಿಲಾವಸ್ಥೆಯಲ್ಲಿದೆ. ಮಳೆ ಬಂದಾಗ ಮತ್ತು ಬಿಸಿಲು ಇದ್ದಾಗ ಶಾಲಾ ವಿದ್ಯಾರ್ಥಿಗಳು, ಪ್ರಯಾಣಿಕರು, ಹಿರಿಯ ನಾಗರಿಕರು ಇಲ್ಲಿ ಆಶ್ರಯ ಪಡೆಯುತ್ತಾರೆ. ಈಗಾಗಲೇ ಈ ಬಸ್ ತಂಗುದಾಣ ಸೋರುತ್ತಿದೆ. ಕೆ.ಆರ್.ಕ್ಷೇತ್ರದ ಶಾಸಕರು ಇದರ ಬಗ್ಗೆ ಗಮನಹರಿಸಿ ನೂತನ ಬಸ್ ತಂಗುದಾಣವನ್ನು ಸುಸಜ್ಜಿತವಾಗಿ ನಿರ್ಮಿಸಿ ಮುಂದೆ ಆಗಬಹುದಾದ ಅನಾಹುತ ತಪ್ಪಿಸಬೇಕೆಂದು ಮನವಿ.

–ನೊಂದ ಪ್ರಯಾಣಿಕರು, ಜೆ.ಪಿ.ನಗರ, ಮೈಸೂರು.

ಗಾನ ಚಂದನ ಕಲಾ ಬಳಗದಿಂದ ಡಾ.ಪಿಬಿಎಸ್ ನಿರಂತರ ಸಂಗೀತ ಸಂಜೆ

ಮಾನ್ಯರೇ,

ದಿನಾಂಕ ಅಕ್ಟೋಬರ್ 29ರ ಸಂಚಿಕೆಯ 'ಮೈಸೂರು ಮಿತ್ರ' ಪತ್ರಿಕೆಯ 'ನಿಮ್ಮ ಪತ್ರಗಳು' ವಿಭಾಗದಲ್ಲಿ 'ಡಾ.ಪಿ.ಬಿ.ಶ್ರೀನಿವಾಸ್ ರಸಮಂಜರಿ ಕಾರ್ಯಕ್ರಮ ಆಯೋಜನೆಗೆ ಮನವಿ' ಎಂದು ನೊಂದ ಅಭಿಮಾನಿಗಳು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಆದರೆ ನಮ್ಮ ಸಂಸ್ಥೆಯಿಂದ ನಿರಂತರವಾಗಿ ಡಾ.ಪಿಬಿಎಸ್ ಗೀತೆಗಳ ಸಂಗೀತ ಸಂಜೆಯನ್ನು ನಡೆಸುತ್ತಾ ಬರುತ್ತಿದ್ದೇವೆ. ಇದು ಅವರ ಗಮನಕ್ಕೆ ಬರದೇ ಇರಬಹುದು. ಈಗಾಗಲೇ ಡಾ.ಪಿಬಿಎಸ್ ಅವರನ್ನು ಕುರಿತು ಎರಡು ದೊಡ್ಡ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, 'ಡಾ.ಪಿ.ಬಿ. ಶ್ರೀನಿವಾಸ್ ಒಂದು ನೆನಪು' ಎಂಬ ಶೀರ್ಷಿಕೆಯಡಿಯಲ್ಲಿ 2021ರ ಡಿಸೆಂಬರ್ 4ರ ಶನಿವಾರ ಹಾಗೂ 2021ರ ಮೇ 7ರ ಶನಿವಾರ ಕಾರ್ಯಕ್ರಮ ಆಯೋಜಿಸಿ, ಅಭೂತಪೂರ್ವ ಯಶಸ್ಸನ್ನು ಕಂಡಿತು. ಇನ್ನು ಇದೇ ವರ್ಷ ಡಿಸೆಂಬರ್‌ನಲ್ಲಿ ಮುಂದಿನ ಕಾರ್ಯಕ್ರಮವನ್ನು ಮೈಸೂರು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ನೊಂದ ಡಾ.ಪಿಬಿಎಸ್ ಅಭಿಮಾನಿಗಳು ದಯವಿಟ್ಟು ಕಾರ್ಯಕ್ರಮಕ್ಕೆ ಆಗಮಿಸಿ, ನಮ್ಮನ್ನು ಹರಸಬೇಕೆಂದು ಕೋರಿಕೆ.

– ಆರ್.ಸುಧೀಂದ್ರ, ಅಧ್ಯಕ್ಷರು, ಗಾನ ಚಂದನ ಕಲಾ ಬಳಗ, ಶಾರದಾದೇವಿ ನಗರ, ಮೈಸೂರು



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಪ್ರತಿಭಾ ಮೇರು ಶಿಖರ ಪ್ರೊ.ರಾ.ವಿಶ್ವೇಶ್ವರನ್

ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ।
ವಿಶ್ವೇಶ್ವರ ಸಮೋ ಗಾನೇ ಸಾಕ್ಷಾದ್ ವಿಶ್ವೇಶ್ವರೋ ಮತಃ॥

ವಿಶಾಲತೆಯಲ್ಲಿ ಆಕಾಶಕ್ಕೆ ಆಕಾಶವೇ ಸಮ, ಆಳದಲ್ಲಿ ಕಡಲಿಗೆ ಕಡಲೇ ಸಾಟಿ. ಸಂಗೀತದಲ್ಲಿ ರಾ.ವಿಶ್ವೇಶ್ವರನ್ ಅವರಿಗೆ ವಿಶ್ವೇಶ್ವರನ್ ಅವರೇ ಸಮಾನರು. ಇಲ್ಲಿ ಅನನ್ವಯಾಲಂಕಾರ. ವರ್ಣನೀಯ ವಸ್ತುವಿಗೆ ಉಪಮಾನವೇ ಸೃಷ್ಟಿಯಲ್ಲಿ ಇಲ್ಲ ಎಂದು ಹೇಳುವುದು ಇದರ ಉದ್ದೇಶ. ಮೇಲಿನ ಶ್ಲೋಕದ ಪೂರ್ವಾರ್ಧ ಆದಿಕವಿ ವಾಲ್ಮೀಕಿಯದು. ಉತ್ತರಾರ್ಧ ಮಾತ್ರ ನನ್ನದು. ಇಲ್ಲಿ ಅನನ್ವಯಾ ಲಂಕಾರ ಬೇಡವೆಂದರೆ, ಎರಡನೆಯ ವಿಶ್ವೇಶ್ವರ ಶಬ್ದಕ್ಕೆ ಸಕಲ ಜಗತ್ತಿನ ಒಡೆಯ, ಕಾಶಿಯಲ್ಲಿ ವಿರಾಜಮಾನನಾದ, ಸರ್ವವಿದ್ಯೆಗಳಿಗೆ ಮೂಲನಾದ ವಿಶ್ವೇಶ್ವರ ಎಂದು ಇಟ್ಟುಕೊಳ್ಳಬಹುದು. ಈ ಅಲಂಕಾರದಿಂದ ಅಭಿವ್ಯಂಜನೀಯವಾಗಿರುವುದು ವಿಸ್ಮಯ ಸ್ಥಾಯಿ ಭಾವದಿಂದ ಹುಟ್ಟುವ ಅದ್ಭುತ ರಸ.

ನಾನು ಪ್ರೊ ರಾ.ವಿಶ್ವೇಶ್ವರನ್ ಅವರನ್ನು ನೋಡಿದಾಗಲೆಲ್ಲ, ಅತ್ಯುನ್ನತ ಪರ್ವತ ಶಿಖರವನ್ನು, ಅನಂತವಾದ ಸಮುದ್ರವನ್ನು ಅನೇಕ ಕೋಟಿ ಬ್ರಹ್ಮಾಂಡಗಳನ್ನು ತನ್ನ ಒಡಲಿನಲ್ಲಿ ಅಡಗಿಸಿಕೊಂಡಿರುವ ಆಗಸವನ್ನು ನೋಡಿದ ಅನುಭವವಾಗುತ್ತದೆ. ಸಂಗೀತ ಪ್ರಪಂಚದ ಸಮಸ್ತ ರಹಸ್ಯಗಳನ್ನೂ ಅರಿತುಕೊಳ್ಳಬಲ್ಲ ಧಿಷಣಾಶಕ್ತಿಯನ್ನು ಹೊಂದಿರುವ ಒಬ್ಬ ವಿದ್ವಾಂಸನನ್ನು ಸೃಷ್ಟಿಸು ಎಂದು ಜಗನ್ಮಾತೆ ರಾಜರಾಜೇಶ್ವರಿ ಚತುರ್ಮುಖ ಬ್ರಹ್ಮನಿಗೆ ಆಜ್ಞಾಪಿಸಿದಾಗ ಆ ಚತುರ್ಮುಖನು ಚತುರತೆಯ ಪರಾಕಾಷ್ಠೆಯನ್ನು ತಲುಪಿ ಪ್ರೊ. ರಾ.ವಿಶ್ವೇಶ್ವರನ್ ಅವರನ್ನು ಸೃಷ್ಟಿಸಿರಬೇಕು. ಅವರೊಡನೆ ಸಂಭಾಷಣೆಗೆ ತೊಡಗಿದರೆ ಅವರ ಬಾಯಿಯಿಂದ ಸೂತ್ರಪ್ರಾಯವಾದ ಮಾತುಗಳು ಬರುತ್ತವೆ. ಪಾಣಿನಿಯ ಅಥವಾ ಪತಂಜಲಿಯ ಅಥವಾ ಭರತಮುನಿಯ ವಚನಗಳನ್ನು ಕೇಳುತ್ತಿದ್ದೇವೆ, ಭಾಷೆ ಮಾತ್ರ ಕನ್ನಡ ಎನಿಸಿಬಿಡುತ್ತದೆ.

ಸಂಗೀತವನ್ನು ಕೇಳಿ ಆನಂದಿಸುವ ಲಕ್ಷಾಂತರ ಜನರಿದ್ದಾರೆ. ಸಂಗೀತವನ್ನು ಕೇಳಿಸಿ ಎಲ್ಲರ ಆನಂದವನ್ನು ತರಬಲ್ಲವರು ವಿರಳ. ಸಂಗೀತವನ್ನು ಹಾಡುವುದು ಮಾತ್ರವಲ್ಲ, ಅದರ ಮೂಲ ತತ್ತ್ವಗಳನ್ನೂ ಪ್ರಯೋಗ ರಹಸ್ಯಗಳನ್ನೂ ಅರಿಯಬಲ್ಲ ವಿದ್ವಾಂಸರು ವಿರಳತರ. ಅದೆಲ್ಲವನ್ನೂ ಅರಿತು ಶಾಸ್ತ್ರಾನುಗುಣವಾಗಿ ವಾಗ್ಗೇಯಗಳ ರಚನೆಯನ್ನು ಮಾಡಬಲ್ಲವರು ವಿರಳತಮ. ಅಂತಹವರು ಕೋಟಿಗೊಬ್ಬರು. ಹಾಗೆ ಮಾಡಬಲ್ಲವರು ಅನೇಕ ಜನ್ಮಸಂಸ್ಕಾರ ಸಂಪನ್ನರಾಗಿರಬೇಕು. ಈ ಜನ್ಮದಲ್ಲಿ ತಪಸ್ವಿಗಳಾಗಿರಬೇಕು. ಇಲ್ಲದಿದ್ದರೆ ಸರಸ್ವತಿ ಒಲಿಯುವುದಿಲ್ಲ. ಹಾಗೆ ಸಂಗೀತ ಸರಸ್ವತಿಯನ್ನು ಒಲಿಸಿಕೊಂಡು ತ್ಯಾಗರಾಜರಂತೆ, ಮುತ್ತುಸ್ವಾಮಿ ದೀಕ್ಷಿತರಂತೆ, ಶ್ಯಾಮಶಾಸ್ತ್ರಿಗಳಂತೆ ಸಂಗೀತ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯನ್ನು ಕೊಟ್ಟಿರುವ ಪ್ರೊ. ಆರ್.ವಿಶ್ವೇಶ್ವರನ್ ಮೈಸೂರಿನವರೆಂಬುದು ನಮ್ಮೆಲ್ಲರಿಗೆ ಹೆಮ್ಮೆಯ ಮತ್ತು ಅಭಿಮಾನದ ವಿಷಯ.

ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದ ಅಪ್ಪಯ್ಯ ದೀಕ್ಷಿತರು ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ಚಿದಂಬರಂ ಎಂಬ ನಗರದಲ್ಲಿದ್ದರು. ಅವರನ್ನು ಕುರಿತು ನೀಲಕಂಠ ದೀಕ್ಷಿತರು ಹೇಳುತ್ತಾರೆ

– ಯಂ ವಿದ್ಮ ಇತಿ ಯದ್‌ಗ್ರಂಥಾನ್ ಅಭ್ಯಸ್ಯಾಮೋಽಖಿಲಾನಿತಿ।
ಯಸ್ಯ ಶಿಷ್ಯಃ ಸ್ಮ ಇತಿ ಚ ಕತ್ಥಂತೇ ಸ್ವಂ ವಿಪಶ್ಚಿತಃ॥

ನಮಗೆ ಅಪ್ಪಯ್ಯ ದೀಕ್ಷಿತರು ಗೊತ್ತು ಎಂದು ಕೆಲವರು ವಿದ್ವಾಂಸರೂ, ಅವರ ಗ್ರಂಥಗಳನ್ನೆಲ್ಲ ಅಧ್ಯಯನ ಮಾಡಿದ್ದೇವೆ ಎಂದು ಇನ್ನು ಕೆಲವರೂ, ನಾವು ಅವರ ಶಿಷ್ಯರು ಎಂದು ಮತ್ತೆ ಕೆಲವರೂ ಜಂಬ ಕೊಚ್ಚಿಕೊಳ್ಳುತ್ತಾರೆ. ನಾವು ಇದೇ ಶ್ಲೋಕವನ್ನು ರಾ.ವಿಶ್ವೇಶ್ವರನ್ ಅವರ ಬಗೆಗೆ ಹೇಳಿಕೊಂಡು ಧನ್ಯರಾಗುತ್ತಿದ್ದೇವೆ. ಮೈಸೂರಿಗೆ ಅರಮನೆ ಆಭರಣದಂತಿದೆ, ದೊಡ್ಡ ಗಡಿಯಾರ ಒಡವೆಯಂತಿದೆ ಎಂದು ಹೇಳುತ್ತಾರೆ. ಆದರೆ ಅದರ ನಿಜವಾದ ಒಡವೆಗಳು ಪ್ರೊ. ವಿಶ್ವೇಶ್ವರನ್ ಅವರಂತಹ ವಿದ್ವಾಂಸರು, ಕಲಾವಿದರು.

ರಾ.ವಿಶ್ವೇಶ್ವರನ್ ಅವರು ಜಗತ್ತಿಗೇ ಸಂಗೀತದ ಗುರುಗಳಾಗುವಂತೆ ವಿದ್ಯೆಯನ್ನು ಪಡೆಯುವುದಕ್ಕೆ, ಎಲ್ಲರಿಗೂ ಆದರ್ಶವಾಗುವ ಸಂಸ್ಕಾರ ಸಂಪನ್ನರಾಗುವುದಕ್ಕೆ ಕಾರಣರಾದವರು ಅವರ ಮಾತಾಪಿತೃಗಳು. ತಂದೆ ಬಿ.ರಾಮಯ್ಯನವರು ಮತ್ತು ತಾಯಿ ಶ್ರೀಮತಿ ವರಲಕ್ಷ್ಮಮ್ಮನವರು. ವಿಶ್ವೇಶ್ವರನ್ ಅವರ ಸಹೋದರರು ಕೀರ್ತಿಶೇಷರೂ ಪ್ರಾತಃಸ್ಮರಣೀಯರೂ ಆದ ರಾ.ಚಂದ್ರಶೇಖರಯ್ಯನವರು. ಡಾ. ರಾ.ಸತ್ಯನಾರಾಯಣ ಅವರು, ಶ್ರೀ ರಾ.ಸೀತಾರಾಮ್ ಅವರು. ಎಲ್ಲರೂ ಹೆಸರಾಂತ ಕಲಾವಿದರೂ ಶಾಸ್ತ್ರಜ್ಞರೂ ಆಗಿದ್ದವರೇ. ಹಿಮಾಲಯದ ಶೃಂಗಗಳಂತೆ ಔನ್ನತ್ಯವನ್ನು ಹೊಂದಿದ್ದವರು.

ರಾ.ವಿಶ್ವೇಶ್ವರನ್ ಅವರು ಗಾಯಕರು, ವೈಣಿಕರು, ಶಾಸ್ತ್ರಜ್ಞರು, ವಾಗ್ಗೇಯಕಾರರು. ಅವರ ಪ್ರತಿಭೆಯ ಗಣಿಯಲ್ಲಿ ಇನ್ನೂ ಯಾವ ಯಾವ



> ಪ್ರೊ.ರಾ.ವಿಶ್ವೇಶ್ವರನ್ ಅವರು ಸಂಗೀತ ವಿಶ್ವಕ್ಕೆ ಕೊಟ್ಟಿರುವ ಮಹತ್ವದ ಕೊಡುಗೆ ವಾಗ್ಗೇಯ ವಿಶ್ವೇಶ್ವರೀ. ಇಂತಹ ಇನ್ನೊಂದು ಪುಸ್ತಕವನ್ನು ನಾವು ಕಂಡಿಲ್ಲ. ಈ ವಾಗ್ಗೇಯಗಳು ಮೂರು ಭಾಷೆಗಳಲ್ಲಿ ರಚಿತವಾಗಿವೆ. ಕನ್ನಡ, ತೆಲುಗು ಮತ್ತು ಸಂಸ್ಕೃತ ಭಾಷೆಗಳ ಮೇಲೆ ವಿಶ್ವೇಶ್ವರನ್ ಅವರಿಗೆ ಪ್ರಭುತ್ವವಿರುವುದರಿಂದ ಮೂರರಲ್ಲೂ ಕೃತಿಗಳನ್ನು ರಚಿಸಿದ್ದಾರೆ. ಮೊದಲು ಕೃತಿಯ ಸಾಹಿತ್ಯವನ್ನು ಕೊಟ್ಟು ಅನಂತರ ಅದರ ಅರ್ಥ–ವ್ಯಾಖ್ಯಾನಗಳನ್ನು ಬರೆದು ಅನಂತರ ಅದರ 'ಧಾತು' (ಸ್ವರ ಪ್ರಸ್ತಾರ)ವನ್ನು ನೀಡಿದ್ದಾರೆ. 'ವಿಶ್ವೇಶ್ವರ' ಎಂಬ ಮುದ್ರೆ ಎಲ್ಲ ಕೃತಿಗಳಲ್ಲೂ ಬಂದಿದೆ. ಪ್ರತಿಯೊಂದು ಕೃತಿಗೂ ತಾಳವನ್ನೂ, ರಾಗವನ್ನೂ ಮೊದಲು ನಿರ್ದೇಶಿಸಿದ್ದಾರೆ.

ರತ್ನಗಳಿವೆಯೋ ನನಗೆ ತಿಳಿಯದು. ಅವರಿಗೆ ಅತ್ಯಂತ ಪ್ರಿಯವಾದುದು ವೀಣೆ ಎಂಬುದು ನಿರ್ವಿವಾದ. ಅದು ನಮ್ಮ ದೇಶದ ಅತ್ಯಂತ ಪ್ರಾಚೀನ ತಂತ್ರೀವಾದ್ಯ. ನಮ್ಮ ದೇವತೆಗಳೆಲ್ಲರೂ ವೀಣಾನಾದದ ಮಾಧುರ್ಯವನ್ನು ಸವಿದವರೇ. ಸರಸ್ವತಿಯನ್ನು ವೀಣೆಯಿಲ್ಲದೆ ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. **'ಯಾ ವೀಣಾವರದಂಡ ಮಂಡಿತಕರಾ'**. ಅವಳ ವೀಣೆಯ ಹೆಸರು **ಕಚ್ಛಪೀ** ಎನ್ನುತ್ತಾರೆ. ನಾರದನಂತೂ ಸದಾ ವೀಣಾಧಾರಿ. ಅದರ ಹೆಸರು **ಮಹತೀ**. ವೀಣೆಯ ಲಕ್ಷಣವನ್ನೂ ಭೇದಗಳನ್ನೂ ಹೇಳುವ ಗ್ರಂಥಗಳಿವೆ. ನಾನು ಸುಮಾರು ಅರವತ್ತು ವರ್ಷಗಳಷ್ಟು ಹಿಂದೆ, 1960ರ ದಶಕದಲ್ಲಿ, ರಾ. ವಿಶ್ವೇಶ್ವರನ್ ಅವರು ತಾರುಣ್ಯದ ತೇಜಸ್ಸಿನಿಂದ ಕಂಗೊಳಿಸುತ್ತಿದ್ದಾಗಲೇ ಅವರ ವೀಣಾವಾದನವನ್ನು ಕೇಳಿ ಅವರ ಅಭಿಮಾನಿ ಸಮೂಹದಲ್ಲಿ ಸೇರಿಹೋಗಿದ್ದೆ. ಇಂದಿಗೂ ಆ ಅಭಿಮಾನ ಕುಗ್ಗಿಲ್ಲ. ಸಂಗೀತ ಶಾಸ್ತ್ರಜ್ಞರಾಗಿ ಅವರು ಅಧಿಕೃತವಾಗಿ ಮಾತನಾಡುತ್ತಾರೆ, ಬರೆಯುತ್ತಾರೆ. ಅದರ ಒಂದು ಉದಾಹರಣೆ–

"ಸಂಗೀತದ ರಚನೆಯೆಂದರೆ 'ಮಾತು' ಭಾಗದ ಶಬ್ದಗಳು ಅರ್ಥಪೂರ್ಣವಾಗಿರುವಂತೆ 'ವಾಕ್ಯ' ರಚನೆಯಾಗಿರಬೇಕು. ಅರ್ಥಪೂರ್ಣವಾಗಿದ್ದು ವ್ಯಾಕರಣದ ಆವಶ್ಯಕತೆ–ಅಪೇಕ್ಷೆಗಳನ್ನು ಪೂರೈಸಲೇಬೇಕು. ಅದರ ಕರ್ತೃವಿಗೆ ಶಬ್ದಗಳ ನಾನಾರ್ಥ–ದ್ವಂದ್ವಾರ್ಥಗಳ ಹಾಗೂ ಪರ್ಯಾಯ ಪದಗಳ ಅರಿವು, ಉಪಯೋಗ ಪ್ರಜ್ಞೆ ಇರಬೇಕು. ಕಾವ್ಯದ (ಪದ್ಯ ಪ್ರಕಾರದ)ಮೂಲಭೂತ ಆವಶ್ಯಕತೆಯಾದ ಛಂದಸ್ಸಿನ ಪ್ರಜ್ಞಾ–ಜ್ಞಾನಗಳಿರಬೇಕು ಮತ್ತು ಸಂಗೀತ ರಚನೆಗಳಲ್ಲಿ ಛಂದದ ಸ್ಥಾನದಲ್ಲಿ ಕ್ರಿಯಿಸುವ ಲಯ–ತಾಳಗಳಲ್ಲಿ ಸಾಹಿತ್ಯದ, ಸಾಹಿತ್ಯಾಕ್ಷರಗಳ ನೆಲೆ ಮತ್ತು ಅದರ ಸೌಂದರ್ಯ ಸ್ಥಾಪನೆಯ ಜಾಣ್ಮೆ ಇರಬೇಕು. ಜೋಡಿಸುವ ಮಾತುಗಳು ಚೇತೋಹಾರಿಯಾಗಿರುವಂತೆ ಕಾವ್ಯ ಭಾವವೂ ಚಮತ್ಕಾರಗಳೂ ಇರಬೇಕು". ಇಂತಹ ಮಾತುಗಳನ್ನು ಶಾಸ್ತ್ರಜ್ಞರಲ್ಲದವರು ಬರೆಯಲು ಶಕ್ಯವೆ?

ಇನ್ನು ವಾಗ್ಗೇಯಕಾರರಾಗಿ ರಾ.ವಿಶ್ವೇಶ್ವರನ್ ಎಂಬುದು ಒಂದು ಮಹಾ ಪ್ರಬಂಧಕ್ಕೆ ವಸ್ತುವಾಗಬಲ್ಲುದು. ವಾಗ್ಗೇಯಕಾರನೆಂದರೆ ಯಾರು ಎಂಬ ಬಗೆಗೆ ಅವರ ನಿಲುವು ಸ್ಪಷ್ಟವಾಗಿದೆ.

"ಧಾತುವಿನ ಅನುಭವ ಅಥವಾ ಪರಿಣತಿಗಳಿಲ್ಲದೆ 'ಮಾತು' ರಚಿಸಬಲ್ಲವರು ಲಭಿಸುತ್ತಾರೆ. 'ಮಾತು'ವಿನ ಗೊಡವೆಯೇ ಬೇಕಿಲ್ಲದ 'ಧಾತು' ರಚಿಸಬಲ್ಲವರು ಇನ್ನೂ ಹೆಚ್ಚು ಮಂದಿ ಲಭಿಸುತ್ತಾರೆ. ಮಾತು ಧಾತುಗಳೆರಡನ್ನೂ ತಾವೇ ರಚಿಸಬಲ್ಲವರು ವಿರಳ. ಉತ್ಕೃಷ್ಟ ಗುಣಮಟ್ಟದಲ್ಲಿ ಮಾತುಧಾತುಗಳ ಪರಿಣತಿ ಹೊಂದಿ ಎರಡನ್ನೂ ಜತೆ ಜತೆಯಲ್ಲೇ ಆವಿಷ್ಕರಿಸುವಂತೆ ಸ್ಫೂರ್ತಿಯಿಂದ ಆಶುವಾಗಿ ರಚಿಸಬಲ್ಲವರು ಮತ್ತಷ್ಟು ವಿರಳ. ಈ ಅತಿ ವಿರಳ ವರ್ಗದ ವಾಗ್ಗೇಯಕಾರರಲ್ಲಿ ನಮ್ಮ ಸಂಗೀತ ತ್ರಿಮೂರ್ತಿಗಳೂ ಅವರಿಗೆ ಸ್ಫೂರ್ತಿಪ್ರಾಯರಾಗಿದ್ದಿರಬಹುದಾದ ಊತ್ತುಕ್ಕಾಡು ವೆಂಕಟಸುಬ್ಬಯ್ಯರ್ ಅವರು. ನಮಗೆ ಆದರ್ಶ ವಾಗ್ಗೇಯಕಾರರಾಗಿ ನಿಲ್ಲುತ್ತಾರೆ" ಎಂದು ಅವರು ಬರೆದಿದ್ದಾರೆ.

ವಾಗ್ಗೇಯ ವಿಶ್ವೇಶ್ವರೀ: ಪ್ರೊ. ರಾ.ವಿಶ್ವೇಶ್ವರನ್ ಅವರು ಸಂಗೀತ ವಿಶ್ವಕ್ಕೆ ಕೊಟ್ಟಿರುವ ಮಹತ್ವದ ಕೊಡುಗೆ ವಾಗ್ಗೇಯ ವಿಶ್ವೇಶ್ವರೀ. ಇಂತಹ ಇನ್ನೊಂದು ಪುಸ್ತಕವನ್ನು ನಾವು ಕಂಡಿಲ್ಲ. ಈ ವಾಗ್ಗೇಯಗಳು ಮೂರು ಭಾಷೆಗಳಲ್ಲಿ ರಚಿತವಾಗಿವೆ. ಕನ್ನಡ, ತೆಲುಗು ಮತ್ತು ಸಂಸ್ಕೃತ ಭಾಷೆಗಳ ಮೇಲೆ ವಿಶ್ವೇಶ್ವರನ್ ಅವರಿಗೆ ಪ್ರಭುತ್ವವಿರುವುದರಿಂದ ಮೂರರಲ್ಲೂ ಕೃತಿಗಳನ್ನು ರಚಿಸಿದ್ದಾರೆ. ಮೊದಲು ಕೃತಿಯ ಸಾಹಿತ್ಯವನ್ನು ಕೊಟ್ಟು ಅನಂತರ ಅದರ ಅರ್ಥ–ವ್ಯಾಖ್ಯಾನಗಳನ್ನು ಬರೆದು ಅನಂತರ ಅದರ 'ಧಾತು' (ಸ್ವರ ಪ್ರಸ್ತಾರ)ವನ್ನು ನೀಡಿದ್ದಾರೆ. 'ವಿಶ್ವೇಶ್ವರ' ಎಂಬ ಮುದ್ರೆ ಎಲ್ಲ ಕೃತಿಗಳಲ್ಲೂ ಬಂದಿದೆ. ಪ್ರತಿಯೊಂದು ಕೃತಿಗೂ ತಾಳವನ್ನೂ, ರಾಗವನ್ನೂ ಮೊದಲು ನಿರ್ದೇಶಿಸಿದ್ದಾರೆ. ದ್ವಿತೀಯಾಕ್ಷರ ಪ್ರಾಸವನ್ನು ಜತನದಿಂದ ಕಾಪಾಡಿದ್ದಾರೆ. ಉದಾಹರಣೆಗೆ ಒಂದು ಕನ್ನಡ ಕೃತಿಯನ್ನು ನೋಡಬಹುದು.

ಪುರಂದರದಾಸ ಸ್ತುತಿ

ರಾಗ: ಭೈರವಿ; ತಾಳ: ಆದಿ

ಸಾಹಿತ್ಯ:-

ದಾಸರೆ ಹರಿದಾಸರೆಂದರೆ ನೀವಲ್ಲವೇ
ಪುರಂದರದಾಸರೇ (ಪಲ್ಲವಿ)
ಈಸು ಲೆಕ್ಕಿಸದೆ ನವಕೋಟಿ ಸಿರಿಗೆ
ಕೃಷ್ಣಾರ್ಪಣವೆಂದು ತುಳಸೀದಳವಿಟ್ಟ
ಧೀರ ಪುರಂದರ ದಾಸರೇ ॥ ಅನುಪಲ್ಲವಿ॥
ವ್ಯಾಸತೀರ್ಥರೊಳು ವಿದ್ಯೆಯ ಕಲಿತು
ದಾಸ ದೀಕ್ಷೆಯಂ ಪಡೆದ ಧೀಮಂತರೇ।
ಭೂಸುರ ಕೋಟಿಗೆ ವೇದಾಂತವನು
ಸಾಸಿರ ಗೀತದಿಂ ಒರೆದ ಮಹಿಮರೇ ।
ಕಾಸು ಕಾಸಿಗೆ ಗಂಟಿಕ್ಕಿದವರನು
ಪ್ರಾಸದಲಿ ಗೇಲಿ ಮಾಡಿಟ್ಟವರೇ
ತ್ರಾಸವರಿಯದೆ ವೈಕುಂಠಪತಿ ಹರಿ ಕೈ–
ಲಾಸಪತಿ ವಿಶ್ವೇಶ್ವರರ ನುತಿಪರೆ ॥ಚರಣ॥
ನರ್ತನಡಿ ವಿಠಲನೆದುರಿನಲಿ ಪಾಡಿ
ವಾತಸುತ ಸರಸತಿಯರು ಪೇಳಿದ ಸಂ–
ಗೀತ ವಿದ್ಯೆಯನು ಸುಲಭದಿ ಕಲಿಯಲು
ನೂತನ ಬೋಧನ ತಂತ್ರವ ಸೃಜಿಸಿ
ವೃತ್ತ ನಾಮ ಸುಳಾದ್ಯುಗಾ ಭೋಗ
ಚಿತ್ತದಲಿ ನಿಲುವ ಚೆಲುವನು ತಿಳಿಸಿ
ಮತ್ತೆ ತಾಳಗಳ ಶಾಸ್ತ್ರದಿಂದೆಳೆದು
ಇತ್ತ ಲಕ್ಷ್ಯದಲಿ ನೆಟ್ಟ ಪುರಂದರ ॥ಚರಣ॥

ಎಷ್ಟು ಸರಳವಾದ ಕನ್ನಡವನ್ನು ಬಳಸಿದ್ದಾರೆ ವಿಶ್ವೇಶ್ವರನ್ ಅವರು. ಪುರಂದರದಾಸರ ಶೈಲಿಯಲ್ಲೇ ಪುರಂದರ ದಾಸರನ್ನು ಹೊಗಳಿರುವುದು ಅದ್ಭುತವೆನಿಸುತ್ತದೆ. ಸಂಸ್ಕೃತದ ಕೃತಿಗಳಲ್ಲಿ ಮುತ್ತುಸ್ವಾಮಿ ದೀಕ್ಷಿತರ ಪ್ರಭಾವ ಹೆಚ್ಚಾಗಿ ಕಾಣಬಹುದು ಎಂಬುದನ್ನು ಪ್ರೊ. ವಿಶ್ವೇಶ್ವರನ್ ಅವರೇ ಹೇಳಿದ್ದಾರೆ.

"ಹಿಂದೆ ಹೇಳಿರುವಂತೆ ಸಂಗೀತ ತ್ರಿಮೂರ್ತಿಗಳೆಲ್ಲರಲ್ಲಿಯೂ ನನ್ನ ಗಾಢಭಕ್ತಿ ಪ್ರಶ್ನಾತೀತವಾದರೂ, ನನ್ನ ವಾಗ್ಗೇಯಕಾರತ್ವಕ್ಕೆ ಅತಿ ಹೆಚ್ಚಿನ ಸ್ಫೂರ್ತಿಯು ಮಹಾನುಭಾವರಾದ ಶ್ರೀ ಮುತ್ತುಸ್ವಾಮಿ ದೀಕ್ಷಿತರ ಮಹಾವ್ಯಕ್ತಿತ್ವದ ಮತ್ತು ಅವರ ಕೃತಿಗಳಲ್ಲಿನ ಧಾತು ಮಾತುಗಳ ಅಧ್ಯಯನದಿಂದಲೂ, ಮನನದಿಂದಲೂ ಅವರಲ್ಲಿ ನನ್ನ ವಿಶೇಷ ಭಕ್ತಿಯಿಂದಲೂ ನನಗೆ ಒದಗಿ ಬಂದಿದೆ ಎಂದೇ ನನ್ನ ನಂಬಿಕೆ."

ತೆಲುಗಿನಲ್ಲಿ ಯಾರೇ ಸಂಗೀತ ಕೃತಿ ರಚನೆ ಮಾಡಿದಾಗ ಅಲ್ಲಿ ತ್ಯಾಗರಾಜರ ಛಾಪು ಇದ್ದೇ ಇರುತ್ತದೆ ಎಂದು ನಮ್ಮ ಅನಿಸಿಕೆ. ಅದನ್ನು ತಿಳಿಸುತ್ತಾ ಹೋಗುವುದು ಈ ಲೇಖನದ ಮಿತಿಗೆ ಮೀರಿದುದು.

ಪ್ರೊ. ವಿಶ್ವೇಶ್ವರನ್ ಎಷ್ಟೊಂದು ಕೆಲಸ ಮಾಡಿದ್ದಾರೆ! ಅಪೂರ್ವವಾದ, ಬಳಕೆ ತಪ್ಪಿಹೋಗಿದ್ದ ರಾಗಗಳಲ್ಲೂ ಕೃತಿಗಳನ್ನು ರಚಿಸಿದ್ದಾರೆ. ತಾವೇ ಹೊಸ ರಾಗಗಳನ್ನು ಆವಿಷ್ಕರಿಸಿದ್ದಾರೆ. ಅವರಿಗೆ ವಿಶ್ವದಲ್ಲೆಲ್ಲ ಸಮ್ಮಾನಗಳು, ಪ್ರಶಸ್ತಿಗಳು, ಬಿರುದುಗಳು ಸಂದಿರುವುದು ಸಹಜವೇ. ಅವರು ವೀಣಾವಾದನ ತತ್ತ್ವಜ್ಞರೂ ಅಹುದು, ಸಂಗೀತ ಸಾರ್ವಭೌಮರೂ ಅಹುದು. ಕರ್ನಾಟಕ ರಾಜ್ಯ ಸಂಗೀತ ವಿದ್ವಾನ್ ಆಗಿದ್ದಾರೆ. ಭಾರತ ರಾಷ್ಟ್ರ ಸಂಗೀತ ವಿದ್ವಾನ್ ಎಂದರೂ ತಪ್ಪಿಲ್ಲ.

ಅವರಿಗೆ ಭಾನುವಾರ (30–10–2022) ನಾದಬ್ರಹ್ಮ ಸಂಗೀತ ಸಭಾ ಭವನದಲ್ಲಿ ಸುರಭಿ ಗಾನಕಲಾ ಮಂದಿರದವರು ಅಕ್ಷರ ನಮನವನ್ನು ಸಲ್ಲಿಸುತ್ತಿರುವುದು ಅವರ ಪ್ರತಿಭೆಗೆ ತೋರಿಸುತ್ತಿರುವ ಗೌರವ. ಅವರ ಚರಣಾರವಿಂದಗಳಿಗೆ ನಮ್ಮದೂ ನಮನ.

ಅಲ್ಪಾವಧಿಯಲ್ಲೇ ತಂದೆ ಎತ್ತರಕ್ಕೆ ಬೆಳೆದ ಮಗ ಅಪ್ಪು

● ಹಿರಿಯ ಸಾಹಿತಿ ಸಿಪಿಕೆ ಸ್ಮರಣೆ ● ಸದ್ದಿಲ್ಲದೆ ಅವರ ಸಮಾಜ ಸೇವೆ ಶ್ಲಾಘನೀಯ

ಮೈಸೂರು, ಅ.29(ಎಸ್‌ಪಿಎನ್)– ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ಅವರು ಅಲ್ಪಾವಧಿಯಲ್ಲೇ ಕಲೆಯಲ್ಲಿ ತಂದೆ ಎತ್ತರಕ್ಕೆ ಬೆಳೆದ ಮಗ ಎಂದರೆ ತಪ್ಪಾಗಲಾರದು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರದ ಒಂದನೇ ಹಂತದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಅವರ ಪ್ರಥಮ ಪುಣ್ಯಸ್ಮರಣೆ ಅಂಗವಾಗಿ 'ಅಪ್ಪು ಸ್ಮರಣೆ ಮತ್ತು ಗಾಯನೋತ್ಸವ' ಹಾಗೂ ಸಾಂಸ್ಕೃತಿಕ ಲೋಕ ಟ್ರಸ್ಟ್ ಉದ್ಘಾಟನಾ ಸಮಾರಂಭದಲ್ಲಿ ಅಪ್ಪು ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಪವರ್ ಸ್ಟಾರ್ 'ಅಪ್ಪು' ಸಾಧನೆಯಲ್ಲಿ ಗುರುವನ್ನೂ ಮೀರಿಸಬೇಕು ಎಂಬ ನಾಣ್ನುಡಿಯಿದೆ. ಆದರೆ, ಅಪ್ಪು ವಿಚಾರದಲ್ಲಿ ಕಲೆಯಲ್ಲಿ ತಂದೆಯನ್ನು ಮೀರಿಸಿದ ಮಗ ಎಂದರೆ ತಪ್ಪಾಗಲಾರದು. 'ಅಪ್ಪು' ತಮ್ಮ ಜೀವಿತಾವಧಿಯಲ್ಲಿ ಯಾರಿಗೂ ತಿಳಿಯದ ಹಾಗೆ ಸಾಕಷ್ಟು ಲೋಕ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಸಹಾಯಕರಿಗೆ, ನೊಂದವರಿಗೆ, ಅನೇಕರಿಗೆ ಚಿಕಿತ್ಸೆಗಾಗಿ ಹಣದ ಕೊರತೆ ಎದುರಾದಾಗ ಧಾನ–ಧರ್ಮ ಮಾಡಿದ್ದಾರೆ. ಅವೆಲ್ಲವೂ ಬೆಳಕಿಗೆ ಬಂದಿದ್ದು, ಅವರ ಸಾವಿನ ನಂತರ. ಹಳ್ಳಿ ಕಡೆ ಶರಣರ ಗುಣವನ್ನು ಮರಣದಲ್ಲಿ ಕಾಣೊ ಎಂಬ ಗಾದೆ ಮಾತಿದೆ. ಇದು 'ಅಪ್ಪುಗೆ ಒಪ್ಪುವ ಮಾತು ಎಂದರು.

'ಅಪ್ಪು' ಕಲಾಕ್ಷೇತ್ರದಲ್ಲಿ ಆಗಸದೆತ್ತರಕ್ಕೆ ಬೆಳೆದಿದ್ದರೂ ಅಭಿಮಾನಿಗಳನ್ನು, ಕಷ್ಟದಲ್ಲಿರುವ ಅಸಹಾಯಕರನ್ನು ಅತ್ಯಂತ



ಮೈಸೂರು ವಿಜಯನಗರದ ಒಂದನೇ ಹಂತದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಅವರ ಪ್ರಥಮ ಪುಣ್ಯಸ್ಮರಣೆ ಅಂಗವಾಗಿ 'ಅಪ್ಪು ಸ್ಮರಣೆ ಮತ್ತು ಗಾಯನೋತ್ಸವ' ಹಾಗೂ ಸಾಂಸ್ಕೃತಿಕ ಲೋಕ ಟ್ರಸ್ಟ್ ಉದ್ಘಾಟನಾ ಸಮಾರಂಭದಲ್ಲಿ ಅಪ್ಪು ಭಾವಚಿತ್ರಕ್ಕೆ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಎಂಎಲ್‌ಸಿ ಸಿ.ಎನ್.ಮಂಜೇಗೌಡ ನೇತೃತ್ವದಲ್ಲಿ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಆತ್ಮೀಯವಾಗಿ ಕಂಡು ಧಾನ–ಧರ್ಮ ಮಾಡುತ್ತಿದ್ದ ದೃಶ್ಯ ಮಾಧ್ಯಮಗಳಲ್ಲಿ ವರದಿಯಾಗಿದೆ. ಇಂತಹ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದ ವ್ಯಕ್ತಿ ಇಂದಿನ ಯುವ ಪೀಳಿಗೆಗೆ ಆದರ್ಶಪ್ರಾಯರು ಎಂದು ಗುಣಗಾನ ಮಾಡಿ ನುಡಿನಮನ ಸಲ್ಲಿಸಿದರು.

ಸ್ಫೂರ್ತಿಯಾದವರು: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ನಾವೆಲ್ಲ ಚಿಕ್ಕವಯಸ್ಸಿನಲ್ಲಿ ಡಾ.ರಾಜಕುಮಾರ್ ನಟಿಸಿರುವ ಅದೆಷ್ಟು ಚಲನ ಚಿತ್ರಗಳನ್ನು ನೋಡಿ ಸ್ಫೂರ್ತಿಗೊಂಡಿದ್ದೇವೆ. ಅವರ ಆದರ್ಶಗಳ ಬದುಕಿನಲ್ಲಿ ಅಳವಡಿಸಿಕೊಂಡಿದ್ದೇವೆ. ಡಾ.ರಾಜ್ ನಟಿಸಿರುವ ಅನೇಕ ಚಿತ್ರಗಳು ಎಷ್ಟೋ ಜನರ ಬದುಕಿನ ಆಲೋಚನಾ ದಿಕ್ಕನ್ನೇ ಬದಲಿಸಿವೆ. ನಂತರ ಸಮಾಜ ಸೇವೆಗೆ ಮುಂದಾಗಿರುವ ಉದಾಹರಣೆಯೂ ಇದೆ ಎಂದರು.

ಅಂತೆಯೇ ಪುನೀತ್ ರಾಜ್‌ಕುಮಾರ್ ತಮ್ಮ ಜೀವಿತಾವಧಿಯಲ್ಲಿ ಅನೇಕರ ಬವಣೆಗಳಿಗೆ ಸ್ಪಂದಿಸಿ, ಜನಾನುರಾಗಿಯಾಗಿದ್ದಾರೆ. ಇವೆಲ್ಲಾ ಕಾರ್ಯಗಳು ಮರಣ ನಂತರ ಬೆಳಕಿಗೆ ಬಂದಿವೆ. ಅವರ ನಿಧನ ನಂತರ ಯುವಕರು ಆರೋಗ್ಯದ ಕಡೆ ಗಮನ ಹರಿಸುತ್ತಿದ್ದಾರೆ. ಅಂಗಾಂಗ ದಾನ ಮಾಡುತ್ತಿದ್ದಾರೆ. ಕಲಾವಿದರಾದ ಪುನೀತ್ ಅವರಿಗೆ ಸಾವಿಲ್ಲ. ಅವರು ಕಲಾಕ್ಷೇತ್ರದ ಮೂಲಕ ಜನಮಾನಸದಲ್ಲಿ ಇಂದಿಗೂ ಉಳಿದಿದ್ದಾರೆ ಎಂದು ನುಡಿನಮನ ಸಲ್ಲಿಸಿದರು.

ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್ ಮಾತನಾಡಿ, ಡಾ.ರಾಜ್‌ಕುಮಾರ್ ಕುಟುಂಬಕ್ಕೂ ಮೈಸೂರಿಗೂ ಹತ್ತಿರ ನಂಟಿದೆ. ಪುನೀತ್ ಅವರ ಅನೇಕ ಚಿತ್ರಗಳು ಮೈಸೂರಿನಲ್ಲಿ ಚಿತ್ರೀಕರಣಗೊಂಡಿವೆ. ಪುನೀತ್ ಅವರ ಮಾನವೀಯ ಮೌಲ್ಯವನ್ನು ಅಳವಡಿಸಿಕೊಂಡಿದ್ದರು. ಅದಕ್ಕಾಗಿ ಜನ ಅವರನ್ನು ಸ್ಮರಿಸುತ್ತಿದ್ದಾರೆ ಎಂದು ಕೆಲ ಘಟನೆಗಳನ್ನು ಉದಾಹರಿಸಿದರು. ಈ ವೇಳೆ ಕವಿಯತ್ರಿ ಡಾ.ಲತಾರಾಜಶೇಖರ್, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ.ಹೆಚ್.ಬಿ. ರಾಜಶೇಖರ್, ಎನ್.ಬೆಟ್ಟೇಗೌಡ, ಡಾ.ಈ.ಸಿ. ನಿಂಗರಾಜೇಗೌಡ, ಕಸಾಪ ಮಾಜಿ ಜಿಲ್ಲಾಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಡಾ.ಬಿ.ಎನ್.ರವೀಶ್, ಕ್ಯಾತನಹಳ್ಳಿ ಪ್ರಕಾಶ್ ಉಪಸ್ಥಿತರಿದ್ದರು. ನಂತರ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜೆ.ಯೋಗೇಶ್, ಅಶ್ವಿನಿ, ಹೇಮಚಂದ್ರ, ಡಾ.ವೈ.ಡಿ.ರಾಜಣ್ಣ ಸೇರಿದಂತೆ ಇತರರಿಂದ ಅಪ್ಪು ಸ್ಮರಣೆ ಗಾಯನೋತ್ಸವ ಜರುಗಿತು.

ಆಂಧ್ರದಲ್ಲಿ ತಲೆ ಎತ್ತಿದ 21 ಅಡಿ ಎತ್ತರದ ಅಪ್ಪು ಬೃಹತ್ ಪ್ರತಿಮೆ

ಬೆಂಗಳೂರು, ಅ.29– ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರು ನಮ್ಮನ್ನು ಅಗಲಿ ಇಂದಿಗೆ (ಅಕ್ಟೋಬರ್ 29) ಒಂದು ವರ್ಷ. ಸಿನಿಮಾ ಹಾಗೂ ಸಮಾಜ ಸೇವಾ ಕಾರ್ಯಕ್ರಮಗಳನ್ನು ಮಾಡುತ್ತಾ ವೀರಕನ್ನಡಿಗ ಅಪಾರ ಅಭಿಮಾನಿಗಳನ್ನು ಸಂಪಾದಿಸಿದ್ದಾರೆ. ಇಂದು ಅವರ ಪುಣ್ಯ ಸ್ಮರಣೆ. ಪುನೀತ್ ಅವರ ಕುಟುಂಬ ಸದಸ್ಯರು ಹಾಗೂ ಅಭಿಮಾನಿಗಳು ಅವರ ಮೊದಲ ಪುಣ್ಯತಿಥಿಯನ್ನು ಆಚರಿಸಲು ವಿನೂತನ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ.

ಕನ್ನಡ ನಾಡಿನಲ್ಲಿ ಅಷ್ಟೇ ಅಲ್ಲ, ದೇಶದಾದ್ಯಂತ ಪುನೀತ್ ರಾಜಕುಮಾರ್ ಅಪಾರ ಅಭಿಮಾನಿಗಳನ್ನು ಹೊಂದಿದ್ದಾರೆ. ತೆಲುಗು ರಾಜ್ಯಗಳಲ್ಲಿ ಅವರಿಗೆ ಸಾಕಷ್ಟು ಅಭಿಮಾನಿ ಬಳಗವಿದೆ. ಈ ಹಿನ್ನೆಲೆಯಲ್ಲಿ ಪುನೀತ್ ಸ್ಮರಣಾರ್ಥ ಗುಂಟೂರು ಜಿಲ್ಲೆಯ ತೆನಾಲಿಯಲ್ಲಿ 21 ಅಡಿ ಫೈಬರ್ ಗಾಜಿನ ಪ್ರತಿಮೆಯನ್ನು ಸಿದ್ಧಪಡಿಸಲಾಗಿದೆ. ತೆನಾಲಿಯ ಶಿಲ್ಪಿಗಳಾದ ಕ್ಯಾತೂರಿ ವೆಂಕಟೇಶ್ವರ ರಾವ್, ರವಿಚಂದ್ರ ಮತ್ತು ಶ್ರೀಹರ್ಷ ಈ ಬೃಹತ್ ಮೂರ್ತಿಯನ್ನು ಸಿದ್ಧಪಡಿಸಿದ್ದಾರೆ. ಈ ಮೂರ್ತಿಯನ್ನು 21 ಅಡಿ ಎತ್ತರದಲ್ಲಿ 3ಡಿ ತಂತ್ರಜ್ಞಾನದಲ್ಲಿ ನಿರ್ಮಿಸಲಾಗಿದೆಯಂತೆ. ಈ ಪ್ರತಿಮೆಯನ್ನು ತಯಾರಿಸಲು ಸುಮಾರು ನಾಲ್ಕು ತಿಂಗಳು ಬೇಕಾಯಿತು ಎಂದು ಶಿಲ್ಪಿಗಳು ಹೇಳಿದ್ದಾರೆ, ಶೀಘ್ರದಲ್ಲೇ ಬೆಂಗಳೂರಿಗೆ ಸ್ಥಳಾಂತರಗೊಳ್ಳಲಿದೆ. ಪ್ರಸ್ತುತ ಪುನೀತ್ ಫೈಬರ್ ವಿಗ್ರಹವನ್ನು ತೆನಾಲಿಯಲ್ಲಿರುವ ಸೂರ್ಯ ಶಿಲ್ಪಸದಲ್ಲಿ ಪ್ರದರ್ಶಿಸಲಾಗಿದೆ.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
30-10-2022



ನಾನು ರಂಗಾಯಣ ಸ್ವಯಂ ರಂಗ ಸೇವಕ...





ಅಡ್ಡಂಡ ಸಿ.ಕಾರ್ಯಪ್ಪ, ನಿರ್ದೇಶಕ

ಎಸ್.ಬಿ.ದೇವರಾಜ





ಮೈಸೂರು ರಂಗಾಯಣ, ರಂಗ ಭೀಷ್ಮರೆನಿಸಿದ್ದ ಬಿ.ವಿ.ಕಾರಂತರ ಕನಸು. ರಂಗಾಯಣವನ್ನು ರಂಗ ಸ್ವರ್ಗಕ್ಕೆ ತರುವಲ್ಲಿ ಅವಿರತ ಶ್ರಮಿಸಿದ ಕಾರಂತರು ಸೇರಿ ಈವರೆಗೆ 10 ಮಂದಿ ನಿರ್ದೇಶಕರನ್ನು ರಂಗಾಯಣ ಕಂಡಿದೆ. ಎಲ್ಲರೂ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ರಂಗಾಯಣದಲ್ಲಿ ಬಿಟ್ಟು ಹೋಗಿದ್ದಾರೆ. ಹಾಲಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪನವರಿಗೆ ಎದುರಾದ ಸವಾಲುಗಳು ಬೇರೆ ಯಾರಿಗೂ ಕಾಡಿದ್ದಿಲ್ಲ ಎಂದೆನಿಸುತ್ತದೆ. ಆದರೆ ಅವೆಲ್ಲವನ್ನೂ ಮೆಟ್ಟಿ ನಿಂತು, ತನ್ನ ಜವಾಬ್ದಾರಿ ಅರಿತು ಒಂದು ದಿನವೂ ವಿರಾಮವಿಲ್ಲದಂತೆ ಅವಿರತವಾಗಿ ರಂಗಾಯಣಕ್ಕಾಗಿ ಶ್ರಮಿಸುವ, ಹೊಸ ಹೊಸ ಪ್ರಯೋಗಗಳ ಮೂಲಕ ಕಾರಂತರ ಕನಸುಗಳನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

2019ರ ಡಿ.31ರಂದು ರಂಗಾಯಣ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿದ ಅಡ್ಡಂಡ ಸಿ.ಕಾರ್ಯಪ್ಪನವರು, ಆಗಲೇ ಹೇಳಿದಂತೆ, ಓರ್ವ ಸ್ವಯಂ ಸೇವಕನಾಗಿ ಸಂಸ್ಥೆಯ ಉನ್ನತಿಗೆ ದುಡಿಯುತ್ತಿದ್ದಾರೆ. ಆರಂಭದಲ್ಲೇ ಕೊರೊನಾ ಆಘಾತ ಎದುರಾದರೂ ಕೊಂಚವೂ ವಿಚಲಿತರಾಗದೆ ಬದ್ಧತೆ ಪ್ರದರ್ಶಿಸಿದ್ದಾರೆ. ವಿಚಾರವೊಂದಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ನಿರಂತರ ಪ್ರತಿಭಟನೆ, ವಾಗ್ದಾಳಿ ನಡೆದರೂ ಅವೆಲ್ಲವನ್ನೂ ಸಮರ್ಥವಾಗಿ ಎದುರಿಸಿ, ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಾರೆ. ಅಡ್ಡಂಡ ಸಿ.ಕಾರ್ಯಪ್ಪನವರು ನಿರ್ದೇಶಕರಾದ ನಂತರ ಆ ಎರಡೂವರೆ ವರ್ಷದಲ್ಲಿ ರಂಗಾಯಣ ಸಾಕಷ್ಟು ಬದಲಾವಣೆ ಹಾಗೂ ಸುಧಾರಣೆ ಕಂಡಿದೆ. ಇಡೀ ಆವರಣ ಹಚ್ಚಹಸಿರಿನಿಂದ ನಳನಳಿಸುತ್ತಿದೆ. ಪ್ಲಾಸ್ಟಿಕ್ ಮುಕ್ತ ಹಾಗೂ ಸ್ವಚ್ಛತೆ ನಿರ್ವಹಣೆ ಕಟ್ಟುನಿಟ್ಟಾಗಿ ನಡೆದಿದೆ. ಸಂಜೆಯಾದರೆ ಇಲ್ಲಿರುವ ನೂರಾರು ಗಿಡಮರಗಳಲ್ಲಿ ಹಕ್ಕಿಗಳ ಚಿಲಿಪಿಲಿ ಕರ್ಣಾನಂದ ಉಂಟು ಮಾಡುತ್ತದೆ.

ಈ ಸುಂದರ ಪ್ರಕೃತಿ ಮಡಿಲಲ್ಲಿ ನಿರಂತರ ರಂಗ ಚಟುವಟಿಕೆಗಳು ನಡೆಯುತ್ತಿವೆ. ಜಗತ್ತನ್ನು ಬಾಧಿಸಿದ ಕೊರೊನಾಗೂ ಸೆಡ್ಡು ಹೊಡೆದಂತೆ ರಂಗಾಯಣದಲ್ಲಿ ಸಾಕಷ್ಟು ನಾಟಕಗಳು ಪ್ರದರ್ಶನಗೊಂಡಿವೆ. ಅಡ್ಡಂಡ ಕಾರ್ಯಪ್ಪನವರು ಬಂದ ಮೇಲೆಯೇ 20ಕ್ಕೂ ಹೆಚ್ಚು ನಾಟಕಗಳ ಪ್ರದರ್ಶನವಾಗಿರುವುದು ಗಮನಾರ್ಹ. ಭಾರತೀಯ ರಂಗ ಶಿಕ್ಷಣ ಕೇಂದ್ರ, ಅಭಿನಯ ತರಬೇತಿ ಕಾರ್ಯಾಗಾರವನ್ನು ಕೊರೊನಾ ಸಂದಿಗ್ಧತೆ ನಡುವೆಯೂ ಯಶಸ್ವಿಯಾಗಿ ನಡೆಸಲಾಗಿದೆ. ಎರಡು ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೂ ಅದ್ವಿತೀಯ ಪ್ರತಿಕ್ರಿಯೆ ವ್ಯಕ್ತವಾಗಿದೆ. 'ಗಾಂಧಿ ಪಥ' ಹಾಗೂ 'ತಾಯಿ' ಸಾರ್ವತ್ರಿಕ ವಿಷಯ ವಸ್ತುವಿನ ಮೇಲೆ ಬಹುರೂಪಿಗಳನ್ನು ನಡೆಸಿ, ಶೀರ್ಷಿಕೆ ಆಯ್ಕೆಯಲ್ಲೂ ನವೀನತೆಯನ್ನು ಪರಿಚಯಿಸಲಾಯಿತು. ಈ ಬಾರಿ 'ಭಾರತೀಯತೆ' ಶೀರ್ಷಿಕೆಯಡಿ ಬಹುರೂಪಿ ಕಟ್ಟಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಇತ್ತೀಚೆಗೆ ಈ ನಾಡಿನ ಪ್ರಸಿದ್ಧ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನಲ್ಲಿ ನಡೆದ 10 ದಿನಗಳ ದಸರಾ ರಂಗೋತ್ಸವ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಯಶಸ್ವಿ 'ಪರ್ವ' ಪ್ರಯೋಗ: ರಂಗಾಯಣದ ಇತಿಹಾಸದಲ್ಲಿ 'ಪರ್ವ' ರಂಗ ಪ್ರಯೋಗ ಭಾರತೀಯ ರಂಗಭೂಮಿಯಲ್ಲೊಂದು ಮೈಲಿಗಲ್ಲು. ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪನವರ 'ಪರ್ವ' ಕಾದಂಬರಿಯನ್ನು ರಂಗಪ್ರಯೋಗದ ಮೂಲಕವೂ ಗೆಲ್ಲಿಸುವಲ್ಲಿ ಅಡ್ಡಂಡ ಕಾರ್ಯಪ್ಪ ಸಫಲರಾದರು. ಕಾದಂಬರಿಯನ್ನು ರಂಗಪಠ್ಯ ಮಾಡಿ ಪ್ರಕಾಶ್ ಬೆಳವಾಡಿ ನಿರ್ದೇಶಿಸಿದ 'ಪರ್ವ' ನಾಟಕ ಎಂಟು ಪ್ರದರ್ಶನ ಕಂಡಿತು. ಮೊದಲ ಪ್ರದರ್ಶನದಲ್ಲೇ ರಂಗಾಸಕ್ತರ ಮನ ಸೆಳೆಯಿತು. ಕಲಾಮಂದಿರದಲ್ಲಿ 2021ರ ಮಾರ್ಚ್‌ನಲ್ಲಿ ಸುದೀರ್ಘ 'ಪರ್ವ' ನಾಟಕವನ್ನು 1000, 500 ಹಾಗೂ 250 ರೂ. ಟಿಕೆಟ್ ಪಡೆದು ವೀಕ್ಷಿಸಿದ್ದು ಮತ್ತೊಂದು ಇತಿಹಾಸ. ಈ ಮೂರು ದಿನ ಕಲಾಮಂದಿರ ಪ್ರೇಕ್ಷಕರಿಂದ ತುಂಬಿ ಸಂಭ್ರಮಿಸಿದ್ದು 'ಪರ್ವ' ಪಯಣಕ್ಕೆ ಚೈತನ್ಯ ತುಂಬಿತು. ನಂತರ ದೇಶದ ವಿವಿಧೆಡೆ 50ಕ್ಕೂ ಹೆಚ್ಚು ಯಶಸ್ವಿ ಪ್ರದರ್ಶನ ಕಂಡಿದೆ. 'ಪರ್ವ' ನಾಟಕ ಪ್ರದರ್ಶನಕ್ಕೂ ಮುನ್ನ ಕಲಾಮಂದಿರದಲ್ಲಿ ಆಯೋಜಿಸಲಾಗಿದ್ದ 'ಪರ್ವ ವಿರಾಟ ದರ್ಶನ' ಪರ್ವ ಕಾದಂಬರಿ ಹಾಗೂ ರಂಗ ಪ್ರಸ್ತುತಿ ಕುರಿತ ವಿಚಾರ ಸಂಕಿರಣದಲ್ಲಿ ಸಾವಿರಾರು ಮಂದಿ ಕಿಕ್ಕಿರಿದಿದ್ದರು.

ಶ್ಲಾಘನಾರ್ಹ ಸಂಗತಿ: 'ಪರ್ವ' ಕಾದಂಬರಿಯ ರಂಗಪ್ರಸ್ತುತಿ ಬಗ್ಗೆ ವಿಧಾನ ಸೌಧದಲ್ಲಿ ಚರ್ಚೆಯಾಗಿತ್ತು. ಮುಂದುವರೆದು ಸರ್ಕಾರ ಬಜೆಟ್‌ನಲ್ಲಿ ವಿಶೇಷ ಅನುದಾನ ಮೀಸಲಿಟ್ಟಿದ್ದು ಗಮನಾರ್ಹ. ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು 1 ಕೋಟಿ ರೂ. ನಂತರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಅರವಿಂದ ಲಿಂಬಾವಳಿ 50 ಲಕ್ಷ ರೂ. ಸೇರಿ ಒಟ್ಟು 1.50 ಕೋಟಿ ರೂ. ಅನುದಾನ ಸಿಕ್ಕಿತ್ತು. ಇದರೊಂದಿಗೆ 'ಬಹುರೂಪಿ' ರಾಷ್ಟ್ರೀಯ ನಾಟಕೋತ್ಸವವನ್ನು 'ರಾಜ್ಯ ಉತ್ಸವಗಳ ಪಟ್ಟಿ'ಗೆ ಸೇರಿಸಿದ್ದರ ಪರಿಣಾಮ 2020ರ ಬಹುರೂಪಿಗೆ ಅಡ್ಡಂಡ ಕಾರ್ಯಪ್ಪ, ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವ ಸಿ.ಟಿ.ರವಿ ಅವರನ್ನು ಕಾಡಿ-ಬೇಡಿ 1 ಕೋಟಿ ರೂ. ಅನುದಾನ ತಂದರು. ರಂಗಾಯಣ ವೈಭವ ಮೆರೆಸುವ ಆಶಯವುಳ್ಳ ಅಡ್ಡಂಡ ಕಾರ್ಯಪ್ಪನವರ ಪ್ರಮುಖ ಸಾಧನೆಗಳಲ್ಲಿ ಇದೂ ಒಂದಾಗಿದೆ.

ಕಾರಂತರು ಚಿರಸ್ಥಾಯಿ: ಬಿ.ವಿ.ಕಾರಂತರ ನಾಮಸ್ಮರಣೆಗೆ ಸೀಮಿತವಾಗದೆ ರಂಗಾಯಣದಲ್ಲಿ ಅವರ ಹೆಸರನ್ನು ಚಿರಸ್ಥಾಯಿಗೊಳಿಸುವಲ್ಲಿ ಅಡ್ಡಂಡ ಕಾರ್ಯಪ್ಪ ಸಫಲರಾದರು. ಸರ್ಕಾರದಿಂದ ಅನುದಾನ ಕೇಳದೆ ದಾನಿಗಳ ನೆರವು ಹಾಗೂ ರಂಗಾಯಣದ ಸಂಪನ್ಮೂಲ ಬಳಸಿಕೊಂಡು 10 ಲಕ್ಷ ರೂ. ವೆಚ್ಚದಲ್ಲಿ 'ಬಿ.ವಿ.ಕಾರಂತ ರಂಗಚಾವಡಿ' ನಿರ್ಮಿಸಿದರು. 2021ರ ಆ.9ರಂದು ಲೋಕಾರ್ಪಣೆಗೊಂಡ ಈ ರಂಗ ವೇದಿಕೆ, ಸಾಕಷ್ಟು ರಂಗ ಚಟುವಟಿಕೆಗೆ ಆಸರೆಯಾಗಿದೆ. ಕಾರಂತರ ಜನ್ಮದಿನವನ್ನು **'ಭಾರತೀಯ ರಂಗಸಂಗೀತ ದಿನ'** ಎಂದು ಘೋಷಿಸಿ, ಸೆ.19ರಂದು 'ಬಿ.ವಿ.ಕಾರಂತ ರಂಗೋತ್ಸವ-ರಂಗಸಂಗೀತ' ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. ರಂಗಾಯಣದ ರಂಗವನದಲ್ಲಿ ಕಾರಂತರ ಆಕರ್ಷಕ ಪುತ್ಥಳಿಯನ್ನು ನಿರ್ಮಿಸಲಾಗಿದೆ. ರಂಗಾಯಣ ಮುಂಭಾಗದ ರಸ್ತೆಗೆ ಕಾರಂತರ ಹೆಸರು ನಾಮಕರಣ ಮಾಡುವಂತೆ ನಡೆದ ಹೋರಾಟದಲ್ಲೂ ಅಡ್ಡಂಡ ಕಾರ್ಯಪ್ಪನವರು ಮುಂಚೂಣಿಯಲ್ಲಿದ್ದರು. ಹೀಗೆ ರಂಗಾಯಣದಲ್ಲಿ ಎಂದೆಂದಿಗೂ ಕಾರಂತರು ಮಾರ್ಧನಿಸುವಂತೆ ಮಾಡಿದ್ದಾರೆ.

ಮನ ಸೆಳೆವ ವನಸಿರಿ: ಪ್ರಸ್ತುತ ರಂಗಾಯಣ ಅಚ್ಚ ಹಸಿರಿನಿಂದ ಕಂಗೊಳಿಸುವಲ್ಲಿ ಅಡ್ಡಂಡ ಕಾರ್ಯಪ್ಪನವರ ಪರಿಶ್ರಮ ಬಹುಮುಖ್ಯವಾಗಿದೆ. ವನರಂಗದಲ್ಲಿ ಅವರು ನೆಡಿಸಿದ್ದ 25 ಗಿಡಗಳು ಈಗ ಮರವಾಗಿ ನಿಂತು ಕಂಗೊಳಿಸುತ್ತಿವೆ. ಕೊಡಗಿನಿಂದ ನೂರಾರು ಗಿಡಗಳನ್ನು ತರಿಸಿ, ರಂಗಾಯಣದ ಆವರಣದಲ್ಲಿ ನೆಟ್ಟಿದ್ದು, ಇದೀಗ ಸುಂದರ ಪ್ರಕೃತಿ ತಾಣವಾಗಿದೆ. ಎಲೆಗಳನ್ನೂ ಎಸೆಯದೆ ಅದರಿಂದ ಗೊಬ್ಬರ ತಯಾರಿಸಿ, ಗಿಡಗಳ ಪೋಷಣೆಗೆ ಬಳಸಲಾಗುತ್ತಿದೆ. ಮಳೆಯಿಂದ ಬಿದ್ದು ಹೋಗಿದ್ದ 2 ಲಕ್ಷ ರೂ.ಗೂ ಹೆಚ್ಚು ಬೆಲೆ ಬಾಳುವ ಮರಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳ ಮನವೊಲಿಸಿ, ರಂಗಾಯಣದ ಉಪಯೋಗಕ್ಕೆ ದಾಸ್ತಾನಿಡಲಾಗಿದೆ.

ಬೇರೆ ಇಲಾಖೆಯಿಂದ ವಾಹನ: ಅಡ್ಡಂಡ ಕಾರ್ಯಪ್ಪನವರು ನಿರ್ದೇಶಕರಾಗಿ ಬರುವ ಮುನ್ನವೇ ರಂಗಾಯಣದಲ್ಲಿದ್ದ ವಾಹನ ಬಳಕೆಗೆ ಯೋಗ್ಯವಲ್ಲ ಎಂದು ಆರ್‌ಟಿಓ ದೃಢಪಡಿಸಿತ್ತು. ಪರಿಣಾಮ ಆ ವಾಹನವನ್ನು ಹರಾಜು ಹಾಕಲಾಗಿತ್ತು. ಈ ವಿಷಯ ತಿಳಿದ ಅಡ್ಡಂಡ ಕಾರ್ಯಪ್ಪನವರು ಯುವ ಕಲಾವಿದರೊಬ್ಬರ ಸಹಕಾರದಿಂದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿ, ಸಹಾಯ ಯಾಚಿಸಿದರು. ಆ ಅಧಿಕಾರಿ ಸದುದ್ದೇಶಕ್ಕೆ ನಿಯಮವನ್ನು ಸಡಿಲಿಸಿ ಲಕ್ಷಾಂತರ ರೂ. ಬೆಲೆಯ ವಾಹನವನ್ನು ರಂಗಾಯಣಕ್ಕೆ ಹಸ್ತಾಂತರಿಸಿದರು. ಸದ್ಯ ರಂಗ ಪ್ರಯಾಣ ಈ ವಾಹನದಲ್ಲೇ ಸಾಗಿದೆ.

> "ಹವ್ಯಾಸಿ ಕಲಾವಿದರು ಹೆಚ್ಚು ಬರಬೇಕೆಂಬುದು ನನ್ನ ಆಕಾಂಕ್ಷೆ. ರಂಗಾಯಣ ಎಂದರೆ ಕಲಾವಿದರು ನಲಿಯುವ ಜಾಗ, ಚಿಲಿಪಿಲಿ ಗುಟ್ಟುವ ಜಾಗವೇ ಹೊರತು ವಾಚಾ ಮಾಡುವ ಜಾಗವಲ್ಲ. ಅದಕ್ಕಾಗಿ ಬೇಕಾದ ಎಲ್ಲಾ ಯೋಜನೆಗಳನ್ನೂ ರೂಪಿಸಿದ್ದೇನೆ. ರಂಗ ಶಾಲೆಯನ್ನು ಕೋವಿಡ್‌ನಲ್ಲೂ ನಿಲ್ಲಿಸಿಲ್ಲ. ಸಂಸ್ಥೆ ಕಾರ್ಯನಿಮಿತ್ತ ಬೆಂಗಳೂರಿಗೆ ಹೋದರೆ 500-600 ವೆಚ್ಚವಾಗಬಹುದು. ನಾನೇ ಕಾರ್ಯ ಸಂಸ್ಥೆಯ ಕಾರಿನಲ್ಲಿ ಹೋದರೆ 3 ಸಾವಿರಕ್ಕಿಂತ ಹೆಚ್ಚು ಬೇಕು. ಅಲ್ಲಿ ಉಳಿಯುವ ಹಣವನ್ನು ಗಿಡಮರಗಳ ಪೋಷಣೆಗೆ ಬಳಸುತ್ತಿದ್ದೇನೆ. ಶೂನ್ಯ ವೆಚ್ಚದಲ್ಲಿ ವಾರಾಂತ್ಯ ನಾಟಕ ಮಾಡಿದ್ದೇನೆ. ನಿರ್ದೇಶಕನಾದ ನಂತರ 10 ಕೆಜಿ ಕಡಿಮೆಯಾಗಿದ್ದೇನೆ. ನನ್ನ ವಿಶಿಷ್ಟ ಕಾರ್ಯ ವೈಖರಿಯ ಮೂಲಕವೇ ಶತ್ರುಗಳೂ ಮುಟ್ಟಿ ನೋಡಿಕೊಳ್ಳುವಂತೆ ಮಾಡಿದ್ದೇವೆ. ಸರ್ಕಾರದ ವಿರುದ್ಧ ಅನಾವಶ್ಯಕವಾಗಿ ಮಾತನಾಡಿದಾಗ ಪರಿಮಿತಿಯನ್ನು ದಾಟಿ ಸರ್ಕಾರದ ಪರ ಧ್ವನಿ ಎತ್ತಿದ್ದೇನೆ. ರಾಜೀ ಮಾಡಿಕೊಳ್ಳದೆ ನಿಷ್ಠುರವಾಗಿ, ಸತ್ಯವಾಗಿ, ಪ್ರಾಮಾಣಿಕವಾಗಿ ನಡೆದಿದ್ದೇನೆ. ಎರಡು ಮುಕ್ಕಾಲು ವರ್ಷದ ನನ್ನ ರಂಗಾಯಣದ ಪಯಣದಲ್ಲಿ ಪಾರದರ್ಶಕವಾಗಿ ದಕ್ಷತೆಯಿಂದ ಕೆಲಸ ಮಾಡಿರುವ ತೃಪ್ತಿ ಇದೆ.
> -ಅಡ್ಡಂಡ ಕಾರ್ಯಪ್ಪ

ಕನಸುಗಳು ಇನ್ನೂ ಮುಗಿದಿಲ್ಲ...

ನನ್ನ ಮೇಲೆ ಇಲ್ಲ ಸಲ್ಲದ್ದನ್ನು ಮಾತನಾಡುವವರು, ಟೀಕೆ ಮಾಡುವವರು ಒಮ್ಮೆ ರಂಗಾಯಣ ಆವರಣಕ್ಕೆ ಬಂದು ನೋಡಲಿ. ಏನಾದರೂ ವೈಫಲ್ಯ ಕಂಡರೆ ಧೈರ್ಯವಾಗಿ ಹೇಳಲಿ ಎಂದು ಸವಾಲು ಹಾಕುವ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ರಂಗಾಯಣದಲ್ಲಿನ ನನ್ನ ಕನಸುಗಳು ಸಾಕಷ್ಟು ಬಾಕಿ ಇವೆ ಎಂದು ತಮ್ಮ ಭವಿಷ್ಯದ ಯೋಜನೆಗಳ ಪಟ್ಟಿಯನ್ನೇ ಮನಸ್ಸಲ್ಲಿ ಕಟ್ಟಿಟ್ಟುಕೊಂಡಿದ್ದಾರೆ.

ನಾನು 45 ವರ್ಷಗಳ ಕಾಲ ರಂಗಭೂಮಿಯನ್ನು ಕರ್ಮಭೂಮಿ ಎಂದು ನಂಬಿ ಬಂದವನು. ರಂಗಾಯಣ ನಿರ್ದೇಶಕ ಜವಾಬ್ದಾರಿಯನ್ನೂ ಅತ್ಯಂತ ಶ್ರೇಷ್ಠ ಕರ್ಮ ಎಂದೇ ಸ್ವೀಕರಿಸಿದ್ದೇನೆ. ಇಲ್ಲಿದ್ದ ಗೊಂದಲಗಳನ್ನು ಸರಿಪಡಿಸಲು ಒಂದೂವರೆ ವರ್ಷ ಹಿಡಿಯಿತು. ಅಭಿಮನ್ಯು ರೀತಿ ಚಕ್ರವ್ಯೂಹದಲ್ಲಿ ಸಿಕ್ಕಿ ಹಾಕಿಕೊಂಡಿದ್ದೆ. ಒಂದೆಡೆ ಕೊರೊನಾ ಆಘಾತ ಮತ್ತೊಂದೆಡೆ ಹೆಜ್ಜೆ ಹೆಜ್ಜೆಗೂ ವಿರೋಧಿಸುವವರ ಅಡ್ಡಿ. ಬಿಜೆಪಿ ಸರ್ಕಾರದಿಂದ ನೇಮಕವಾದವನು ಎಂಬ ಒಂದೇ ಒಂದು ಕಾರಣಕ್ಕೆ ಒಂದು ಪಂಥದವರು ನಾಟಕ ನೋಡಲು ಬರಲಿಲ್ಲ, ಮತ್ತೊಂದು ಪಂಥದವರಿಗೆ ನಾಟಕ ನೋಡಿ ಅಭ್ಯಾಸವಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರೇಕ್ಷಕರನ್ನು ಸೆಳೆದಿದ್ದು ಸುಲಭದ ಮಾತಲ್ಲ ಎನ್ನುತ್ತಾರೆ ಅಡ್ಡಂಡ ಕಾರ್ಯಪ್ಪ.


ಜಯಶ್ರೀ, ಪ್ರಸನ್ನ ಅಲ್ಲದೆ ಸ್ವತಃ ರಂಗಾಯಣ ಸ್ಥಾಪಕ ಬಿ.ವಿ.ಕಾರಂತರನ್ನೇ ರಾಜೀನಾಮೆ ಕೊಡುವಂತೆ ಮಾಡಿದ ರೀತಿ ನನ್ನನ್ನೂ ಓಡಿಸುವ ಮಹಾ ಪ್ರಯತ್ನವನ್ನೂ ಮಾಡಿದರು. ರಂಗಾಯಣ ಸ್ಥಾಪನೆಗೂ ಹಿಂದಿನಿಂದಲೂ ಮೈಸೂರಿನಲ್ಲಿ ರಂಗಭೂಮಿ ಬೆಳೆಸಿದವರ ಸ್ಮರಣಾರ್ಥ ಕಾರ್ಯಕ್ರಮ ಮಾಡುವ ಮೂಲಕ ಒಂದು ಸಂದೇಶ ರವಾನಿಸಿದೆ. ನಾನು ಬದ್ಧತೆಯಿಂದ ಬಂದವನು, ನನ್ನದೇ ಆದ ಕನಸುಗಳಿತ್ತು. ನನ್ನ ಮನೆ-ಮಠವನ್ನು ಮರೆತು ಕೆಲಸ ಮಾಡಿದ್ದೇನೆ. ಬೆಳಗ್ಗೆ 6.30 ರಿಂದ ಹಿಡಿದು ನಿರಂತರವಾಗಿ ರಾತ್ರಿ 10.30ಗಂಟೆವರೆಗೆ ಕೆಲಸ ಮಾಡಿದ್ದೇನೆ. ಭಾನುವಾರ, ಹಬ್ಬ ಹರಿದಿನಗಳಿಗೆ ರಜೆ ಪಡೆದಿಲ್ಲ ಎಂದು ತಮ್ಮ ಪರಿಶ್ರಮವನ್ನು ವಿವರಿಸುತ್ತಾರೆ ಕಾರ್ಯಪ್ಪನವರು.

ವರ್ಷದಿಂದ ವೇತನ ಪಡೆದಿಲ್ಲ: ನನ್ನನ್ನು ಸರ್ಕಾರ ನೇಮಿಸಿದೆ. ಬದ್ಧತೆಯಿಂದ ಕೆಲಸ ಮಾಡುವುದಷ್ಟೇ ನನ್ನ ಗುರಿ. ಸರ್ಕಾರದಿಂದ ಅನುದಾನ ಕಡಿಮೆಯಾಗಿರುವುದರಿಂದ ಒಂದು ವರ್ಷದಿಂದ ನಾನು ಸಂಬಳ ಹಾಗೂ ಭತ್ಯೆ ತೆಗೆದುಕೊಳ್ಳುತ್ತಿಲ್ಲ. ಸ್ವಯಂ ಸೇವಕನಾಗಿಯೇ ಕೆಲಸ ಮಾಡುತ್ತಿದ್ದೇನೆ. ಏನು ಮಾಡಬೇಕೆಂಬುದು ನನ್ನ ಮನಸ್ಸಲ್ಲಿ ನಿಶ್ಚಿತವಾಗಿದೆ. ಯಾವ ನಿರ್ದೇಶಕನಿಗೂ ಈ ತರಹದ ಪ್ರಾಕೃತಿಕ ಹಿಂಸೆ, ಅನುದಾನ ಕಡಿಮೆ ಸವಾಲು ಎದುರಾಗಿರಲಿಲ್ಲ. ಈ ವರ್ಷ ಕೇವಲ 20 ಲಕ್ಷ ರೂ. ಬಂದಿದೆ. ಇದು ಸಿಬ್ಬಂದಿಯ 3 ತಿಂಗಳ ವೇತನಕ್ಕೆ ಸಮ. ಯಾರೋ ಮಹನೀಯರೊಬ್ಬರು ಹೇಳಿದ್ದಂತೆ ರಂಗಾಯಣ ಬಿಳಿ ಆನೆ ಅಲ್ಲ, ಇದು ದುಡಿಯುವ ಕರಿ ಆನೆ ಎನ್ನುವುದನ್ನು ತೋರಿಸಿ ಕೊಟ್ಟಿದ್ದೇನೆ. ಕೊಡಗಿನಿಂದಲೇ ನೂರಾರು ಸಸಿಗಳನ್ನು ತಂದು ನೆಡಿಸಿದ್ದೇನೆ. ಇಡೀ ಆವರಣವನ್ನು ಪ್ಲಾಸ್ಟಿಕ್ ಮುಕ್ತ ಮಾಡಿದ್ದೇನೆ. ಸ್ವತಃ ನಾನೇ ಕಸ ಎತ್ತಿ ಕಲಾವಿದರಲ್ಲಿ ಜಾಗೃತಿ ಮೂಡಿಸಿದ್ದೇನೆ. ನೋಡ ಬನ್ನಿ, ಈಗ ಇಡೀ ಆವರಣ ಕನ್ನಡಿಯಂತಿದೆ ಎಂದರು.

> "ಆಡಳಿತದಲ್ಲೂ ಅಡ್ಡಂಡ ಕಾರ್ಯಪ್ಪನವರು ಪಾರದರ್ಶಕತೆ ಮೆರೆದಿದ್ದಾರೆ. ಪ್ರತಿಯೊಬ್ಬ ದಾನಿ ನೀಡಿದ ಪ್ರತಿ ನೆರವಿನ ಮೊತ್ತಕ್ಕೆ ರಶೀದಿ ನೀಡಿದ್ದಾರೆ. ಒಂದೊಂದು ಪೈಸೆಗೂ ಪಕ್ಕಾ ಲೆಕ್ಕ ಇಟ್ಟಿದ್ದಾರೆ. 'ಪರ್ವ'ದ ನೆಪದಲ್ಲಿ ಅತೀ ಹೆಚ್ಚು ಮೊತ್ತಕ್ಕೆ ಟಿಕೆಟ್ ಮಾರಾಟ ಮಾಡಿ ರಂಗಾಯಣದ ಆದಾಯ ಹೆಚ್ಚಿಸಿದ್ದಾರೆ. ಸರ್ಕಾರದಿಂದ ಅನುದಾನ ಕಡಿಮೆ ಯಾಗಿದೆ ಎಂದು ರಂಗ ಚಟುವಟಿಕೆ ಗಳನ್ನು ಕಡಿಮೆ ಮಾಡಿಲ್ಲ. ತಮ್ಮ ಆಡಳಿತಾವಧಿಯಲ್ಲಾಗಿರುವ ನಾಟಕ ಇನ್ನಿತರ ಚಟುವಟಿಕೆಗಳ ಡಾಕ್ಯುಮೆಂಟ್ ಇಟ್ಟಿದ್ದಾರೆ. ಅಡ್ಡಂಡ ಕಾರ್ಯಪ್ಪ ಏನೂ ಮಾಡಿಲ್ಲ ಎನ್ನುವವರಿಗೆ 'ಕೋವಿಡ್ ಕತ್ತಲೆಯಲ್ಲೂ ರಂಗ ಬೆಳಕು' ಹಾಗೂ 'ಪ್ಲವರಂಗ' ಕಿರುಹೊತ್ತಿಗೆಗಳ ಮೂಲಕ ಎರಡೂ ಸಂವತ್ಸರದ ಪಕ್ಷಿನೋಟವನ್ನು ಬಿಚ್ಚಿಟ್ಟಿದ್ದಾರೆ. ಅಷ್ಟೇ ಅಲ್ಲದೆ ರಂಗಾಯಣ ಕಚೇರಿ ಮುಂಭಾಗವೂ ಎರಡು ವರ್ಷ ಗಳ ಕಾರ್ಯಚಟುವಟಿಕೆ ಮಾಹಿತಿಯನ್ನು ಪ್ರದರ್ಶಿಸಿದ್ದಾರೆ. ರಂಗಾಯಣದ ಪ್ರತಿಯೊಬ್ಬರನ್ನೂ ವಿಶ್ವಾಸದಿಂದ ಕಂಡು, ತಾವೂ ಕೆಲಸ ಮಾಡುವ ಮೂಲಕ ಜಾಗೃತಿ ಮೂಡಿಸಿರುವ ಅಡ್ಡಂಡ ಕಾರ್ಯಪ್ಪ ರಂಗಾಯಣ ಉನ್ನತಿಗೆ ಟೊಂಕಕಟ್ಟಿ ಕೆಲಸ ಮಾಡಿದ್ದಾರೆ.

'ಟಿಪ್ಪು ನಿಜ ಕನಸುಗಳು' ನಾಟಕಕ್ಕೆ ಸರ್ಕಾರದ ನೆರವಿಗೆ ಮನವಿ

ಗಿರೀಶ್ ಕಾರ್ನಾಡ್ ಅವರು ರಚಿಸಿದ್ದ 'ಟಿಪ್ಪು ಸುಲ್ತಾನ ಕಂಡ ಕನಸು' ನಾಟಕವನ್ನು ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರದರ್ಶಿಸಲಾಗಿತ್ತು. ಅದಕ್ಕೆ ಅಂದಿನ ಸರ್ಕಾರ ವಿಶೇಷ ಅನುದಾನ ನೀಡಿತ್ತು. ಇದೀಗ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ನಾನು ರಚಿಸಿ, ನಿರ್ದೇಶಿಸುತ್ತಿರುವ 'ಟಿಪ್ಪು ನಿಜ ಕನಸುಗಳು' ನಾಟಕ ಪ್ರದರ್ಶನವಾಗಲಿದೆ. ಟಿಪ್ಪುವಿನ 17 ವರ್ಷಗಳ ಆಡಳಿತವನ್ನು ಈ ನಾಟಕ ಕಣ್ಣಿಗೆ ಕಟ್ಟಲಿದೆ. ಸುಮಾರು 20 ಕಲಾವಿದರು ಅಭಿನಯಿಸುತ್ತಿದ್ದು, ನ.20ರೊಳಗೆ ನಾಟಕ ಪ್ರದರ್ಶನವಾಗಲಿದೆ. ಈ ನಾಟಕ ಪ್ರದರ್ಶನಕ್ಕೆ ರಾಜ್ಯ ಸರ್ಕಾರ ವಿಶೇಷ ಅನುದಾನ ನೀಡಲೇಬೇಕು ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಆಗ್ರಹಿಸಿದ್ದಾರೆ.



ವಾರಭವಿಷ್ಯ

30.11.2022 ರಿಂದ 5.11.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ತುಲಾ, ಚಂದ್ರ-ಧನುಸ್ಸು, ಮಕರ, ಕುಂಭ, ಮೀನ, ಕುಜ-ಮಿಥುನ, ಬುಧ-ತುಲಾ, ಗುರು-ಮೀನ, ಶುಕ್ರ-ತುಲಾ, ಶನಿ-ಮಕರ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ಮಾನಸಿಕ ಉದ್ವೇಗಗಳು ಹೆಚ್ಚಾಗಲಿದೆ. ಪ್ರಯತ್ನಗಳು ಫಲಕಾರಿಯಾಗದೆ ಮನಸ್ಸಿಗೆ ಅತೃಪ್ತಿ ಆವರಿಸುವುದು. ವಾಮ ಮಾರ್ಗದಲ್ಲಿ ಬಂದ ಧನ ಹೆಚ್ಚು ಕಾಲ ಕೈಯಲ್ಲಿ ನಿಲ್ಲದು. ವಾರದ ಉತ್ತರಾರ್ಧಕ್ಕೆ ಹಲವರಿಗೆ ನೂತನ ಅಧಿಕಾರ ಪ್ರಾಪ್ತಿ. 'ಸುಖೇ ದುಃಖೇ ಸಮೇ ಕೃತ್ವಾ' ಎಂಬ ಗೀತವಾಣಿಯಂತೆ ಸಮಚಿತ್ತತೆಯಿಂದ ಇರಲು ಪ್ರಯತ್ನಿಸಿ. ಸತಿ-ಸುತರು ನಿಮ್ಮ ಮನಸ್ಸಿಗೆ ವಿರುದ್ಧ ನಡೆಯುವರು. ಕಫ ಸಂಬಂಧಿ ಕಾಯಿಲೆ ಕಾಡಬಹುದು. ಶ್ರೀ ಸುಬ್ರಹ್ಮಣ್ಯ ಸ್ತೋತ್ರ. ಶುಭ ಸಂಖ್ಯೆ-1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಾರದ ಪೂರ್ವಾರ್ಧಕ್ಕೆ ಉತ್ಸಾಹ, ಸಂತೋಷಗಳು ಅರಸಿ ಬರುವುದು. ನಿಮ್ಮ ಆಫೀಸ್ ಹಾಗೂ ವೈಯಕ್ತಿಕ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಳ್ಳುವಿರಿ. ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶ ನಿರೀಕ್ಷಣೆಯಲ್ಲಿರುವವರಿಗೆ ಯಶಸ್ಸು, ಕ್ಯಾಂಪಸ್ ಸೆಲೆಕ್ಷನ್ ಆಗುವ ಸಂಭವವಿದೆ. ನಿವೇಶನ, ಗೃಹ ಕೊಳ್ಳಲು ಗುರು ಕೃಪೆಯಿದೆ. ವ್ಯಯ ಸ್ಥಾನ ಸ್ಥಿತ ರಾಹು ವಾಹನಾಪಘಾತಗಳಿಗೆ ಕಾರಣೀಭೂತನಾಗುವನು. ಶ್ರೀಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ-5.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದಾರಂಭಕ್ಕೆ ಚಂದ್ರಗ್ರಹ ಸಂಚಾರ ನಿಮ್ಮ ನೆರವಿಗೆ ಇದೆ. ಮನೆಯಲ್ಲಿ ಭಿನ್ನಾಭಿಪ್ರಾಯಗಳು ನಿವಾರಣೆ ಆಗುವುದು. ಚಾಕಚಕ್ಯತೆಯಿಂದ ಕೆಲಸ ಕಾರ್ಯಗಳನ್ನು ಸಿದ್ಧಿಸಿಕೊಳ್ಳುವಿರಿ. ಅಷ್ಟಮ ಶನಿಯಿಂದಾಗಿ ಪ್ರಮುಖ ಯೋಜನೆಗಳು ನಿಂತು ನಿಂತು ಸಾಗುವುದು. ವಿದ್ಯಾರ್ಥಿಗಳು ಆಲಸಿಗರಾಗುವರು, ಶಿಕ್ಷಣದಲ್ಲಿ ಆಸಕ್ತಿ ಕಡಿಮೆ ಆಗುವುದು. ನ್ಯಾಯಾಲಯ ವ್ಯವಹಾರಗಳಲ್ಲಿ ಹಿನ್ನಡೆ ಉಂಟಾಗುವುದು. ಶ್ರೀ ವಿಷ್ಣು ಉಪಾಸನೆ. ಶುಭ ಸಂಖ್ಯೆ-4.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ವ್ಯವಹಾರ ಕುಶಲತೆ ತೋರುವುದರಿಂದ ನಿಮ್ಮ ಬ್ಯುಸಿನೆಸ್‌ನಲ್ಲಿ ಹೊಸ ಮಜಲನ್ನು ತಲುಪುವಿರಿ. ಸರಿಯಾದ ಮಾರ್ಗ ತೋರಲು ಗುರು ಕೃಪೆಯಿದೆ. ವಾರ ಸರಿದಂತೆ ಹಿತೈಷಿಗಳ ಸಮಯೋಚಿತ ಸಲಹೆ, ಸಹಾಯಗಳೂ ದೊರಕುವುದು. ಸಾಮಾಜಿಕ ಸೇವೆ, ಅನ್ನದಾನಗಳಿಂದ ಜನಾದರ ಗಳಿಸುವಿರಿ. ಮಕ್ಕಳ ಸಹವಾಸ ಅಡ್ಡದಾರಿಯಲ್ಲಿ ಸಾಗಬಹುದು. ನಿಗಾವಹಿಸಿ ವಾರಾಂತ್ಯಕ್ಕೆ ಸಾರ್ಟ್ ಟ್ರಿಪ್ಸ್ ಸೆಲ್ಫಿಯಿಂದ ಎಚ್ಚರವಾಗಿರಿ. ಶ್ರೀ ಗುರುರಾಯರ ದರ್ಶನ. ಶುಭ ಸಂಖ್ಯೆ-8.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
'ಗುರಿ ಸಾಧಿಸಲು ಗುರು ಕೃಪೆ ಇರಬೇಕು. ಸದ್ಯಕ್ಕೆ ನಿಮಗೆ ಅದರ ಕೊರತೆ ಇದೆ. ನಿಮ್ಮ ಆರೋಗ್ಯದ ಗಮನ ಕೊಡಿ. ಸಾಂಸಾರಿಕವಾಗಿ ಕಿರಿಕಿರಿಗಳು ಉಂಟಾದರೆ ಸಮಾಧಾನ ಚಿತ್ತದಿಂದ ಪರಿಹರಿಸಿಕೊಳ್ಳಿ, ದುಡುಕಿ ಬೆಟ್ಟ ಮಾಡಲು ಹೋಗದಿರಿ. ವಾರದ ಉತರಾರ್ಧಕ್ಕೆ ಇಷ್ಟ ಬಂದು-ಮಿತ್ರರ ಸಮಾಗಮ ಹರ್ಷ ತರುವುದು. ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ. ಮನೆ ಸದಸ್ಯರೊಂದಿಗೆ ಹೆಚ್ಚಿನ ಸಮಯ ಕಳೆಯುವುದರಿಂದ ಮನಸ್ಸಿನ ಉದ್ವೇಗ ನಿವಾರಣೆಯಾಗುವುದು. ಶ್ರೀ ಸೂರ್ಯ ನಮಸ್ಕಾರ. ಶುಭ ಸಂಖ್ಯೆ-2.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದ ಪೂರ್ವಾರ್ಧಕ್ಕೆ ಉತ್ಸಾಹ, ಸಂತೋಷಗಳು ಅರಸಿ ಬರಲಿದೆ. ನಿಮ್ಮ ಕಚೇರಿ ಹಾಗೂ ವೈಯಕ್ತಿಕ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಳ್ಳುವಿರಿ. ಫಲಿತಾಂಶ ನಿರೀಕ್ಷಣೆಯಲ್ಲಿರುವ ವಿದ್ಯಾರ್ಥಿಗಳಿಗೆ ಯಶಸ್ಸು, ಕ್ಯಾಂಪಸ್ ಸೆಲೆಕ್ಷನ್ ಆಗುವ ಸಂಭವವಿದೆ. ನಿವೇಶನ, ಗೃಹ ಕೊಳ್ಳಲು ಗುರು ಕೃಪೆ ಇದೆ. ಬ್ಯಾಂಕ್ ಸಾಲಕ್ಕೂ ಪ್ರಯತ್ನಿಸಬಹುದು. ನಿಮಗೆ ಪಿತ್ತ ಸಂಬಂಧಿ ಕಾಯಿಲೆ ಕಾಡಬಹುದು. ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-2.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಸಮಸ್ಯೆಗಳು ಎದುರಾದಾಗ ಹಿರಿಯರಿಂದ ಸಲಹೆ ಸೂಚನೆಗಳನ್ನು ಪಡೆಯುವುದು ಜಾಣತನ. ಎಷ್ಟು ಸಿರಿವಂತರಾದರೂ ಕಷ್ಟಗಳು ಬರುವುದು ತಪ್ಪದು. ನಿಮ್ಮ ರಾಶಿಯಲ್ಲಿ ಉಂಟಾಗಿರುವ ಚತುರ್ಗ್ರಹ ಯೋಗ ನಿಮ್ಮ ಅಭ್ಯುದಯಕ್ಕೆ ಪೂರಕವಾಗಿಲ್ಲ. ನಿಮ್ಮ ಕೆಲಸಕ್ಕೆ ತಕ್ಕ ಪ್ರತಿಫಲ ಸಿಗಲಿಲ್ಲವೆಂದು ನಿರಾಶೆ ಬೇಡ. ಕಷ್ಟಗಳು ಚಲಿಸುವ ಮೋಡಗಳಂತೆ ಸ್ಥಿರವಲ್ಲ. ವಾರದ ಕಡೆಗೆ ಜೀವನ ಶೈಲಿಯಲ್ಲಿ ಬದಲಾವಣೆ ಕಾಣುವುದು. ಶ್ರೀ ಮನೆದೇವರ ಪೂಜೆ. ಶುಭ ಸಂಖ್ಯೆ-6.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಸಪ್ತಾಹದ ಆದಿಗೆ ಹಿರಿಯರ ಮಾರ್ಗದರ್ಶನದಿಂದ ಅನೇಕ ವಿಧದಲ್ಲಿ ಧನಾಗಮವಾಗಲಿದೆ. ಅಭಿವೃದ್ಧಿಯ ಮಾರ್ಗವೂ ತೆರೆದಿದೆ. ಮೈ ಮರೆತರೆ ನಿಮ್ಮ ಹಿತಾಸಕ್ತಿಗೆ ಧಕ್ಕೆಯಾಗುವುದು. ಸುಖ, ಸಂತೋಷ, ಮನಃಶಾಂತಿಗಳನ್ನು ಬಯಸುವಿರಾದರೆ ವಾಮಮಾರ್ಗವನ್ನು ಹಿಡಿಯಬೇಡಿ. ನ್ಯಾಯಾಲಯ ವಿಚಾರಗಳಲ್ಲಿ ಶತ್ರುಗಳ ಮೇಲೆ ವಿಜಯವನ್ನು ಸಾಧಿಸುವಿರಿ. ಕುಜ ಸಂಚಾರ ಅಷ್ಟಮದಲ್ಲಿರುವ ಕಾರಣ ಮಿಷನರಿ, ವಿದ್ಯುತ್ ಅವಘಡಗಳಿಂದ ಎಚ್ಚರವಾಗಿರಿ. ಶ್ರೀ ಗಣಪತಿಗೆ ಗರಿಕೆ ಸಮರ್ಪಣೆ. ಶುಭ ಸಂಖ್ಯೆ-7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಸದ್ಯಕ್ಕೆ ಹೊಸ ವ್ಯಾಪಾರ ವ್ಯವಹಾರಗಳ ಪ್ರಾರಂಭವನ್ನು ಮುಂದೂಡುವುದು ಲೇಸು. ಸಾಲ ಪತ್ರ ಹಾಗೂ ಜಾಮೀನು ಪತ್ರಗಳಿಗೆ ಸಹಿ ಹಾಕುವ ಮೊದಲು ವಕೀಲರ ಸಲಹೆ ಪಡೆಯಿರಿ. ಸಾಡೇಸಾತಿಯ ಹೊರತಾಗಿಯೂ ಇತರ ಗ್ರಹಗಳ ಶುಭ ಪ್ರಭಾವದಿಂದ ತೊಂದರೆಗಳಿಂದ ಪಾರಾಗುವಿರಿ. ನಿಮಗೆ ಸಂಬಂಧ ಪಡದ ವಿಷಯಗಳಲ್ಲಿ ತಲೆ ಹಾಕಲು ಹೋಗಬೇಡಿ. ರಾತ್ರಿ ಪ್ರಯಾಣಗಳನ್ನು ಅವಾಯ್ಡ್ ಮಾಡಿ. ಶ್ರೀ ಮೃತ್ಯುಂಜಯ ಜಪ ಮಾಡಿ. ಶುಭ ಸಂಖ್ಯೆ-6.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಈ ವಾರ ಸಮತೋಲನವಾದ ವಾದ, ಪರಿಶ್ರಮದಿಂದ ಕಾರ್ಯ ಸಾಧನೆ. ಸ್ನೇಹಿತರ, ಹಿತಚಿಂತಕರ ಮಿಲನ ಹಾಗೂ ಉತ್ತಮ ಆಹಾರ-ವಿಹಾರಗಳು. ಲೋಕ ಸೇವೆಯಿಂದ ಜನರ ಮೆಚ್ಚುಗೆಗೆ ಪಾತ್ರರಾಗುವಿರಿ. ಮನೆ ಮಂದಿಯಲ್ಲಿ ಭಿನ್ನಾಭಿಪ್ರಾಯ ಗಳಿಗೆ ಆಸ್ಪದ ಕೊಡದಂತೆ ನಡೆದುಕೊಳ್ಳಿ. ವಾಹನ ಅಜಾಗರೂಕತೆಯಿಂದ ಓಡಿಸಿ ತೊಂದರೆಗೆ ಗುರಿಯಾಗುವಿರಿ. ಗುರುಗಳಿಂದ ಮಂತ್ರಾರ್ಥ ದೊರೆಯುವ ಯೋಗವಿದೆ. ಓಂ ನಮೋ ಭಗವತೇ ವಾಸುದೇವಾಯ ಜಪಿಸಿ. ಶುಭ ಸಂಖ್ಯೆ-9

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದ ಮೊದಲ ಭಾಗದಲ್ಲಿ ಶುಭ ಚಂದ್ರನಿಂದ ಉತ್ಸಾಹ, ಸಂತೋಷಗಳು ನಿಮ್ಮನ್ನು ಅರಸಿ ಬರುವುದು. ಕಬ್ಬಿಣ ಕಾದಾಗ ತಟ್ಟಿಕೊಳ್ಳಿ ಎಂಬಂತೆ ಜಾಣತನದಿಂದ ನಿಮ್ಮ ಕೆಲಸ ಕಾರ್ಯಗಳನ್ನು ಪೂರೈಸಿಕೊಳ್ಳುವಿರಿ. ಇದಕ್ಕೆ ಪ್ರಭಾವಿ ವ್ಯಕ್ತಿಗಳ ಸಹಕಾರವೂ ದೊರಕಲಿದೆ. ಶನಿ ಪ್ರಭಾವದಿಂದ ಸಾರ್ವಜನಿಕ ವಲಯದಲ್ಲಿ ಅಪಖ್ಯಾತಿಗೆ ಗುರಿ ಯಾಗುವಿರಿ. ರಾಜಕೀಯ ರಂಗದವರಿಗೆ ಅಗ್ನಿ ಪರೀಕ್ಷೆಗಳು ಎದುರಾಗಲಿವೆ. ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-4.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಈ ಸಪ್ತಾಹದಲ್ಲಿ ಹೊಸ ಬಂಡವಾಳ ಹೂಡಲು, ಮನೆ, ನಿವೇಶನ ಕೊಳ್ಳಲು ಗ್ರಹಗಳ ಅನುಕೂಲವಿದೆ. ಇಲ್ಲಿ ಕರ್ಮಕ್ಕೆ ತಕ್ಕಂತೆ ಫಲ, ಜಾಗ್ರತೆ ತಪ್ಪಿದರೆ ಜಾರುತ್ತೀರ. ಸರ್ಕಾರಿ ನೌಕರರಿಗೆ ಹೆಚ್ಚುವರಿ ಜವಾಬ್ದಾರಿಯ ಜೊತೆ ಬೇಡದ ಸ್ಥಳಕ್ಕೆ ವರ್ಗವಾಗಬಹುದು. ಕೆಲಸವಾದ ಮೇಲೆ ಕೈಬಿಡುವ ಸ್ನೇಹಿತರಿಂದ ದೂರವಿರಿ. ಶ್ರೀ ಶನಿದೇವನ ಅನುಗ್ರಹದಿಂದ ಕೃಷಿಕರಿಗೆ ಉತ್ತಮ ಫಸಲು, ಬೆಲೆ ಎರಡೂ ದೊರೆಯುವುದು. ಶ್ರೀದತ್ತ ನಾಮಸ್ಮರಣೆ. ಶುಭ ಸಂಖ್ಯೆ-3.

ಮೈಸೂರು ಮಿತ್ರ ಭಾನುವಾರ 30 ಅಕ್ಟೋಬರ್ 2022

ಮಂಡ್ಯ ಜೆಡಿಎಸ್ ಟಿಕೆಟ್ ಗೊಂದಲ

ಮೂವರು ಸ್ಪರ್ಧಿಗಳ ಜೊತೆ ಸಂಧಾನ ಸಭೆ

ಟಿಕೆಟ್ ಕುರಿತಂತೆ ಕಾರ್ಯಕರ್ತರಿಗೆ ಆಶ್ವಾಸನೆ ನೀಡಬೇಡಿ: ನಿಖಿಲ್ ಸೂಚನೆ



"ಮಂಡ್ಯ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂವರು ಆಕಾಂಕ್ಷಿತರ ನಡುವೆ ನಿಖಿಲ್‌ಕುಮಾರಸ್ವಾಮಿ ಅವರು ಸಂಧಾನ ಮಾಡಿದ್ದಾರೆ. ಯಾವುದೇ ಗೊಂದಲಕ್ಕೆ ಆಸ್ಪದ ನೀಡದಂತೆ ಪಕ್ಷ ಸಂಘಟನೆ ಮಾಡುವಂತೆ ತಿಳಿಸಿದ್ದಾರೆ. ಅಲ್ಲದೆ ಟಿಕೆಟ್ ವಿಚಾರವಾಗಿ ಮುಂದಿನ ನಿರ್ಧಾರಗಳೂ ಶಾಸಕ ಎಂ.ಶ್ರೀನಿವಾಸ್ ನೇತೃತ್ವದಲ್ಲೇ ನಡೆಯಲಿದೆ. ಅದರಂತೆ ಮೂವರು ಒಪ್ಪಿಗೆ ಸೂಚಿಸಿದ್ದಾರೆ. ಪಕ್ಷ ತೆಗೆದುಕೊಳ್ಳುವ ನಿರ್ಧಾರಕ್ಕೆ ಮೂವರೂ ಸಮ್ಮತಿಸಿದ್ದಾರೆ.

–ಡಿ.ರಮೇಶ್, ಜೆಡಿಎಸ್ ಜಿಲ್ಲಾಧ್ಯಕ್ಷ

"ನಾನು ಸಹ ಮಂಡ್ಯ ವಿಧಾನಸಭಾ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದು, ಕಳೆದ ಐದು ವರ್ಷಗಳಿಂದ ಕ್ಷೇತ್ರದಲ್ಲಿ ಶ್ರಮಿಸುತ್ತಿದ್ದೇನೆ. ಕಳೆದ ಎರಡು ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡು ಟಿಕೆಟ್ ಬೇಕೆಂದು ಕೇಳಿದ್ದೇನೆ. ಆದರೆ ಆಕಾಂಕ್ಷಿತರ ಸಂಧಾನ ಸಭೆಗೆ ನನ್ನನ್ನು ಕರೆಯದೇ ಇರುವುದು ತೀವ್ರ ಬೇಸರ ತರಿಸಿದೆ. ಜಿಲ್ಲಾಧ್ಯಕ್ಷ ಡಿ.ರಮೇಶ್ ನಡೆಯ ಬಗ್ಗೆ ನಾನು ಕುಮಾರಸ್ವಾಮಿ ಹಾಗೂ ನಿಖಿಲ್‌ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸುವೆ.

– ಮಹಾಲಿಂಗೇಗೌಡ, ಮಂಡ್ಯ ಜೆಡಿಎಸ್ ಟಿಕೆಟ್ ಆಕಾಂಕ್ಷಿ

ಮಂಡ್ಯ,ಅ.29– ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡಿ, ಯಾವುದೇ ಗೊಂದಲ, ಟಿಕೆಟ್ ಕುರಿತಂತೆ ಜೆಡಿಎಸ್ ಕಾರ್ಯಕರ್ತರಿಗೆ ಯಾವುದೇ ಆಶ್ವಾಸನೆ ನೀಡಬೇಡಿ ಎಂದು ಜೆಡಿಎಸ್‌ನ ಮೂವರು ಟಿಕೆಟ್ ಆಕಾಂಕ್ಷಿತರಿಗೆ ಜೆಡಿಎಸ್‌ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ಸೂಚನೆ ನೀಡಿದ್ದಾರೆ.

ಶುಕ್ರವಾರ ರಾತ್ರಿ ನಗರದ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ನಿವಾಸದಲ್ಲಿ ಸಂಧಾನ ಸಭೆ ನಡೆಸಿದ ನಿಖಿಲ್, ಮೂವರು ಟಿಕೆಟ್ ಆಕಾಂಕ್ಷಿತರಾದ ಮನ್‌ಮುಲ್ ಅಧ್ಯಕ್ಷ ಬಿ.ಆರ್. ರಾಮಚಂದ್ರು, ಪಿಇಟಿ ಅಧ್ಯಕ್ಷ ಕೆ.ಎಸ್. ವಿಜಯಾನಂದ ಹಾಗೂ ಎಚ್.ಎನ್. ಯೋಗೇಶ್ ಜತೆ ಮಾತುಕತೆ ನಡೆಸಿದರು.

ಕ್ಷೇತ್ರದಲ್ಲಿ ಹಿರಿಯ ಶಾಸಕರಾಗಿ ಎಂ. ಶ್ರೀನಿವಾಸ್ ಇದ್ದಾರೆ. ಅವರ ನೇತೃತ್ವದಲ್ಲಿಯೇ ಪಕ್ಷವನ್ನು ಕೊಂಡೊಯ್ಯಬೇಕು. ಪಕ್ಷ ಸಂಘಟನೆಯನ್ನು ಕ್ಷೇತ್ರದಲ್ಲಿ ನಿರಂತರವಾಗಿ ಮಾಡಿ, ಆದರೆ ಯಾವುದೇ ಕಾರಣಕ್ಕೂ ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಯಾಗಬಾರದು. ಮುಂದಿನ ದಿನಗಳಲ್ಲಿ ಪಕ್ಷದ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಬೇಕು ಎಂದು ತಿಳಿಸಿದರು.

ಮುಂದೆ ಪಕ್ಷದಿಂದ ಯಾರಿಗೇ ಟಿಕೆಟ್ ನೀಡಿದರೂ ಅವರ ಪರವಾಗಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಪಕ್ಷದ ತೀರ್ಮಾನವನ್ನು ಎಲ್ಲರೂ ಸ್ವೀಕರಿಸಬೇಕು. ಯಾವುದೇ ಭಿನ್ನಮತಕ್ಕೆ ಅವಕಾಶ ಬೇಡ. ಪಕ್ಷದ ಕಾರ್ಯಕರ್ತರು ಸಹ ಪಕ್ಷ ಸೂಚಿಸುವ ಅಭ್ಯರ್ಥಿಪರ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ನಿಖಿಲ್ ಮಾತಿಗೆ ಆಕಾಂಕ್ಷಿಗಳಾದ ರಾಮಚಂದ್ರು, ವಿಜಯಾನಂದ ಹಾಗೂ ಯೋಗೇಶ್ ಒಪ್ಪಿಗೆ ಸೂಚಿಸಿ, ಮೂವರು ಯಾವುದೇ ಗೊಂದಲವಿಲ್ಲದೆ, ಪಕ್ಷ ಸಂಘಟನೆಯಲ್ಲಿ ತೊಡಗಿಕೊಳ್ಳುತ್ತೇವೆ. ಪಕ್ಷ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗಿರುತ್ತೇವೆ ಎಂದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಮನ್‌ಮುಲ್ ನಿರ್ದೇಶಕ ಹೆಚ್.ಟಿ.ಮಂಜು, ಯುವ ಘಟಕದ ಜಿಲ್ಲಾಧ್ಯಕ್ಷ ಕಂಸಾಗರ ರವಿ ಇದ್ದರು.

ಕೆ.ಆರ್.ಪೇಟೆ: ಜಿಲ್ಲಾಧಿಕಾರಿ ನಡೆ–ಹಳ್ಳಿಯ ಕಡೆ



ಕೆಆರ್.ಪೇಟೆ,ಅ.29– ತಾಲೂಕಿನ ಕಸಬಾ ಹೋಬಳಿಯ ಚಿಲ್ಲದಹಳ್ಳಿ ಗ್ರಾಮದಲ್ಲಿ ಜಿಲ್ಲಾಧಿಕಾರಿ ನಡೆ–ಹಳ್ಳಿಯ ಕಡೆ ಕಾರ್ಯಕ್ರಮವು ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಯಶಸ್ವಿಯಾಗಿ ನಡೆಯಿತು.

ತಹಸೀಲ್ದಾರ್ ಎಂ.ವಿ.ರೂಪಾ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟನೆ ಮಾಡಿದರು. ಬಳಿಕ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಸಾರ್ವಜನಿಕರು ಹಾಗೂ ರೈತ ಬಾಂಧವರು ಪಟ್ಟಣಕ್ಕೆ ಬಂದು ಸರ್ಕಾರಿ ಕಚೇರಿಗಳಿಗೆ ಅಲೆದಾಡಿ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳಲು ಅನವಶ್ಯಕವಾಗಿ ಸುತ್ತಾಡಬಾರದು ಎಂಬ ಉದ್ದೇಶದಿಂದ ಜಿಲ್ಲಾಧಿಕಾರಿಗಳ ನಡೆ, ಹಳ್ಳಿಯ ಕಡೆ ವಿನೂತನ ಕಾರ್ಯಕ್ರಮವನ್ನು ಸರ್ಕಾರ ಜಾರಿಗೆ ತಂದಿದೆ. ಈ ಕಾರ್ಯಕ್ರಮವು ರಾಜ್ಯಾದ್ಯಂತ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ. ಪಿಂಚಣಿಗಾಗಿ ಹಲವು ತಿಂಗಳು ಅಲೆದಾಡಿ ಪಡೆದುಕೊಳ್ಳಬೇಕಾಗಿತ್ತು. ಈಗ 60 ವರ್ಷ ಮೇಲ್ಪಟ್ಟ ಅರ್ಹ ಫಲಾನುಭವಿಗಳಿಂದ ಅರ್ಜಿ ಪಡೆದು ಒಂದೇ ದಿನದಲ್ಲಿ ಪಿಂಚಣಿ ಮಂಜೂರಾತಿ ಆದೇಶ ಪತ್ರವನ್ನು ವಿತರಣೆ ಮಾಡಲಾಗುತ್ತಿದೆ. ಜೊತೆಗೆ ವಿವಿಧ ಇಲಾಖೆಗಳ ಅಧಿಕಾರಿಗಳು ಗ್ರಾಮಗಳಿಗೆ ತೆರಳಿ ರೈತರ ಸಮಸ್ಯೆಯನ್ನು ಆಲಿಸಿ ಸ್ಥಳದಲ್ಲಿಯೇ ಸಣ್ಣಪುಟ್ಟ ಸಮಸ್ಯೆಗಳಿಗೆ ಪರಿಹಾರವನ್ನು ದೊರಕಿಸಿಕೊಡುವ ಜೊತೆಗೆ ನಿಗದಿತ ಸಮಯದಲ್ಲಿ ಉಳಿದ ಕಾನೂನು ಬದ್ಧ ಕೆಲಸಗಳನ್ನು ಮಾಡಿಕೊಡಲು ಮುಂದಾಗಿದೆ. ರೈತಬಾಂಧವರು ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಂಡು ನೆಮ್ಮದಿಯ ಜೀವನ ನಡೆಸಲು ಸರ್ಕಾರದ ಈ ಕಾರ್ಯಕ್ರಮದಿಂದ ಅನುಕೂಲವಾಗುತ್ತದೆ. ಗ್ರಾಮೀಣ ಜನರು ಯಾವುದೇ ಮಧ್ಯವರ್ತಿಗಳ ಕಾಟವಿಲ್ಲದೇ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಂಡು ಸಮಸ್ಯೆಗಳಿಂದ ಮುಕ್ತರಾಗುವ ಜೊತೆಗೆ ಇಡೀ ಗ್ರಾಮವನ್ನು ಸಮಗ್ರ ಅಭಿವೃದ್ಧಿಯ ಪಥದತ್ತ ಮುನ್ನಡೆಸಬಹುದಾಗಿದೆ ಎಂದು ಹೇಳಿದರು.

ಸ್ಥಳದಲ್ಲಿಯೇ ಸುಮಾರು 30ಕ್ಕೂ ಹೆಚ್ಚು ವಿವಿಧ ಪಿಂಚಣಿ ಆದೇಶ ಪತ್ರಗಳನ್ನು ಹಾಗೂ ಪಹಣಿ ತಿದ್ದುಪಡಿ ಆದೇಶ ಪತ್ರವನ್ನು ವಿತರಣೆ ಮಾಡಲಾಯಿತು. ಜೊತೆಗೆ ವಿವಿಧ ಸೌಲಭ್ಯ ಕೋರಿ ಸಾರ್ವಜನಿಕರು ನೀಡಿದ ಅರ್ಜಿಗಳನ್ನು ಪಡೆದು ಹಲವು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ರೂಪಿಸಲಾಯಿತು. ಚಿಲ್ಲದಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ನಿರ್ಮಿಸುತ್ತಿರುವ ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ 2 ಎಕರೆ ಭೂಮಿಯನ್ನು ಮಂಜೂರು ಮಾಡಿಕೊಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಪಂ ಸದಸ್ಯ ಆರ್.ಶ್ರೀನಿವಾಸ್ ವಹಿಸಿದ್ದರು.

ಕಾರ್ಯಕ್ರಮದಲ್ಲಿ ರಾಜಸ್ವ ನಿರೀಕ್ಷಕಿ ಚಂದ್ರಕಲಾ ಪ್ರಕಾಶ್, ಪಿಡಿಓ ದೇವೇಗೌಡ, ಗ್ರಾಮ ಲೆಕ್ಕಾಧಿಕಾರಿ ಸ್ಫೂರ್ತಿ, ಗ್ರಾಮದ ಮುಖಂಡರಾದ ಪಟೇಲ್ ನಾಗೇಗೌಡ, ಜಯರಾಮೇಗೌಡ, ವೆಂಕಟೇಶ್, ಮಹೇಂದ್ರ, ಡ್ರೈವರ್ ಬಸವರಾಜು, ಎಸ್‌ಡಿಎಂಸಿ ಅಧ್ಯಕ್ಷ ಸಿ.ಎನ್.ಸತೀಶ್, ಮುಖ್ಯ ಶಿಕ್ಷಕ ಕೃಷ್ಣಯ್ಯ, ಸಹ ಶಿಕ್ಷಕಿ ಮಂಜುಳಾ, ಬಿಲ್ ಕಲೆಕ್ಟರ್ ನರಸಿಂಹಯ್ಯ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಚಿರತೆ ಸೆರೆಗೆ ಮುಂದುವರಿದ ಕಾರ್ಯಾಚರಣೆ



ಶ್ರೀರಂಗಪಟ್ಟಣ, ಅ.29– ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಶುಕ್ರ ವಾರ ಮತ್ತೆ ಪ್ರತ್ಯಕ್ಷವಾದ ಚಿರತೆ ಸೆರೆಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಬೋನ್ ಇರಿಸಿ ಕ್ಯೂಬಿಕ್ ನಡೆಸಿದರು.

ಒಂದು ವಾರದ ಅಂತರದಲ್ಲಿ ಎರಡು ಬಾರಿ ಪ್ರತ್ಯಕ್ಷಗೊಂಡ ಚಿರತೆಯಿಂದಾಗಿ ಪ್ರವಾಸಿಗರು ಹಾಗೂ ಸಿಬ್ಬಂದಿಗಳ ಆತಂಕ ಸೃಷ್ಟಿಸಿದೆ. ಕಳೆದ ಬಾರಿ ಚಿರತೆ ಪ್ರತ್ಯಕ್ಷಗೊಂಡ ಮರುದಿನವೇ ಪ್ರವಾಸಿಗರ ಪ್ರವೇಶಕ್ಕೆ ಅನುವು ಮಾಡಿಕೊಡಲಾಗಿತ್ತು. ಅಧಿಕಾರಿಗಳ ಈ ನಡೆ ಸಾರ್ವಜನಿಕರಲ್ಲಿ ಆಕ್ರೋಶ ಉಂಟು ಮಾಡಿತ್ತು. ಕಾರಣ ಚಿರತೆ ಕಾಣಿಸಿಕೊಂಡ ನಂತರ ಅದನ್ನು ಬಂಧಿಸದೇ ಏಕಾಏಕಿ ಪ್ರವಾಸಿಗರ ಪ್ರವೇಶಕ್ಕೆ ಅವಕಾಶ ಕಲ್ಪಿಸಿದ್ದರಿಂದ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿತ್ತು.

ಆದರೆ ಈ ಬಾರಿ ಬೋನ್ ಇರಿಸಿದ ನಂತರವು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು, ಅರಣ್ಯ ಇಲಾಖೆ ಹಾಗೂ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಶನಿವಾರ ಬೃಂದಾವನಕ್ಕೆ ಪ್ರವಾಸಿಗರ ಪ್ರವೇಶವನ್ನು ನಿಷೇಧಿಸಲು ತೀರ್ಮಾನಿಸಿ, ಇಂದು ಪ್ರವೇಶ ನಿರ್ಬಂಧಿಸಲಾಗಿತ್ತು ಎಂದು ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರ ಫಾರುಕ್‌ಅಭು ತಿಳಿಸಿದರು.

ಅಧಿಕಾರಿಗಳಿಗೆ ಎದುರಾದ ಚಿರತೆ: ಶುಕ್ರವಾರ ರಾತ್ರಿ 10ಗಂಟೆಗೆ ಚಿರತೆ ಕಾಣಿಸಿಕೊಂಡ ವಿಷಯ ತಿಳಿದು ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಅಣೆಕಟ್ಟೆಯ ನಾರ್ಥ್ ಗೇಟ್ ಬಳಿ ತೋಟಗಾರಿಕೆ ಇಲಾಖೆ ಕಚೇರಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಸಂಜೆ ಕಾಣಿಸಿಕೊಂಡಿತ್ತು. ಈ ಸಂಬಂಧ ಅರಣ್ಯ ಇಲಾಖೆ ಅಧಿಕಾರಿ ಪ್ರತಿಕ್ರಿಯಿಸಿ, ಅಣೆಕಟ್ಟೆಯ ನಾರ್ತ್ ಗೇಟ್ ಬಳಿ ಚಿರತೆ ಕಾಣಿಸಿಕೊಂಡಿರುವುದರಿಂದ ಪಾಂಡವಪುರ ವಿಭಾಗದಿಂದ ಮತ್ತೊಂದು ಬೋನ್ ಇರಿಸಿರುವುದಾಗಿ ತಿಳಿಸಿದ್ದಾರೆ.

ನ.25ರಿಂದ ಪಾಂಡವಪುರದಲ್ಲಿ ಅಪ್ಪು ಸ್ಮರಣೆಯ ಕನ್ನಡ ಹಬ್ಬ



ಮೇಲುಕೋಟೆ ಸಮೀಪದ ಕದಲಗೆರೆಯಲ್ಲಿ ಒಂದು ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶನಿವಾರ ಶಾಸಕ ಸಿ.ಎಸ್.ಪುಟ್ಟರಾಜು ಗುದ್ದಲಿಪೂಜೆ ನೆರವೇರಿಸಿದರು. ಗ್ರಾ.ಪಂ ಅಧ್ಯಕ್ಷೆ ನಿಂಗಮ್ಮ ಇತರರಿದ್ದಾರೆ.

ಪಾಂಡವಪುರ, ಅ.29– ಕನ್ನಡದ ಖ್ಯಾತ ನಟ ಪವರ್ ಸ್ಟಾರ್ ಪುನೀತ್ ಸಂಸ್ಮರಣೆಯಲ್ಲಿ ಪಾಂಡವಪುರದ ಪಾಂಡವ ಕ್ರೀಡಾಂಗಣದಲ್ಲಿ ನ.25ರಿಂದ ಮೂರು ದಿನಗಳ ಕಾಲ ಅದ್ಧೂರಿ ಕನ್ನಡ ಹಬ್ಬ ಆಯೋಜಿಸಲಾಗಿದೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಅವರು ಮೇಲುಕೋಟೆ ಹೋಬಳಿಯ ಕದಲಗೆರೆ ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದರು.

ಪುನೀತ್ ಮತ್ತು ಮೇಲುಕೋಟೆಗೆ ಅವಿನಾಭಾವ ಸಂಬಂಧ ಇತ್ತು. ಅವರ ಬಹುತೇಕ ಹಿಟ್ ಚಿತ್ರಗಳು ಮೇಲುಕೋಟೆಯಲ್ಲಿ ಚಿತ್ರೀಕರಣವಾಗಿದೆ. ಯೋಗಾನರಸಿಂಹಸ್ವಾಮಿ ಬೆಟ್ಟದ ದೃಶ್ಯವನ್ನು ಸ್ವತಃ ಮೊಟ್ಟಮೊದಲು ಡ್ರೋಣ್ ಮೂಲಕ ತೆಗೆದ ಪುನೀತ್ ತಮ್ಮ ಪೇಜ್‌ನಲ್ಲಿ ಷೇರ್ ಮಾಡಿದ್ದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಹೀಗಾಗಿ ಕ್ಷೇತ್ರದ ಜನತೆಯ ಪರವಾಗಿ ಅವರ ಸಂಸ್ಮರಣೆಯ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಈ ಅಭೂತಪೂರ್ವ ಕಾರ್ಯಕ್ರಮದಲ್ಲಿ ಡಾ.ರಾಜ್ ಕುಟುಂಬದ ಸದಸ್ಯರು ಭಾಗಿಯಾಗಲಿದ್ದಾರೆ. ಮೂರು ದಿನಗಳ ಕಾಲ ಇಡೀ ತಾಲೂಕಿನಲ್ಲಿ ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ ಎಂದರು.

ಕದಲಗೆರೆಯಲ್ಲಿ ಡೈರಿಯಿಂದ ಆದಿ ನಾರಾಯಣಸ್ವಾಮಿ ದೇವಾಲಯದವರೆಗೆ ಮತ್ತು ಕೆಳಗಲಕೇರಿ ರಸ್ತೆಯನ್ನು ಒಂದು ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಕಾಮಗಾರಿಯ ಗುಣಮಟ್ಟದಲ್ಲಿ ನಿರ್ವಹಿಸಿ ಶೀಘ್ರವಾಗಿ ಮುಕ್ತಾಯ ಮಾಡಲು ಗುತ್ತಿಗೆದಾರರು ಮತ್ತು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಸಮೀಪದ ಕಾಡೇನಹಳ್ಳಿ ಗ್ರಾಮದಲ್ಲೂ ರಸ್ತೆ ನಿರ್ಮಾಣ ಕಾಮಗಾರಿಗೆ 50 ಲಕ್ಷ ರೂ. ಮಂಜೂರು ಮಾಡಿಸಿದ್ದು, ಶೀಘ್ರವೇ ಕಾಮಗಾರಿ ಆರಂಭಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ನಿಂಗಮ್ಮ, ಉಪಾಧ್ಯಕ್ಷ ಕೆಂಪೇಗೌಡ ಜೆಡಿಎಸ್ ಮುಖಂಡರಾದ ನ್ಯಾಮನಹಳ್ಳಿ ಅಶ್ವಥ್ ಕುಮಾರೇಗೌಡ, ಜೆ.ಪಿ ಶಿವಶಂಕರ್ ಗ್ರಾಪಂ ಸದಸ್ಯರಾದ ಶ್ವೇತಾ ದೇವರಾಜು, ದಿವಾಕರ್ ಶ್ರೀನಿವಾಸ್, ಅರಕನಗೆರೆ ಲೋಕೇಶ್, ಕೆ.ಎಚ್. ದಾಸೇಗೌಡ. ವಕೀಲರಾದ ಕದಲಗೆರೆ ದಿನೇಶ್, ವಿಎಸ್.ಎಸ್.ಎನ್ ಕಾರ್ಯದರ್ಶಿ ದೇವರಾಜು, ಗ್ರಾಮಸ್ಥರಾದ ಅನಿಲ್‌ಕುಮಾರ್, ಸುರೇಶ್, ಯ.ಪುಟ್ಟಸ್ವಾಮಿಗೌಡ, ಯ.ಕೃಷ್ಣೇಗೌಡ ಸೇರಿದಂತೆ ಹಲವರು ಭಾಗಿಯಾಗಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ,ಅ.29– ಮಂಡ್ಯ ವ್ಯಾಪ್ತಿಯ ಗ್ರಾಮಗಳಾದ ಶ್ರೀನಿವಾಸಪುರ ಗೇಟ್, ಮರಕಾಡದೊಡ್ಡಿ, ಹೊಸಬೂದನೂರು, ಹಳೆಬೂದನೂರು, ಕಟ್ಟೆದೊಡ್ಡಿ, ಮಲ್ಲಯ್ಯನದೊಡ್ಡಿ, ಬಿ.ಗೌಡಗೆರೆ ಹಾಗೂ ಹನಕೆರೆ ಗ್ರಾಮಗಳಲ್ಲಿ ಮಂಡ್ಯ, ಬೆಂಗಳೂರು ಮುಖ್ಯ ರಸ್ತೆಯ ಅಗಲೀಕರಣ ಪ್ರಯುಕ್ತ ಕಾಮಗಾರಿ ನಡೆಯುತ್ತಿರುವುದರಿಂದ ಅಕ್ಟೋಬರ್ 30 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜು ವ್ಯತ್ಯಯವಾಗಲಿದೆ ಎಂದು ಮಂಡ್ಯ ಕೆರಗೋಡು ಉಪ ವಿಭಾಗ ಚಾವಿಸನಿನಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಕೆರೆ ಸುರಕ್ಷತೆ ಅವಲೋಕನ

ಕೆಇಆರ್‌ಎಸ್‌ಗೆ, ಕುಕ್ಕರಹಳ್ಳಿಕೆರೆ ಏರಿಯ ಸುರಕ್ಷತೆಯ ಬಗ್ಗೆ ಪರಿಶೀಲನೆ ನಡೆಸುವಂತೆ ಪತ್ರ ಬರೆದಿತ್ತು. ಈ ಹಿನ್ನೆಲೆಯಲ್ಲಿ ಕೆಇಆರ್‌ಎಸ್ ತಂಡ ಇಂದು ಕೆರೆಗೆ ಭೇಟಿ ನೀಡಿ ಪರಿಶೀಲಿಸಿತು.

ನಾಲ್ಕು ಕಡೆ ಮಣ್ಣಿನ ಸ್ಯಾಂಪಲ್ ಸಂಗ್ರಹ: ಕುಕ್ಕರಹಳ್ಳಿ ಕೆರೆಗೆ ಕೆಇಆರ್‌ಎಸ್‌ನ 9 ಮಂದಿ ಇಂಜಿನಿಯರ್ ಒಳಗೊಂಡ ತಜ್ಞರ ತಂಡ ಭೇಟಿ ನೀಡಿ ಪರಿಶೀಲಿಸಿತು. ಕೆರೆಯ ಏರಿ, ತೂಬು, ಕೆರೆಯಲ್ಲಿನ ನೀರಿನ ಪ್ರಮಾಣ, ಕೆರೆ ಏರಿಯಿಂದ ಸೋರಿಕೆಯಾಗುತ್ತಿರುವ ನೀರು, ಬೋಗಾದಿ ರಸ್ತೆಗೆ ಹೊಂದಿಕೊಂಡಂತಿರುವ ಚರಂಡಿಗೆ ಹರಿದು ಬರುತ್ತಿರುವ ಅಂತರ್ಜಲವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಬಳಿಕ ಕೆರೆಯಿಂದ ನೀರು ಸೋರಿಕೆಯಾಗುತ್ತಿರುವ ಶಂಕೆ ಮೇರೆಗೆ ನಾಲ್ಕು ಸ್ಥಳದಲ್ಲಿ ಮಣ್ಣಿನ ಪರೀಕ್ಷೆ ನಡೆಸಲು ಸ್ಯಾಂಪಲ್ ಸಂಗ್ರಹಿಸಲಾಯಿತು. ಕೆರೆ ಏರಿಯ ಮಧ್ಯಭಾಗ ಹಾಗೂ ತಳಭಾಗದಲ್ಲಿ ಎರಡು ಅಡಿ ಗುಂಡಿ ತೋಡಿ ಮಣ್ಣನ್ನು ಪ್ರಯೋಗಾಲಯಕ್ಕೆ ಕೊಂಡೊಯ್ಯಲಾಯಿತು.

ಮೇಲ್ನೋಟಕ್ಕೆ ಅಪಾಯ ಗೋಚರಿಸಲಿಲ್ಲ: ತಜ್ಞರ ತಂಡ ಕುಕ್ಕರಹಳ್ಳಿ ಕೆರೆಯನ್ನು ಪರಿಶೀಲಿಸಿದ ವೇಳೆ ಮೇಲ್ನೋಟಕ್ಕೆ ಕೆರೆಗೆ ಯಾವುದೇ ಅಪಾಯವಿಲ್ಲದೇ ಇರುವುದು ಕಂಡು ಬಂದಿದೆ. ಕೆರೆ ನೀರಿನಿಂದ ಏರಿಗೆ ಅಪಾಯವಾಗಿದ್ದರೆ ಏರಿ ಬಿರುಕು ಬಿಟ್ಟಿರುತ್ತಿತ್ತು. ಕೆರೆಯಲ್ಲಿ ಸಂಗ್ರಹವಾಗಿರುವ ನೀರಿನ ಮಟ್ಟದಿಂದ 5–7 ಅಡಿ ಎತ್ತರದಲ್ಲಿ ಏರಿ ಇರುವುದರಿಂದ ಏರಿಗೆ ಅಪಾಯವಿಲ್ಲ ಎಂದು ತಜ್ಞರ ತಂಡ ಅಭಿಪ್ರಾಯಪಟ್ಟಿತು.

ಕೆರೆ ಸರ್ವೆಗೆ ಸೂಚನೆ: ಕುಕ್ಕರಹಳ್ಳಿ ಕೆರೆಗೆ ಕೋಡಿಯೇ ಇಲ್ಲದಿರುವುದನ್ನು ಗಮನಿಸಿದ ತಜ್ಞರ ತಂಡ, ಪ್ರತಿಯೊಂದು ಕೆರೆ ನಿರ್ಮಾಣ ಮಾಡುವಾಗಲೂ ಹೆಚ್ಚುವರಿ ನೀರು ಹರಿದು ಹೋಗಲು ಕೋಡಿ ಕಟ್ಟೆ ನಿರ್ಮಿಸಲಾಗುತ್ತದೆ. ಕೆರೆ ಸುರಕ್ಷತೆ ದೃಷ್ಟಿಯಿಂದ ಇದು ಅನಿವಾರ್ಯ. ಹಾಗಾಗಿ ಕೆರೆಯ ಹಳೆಯ ನಕ್ಷೆ ಪಡೆದು, ಸರ್ವೆ ಮಾಡಿಸುವಂತೆ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಕುಕ್ಕರಹಳ್ಳಿ ಕೆರೆ ಸಂರಕ್ಷಣಾ ಸಮಿತಿಯ ಪ್ರೊ.ಕೆ.ಎಂ.ಜಯರಾಮಯ್ಯ, ಮೈಸೂರು ವಿವಿ ಇಂಜಿನಿಯರ್‌ಗಳಾದ ಶಿವೇಗೌಡ, ಶಿವಪ್ರಸಾದ್, ವಿವಿ ತೋಟಗಾರಿಕಾ ವಿಭಾಗದ ಸಹಾಯಕ ನಿರ್ದೇಶಕ ಮುಜಾವರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಾಯ್ತೆರೆದ ಮೊಸಳೆ ಪ್ರತ್ಯಕ್ಷ

ಆದರೆ, ಕಾರ್ಯಾಚರಣೆ ವೇಳೆ ಹಗ್ಗದ ಕುಣಿಕೆಯಿಂದ ನುಸುಳಿಕೊಂಡು ಚರಂಡಿ ನೀರಲ್ಲಿ ನಾಪತ್ತೆಯಾಗಿತ್ತು. ಎರಡು ದಿನ ಕಾರ್ಯಾಚರಣೆ ನಡೆಸಿ ಸುಮ್ಮನಾಗಿದ್ದರು. ಆದರೆ ಅ.27ರಂದು ಮತ್ತೆ ರಾಮಾನುಜ ರಸ್ತೆಯ 9ನೇ ಕ್ರಾಸ್ ಸಮೀಪದ ಎಲೆತೋಟದ ರಸ್ತೆ ಏರಿ ಮೇಲೆ ಮಲಗಿ, ಜನರಲ್ಲಿ ಭೀತಿ ಉಂಟು ಮಾಡಿದೆ. ಕೊನೆಗೆ ಜನರ ಕಂಡು ಮೋರಿ ನೀರಿಗಿಳಿದು ಕಣ್ಮರೆಯಾಗಿತ್ತು. ಆದರೆ, ಇಂದು ಬೆಳಗ್ಗೆ ಎಲೆತೋಟದ ರಸ್ತೆ ಸೇತುವೆ ಸಮೀಪ ಒಂದು ಗಂಟೆಗೂ ಹೆಚ್ಚುಕಾಲ ಬಾಯ್ತೆರೆದು ಬಿಸಿಲು ಕಾಯುತ್ತ ಮಲಗಿತ್ತು. ಸ್ಥಳೀಯರು ಕುತೂಹಲದಿಂದ ಮೊಸಳೆ ನೋಡಲು ಮುಗಿಬಿದ್ದರು. ವಿಷಯ ತಿಳಿದು ಅರಣ್ಯ ಇಲಾಖೆ ಸಿಬ್ಬಂದಿ ಬರುವಷ್ಟರಲ್ಲಿ ಜನರ ಸದ್ದಿನಿಂದ ಮೊಸಳೆ ರಸ್ತೆ ಏರಿಯಿಂದ ದೊಡ್ಡ ಮೋರಿಗೆ ಹಾರಿ ಕ್ಷಣ ಮಾತ್ರದಲ್ಲಿ ನಾಪತ್ತೆಯಾಗಿದೆ. ಇಷ್ಟು ದಿನ ಚರಂಡಿಯಲ್ಲಿ ಮಲಗಿದ್ದ ಮೊಸಳೆ ಕಂಡಿದ್ದ ಜನ, ಇಂದು ಬಾಯಿ ತೆರೆದುಕೊಂಡು ಮಲಗಿದ್ದ ಮೊಸಳೆ ಕಂಡು ಹೌಹಾರಿದರು. ಮೊಸಳೆ ಕಂಡು ಭಯಭೀತರಾದ ಸ್ಥಳೀಯರು ಕೂಡಲೇ ಮೊಸಳೆ ಸೆರೆ ಹಿಡಿಯುವಂತೆ ಆಗ್ರಹಿಸಿದ್ದಾರೆ. ಮಕ್ಕಳು ಆಕಸ್ಮಿಕವಾಗಿ ಎಲೆತೋಟದ ಬಳಿ ಹೋದರೆ ಮೊಸಳೆ ದಾಳಿ ಮಾಡುವ ಸಾಧ್ಯತೆ ಇದೆ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ.

ವಿಶೇಷ ಪೂಜಾ ಕಾರ್ಯಕ್ರಮ

ಅನ್ನಸಂತರ್ಪಣೆ ಮಾಡಲಾಗಿತ್ತು. ಒಂದು ಲಕ್ಷಕ್ಕೂ ಹೆಚ್ಚು ಮಂದಿ ಆಗಮಿಸುವ ನಿರೀಕ್ಷೆ ಇದ್ದುದರಿಂದ ಅಭಿಮಾನಿಗಳು ಬೆಳಗಿನ ಉಪಾಹಾರ, ಮಧ್ಯಾಹ್ನ ಬಾತ್ ಮತ್ತು ಮೊಸರನ್ನ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದರು. ಅನ್ನಸಂತರ್ಪಣೆ ಮಾತ್ರವಲ್ಲದೆ ಅಭಿಮಾನಿಗಳು ರಕ್ತದಾನ ಶಿಬಿರವನ್ನೂ ಕೂಡ ಆಯೋಜಿಸಿದ್ದು ವಿಶೇಷವಾಗಿತ್ತು. ಪುನೀತ್ ರಾಜ್‌ಕುಮಾರ್ ಅವರ ಸದಾಶಿವನಗರ ನಿವಾಸದ ಮುಂದೆ ಬೃಹತ್ ಪೆಂಡಾಲ್ ಹಾಕಿ ಅಲ್ಲಿ ಕೂಡ ಅಭಿಮಾನಿಗಳಿಗೆ ಊಟ ಹಾಗೂ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಚೆಸ್‌ನಲ್ಲಿ ಪದಕ ಪಡೆದಿದ್ದ ಬಾಲಕಿಯರು ಪದಕದೊಂದಿಗೆ ಅಪ್ಪು ಸಮಾಧಿಗೆ ಆಗಮಿಸಿ ನಮಿಸಿದ್ದು ವಿಶೇಷವಾಗಿತ್ತು. ಸುಮಿತ್ರಾಬಾಯಿ ಎಂಬ ವೃದ್ಧೆ ಮಂಡಕ್ಕಿ ಹಾರವನ್ನು ತಂದಿದ್ದರು.

ನಿನ್ನೆ ರಾತ್ರಿಯಿಂದ ಇಂದು ರಾತ್ರಿಯವರೆಗೂ ನಿರಂತರವಾಗಿ ಅಪ್ಪು ಅಭಿಮಾನಿಗಳ ದಂಡು ಕಂಠೀರವ ಸ್ಟುಡಿಯೋಗೆ ಆಗಮಿಸಿದ ಹಿನ್ನೆಲೆಯಲ್ಲಿ ಪೊಲೀಸರು ಬ್ಯಾರಿಕೇಡ್‌ಗಳನ್ನು ಅಳವಡಿಸಿ ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಟಿ20 ವಿಶ್ವಕಪ್: ಲಂಕಾ ವಿರುದ್ಧ ನ್ಯೂಜಿಲೆಂಡ್‌ಗೆ ಭರ್ಜರಿ ಜಯ



ಸಿಡ್ನಿ, ಅ.29– ಗ್ಲೆನ್ ಫಿಲಿಪ್ಸ್ ಶತಕ ಹಾಗೂ ಟ್ರೆಂಟ್ ಬೌಲ್ಟ್ ಮಾರಕ ಬೌಲಿಂಗ್ ನೆರವಿನಿಂದ ನ್ಯೂಜಿಲೆಂಡ್ ಶ್ರೀಲಂಕಾ ವಿರುದ್ಧ 65 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡದ ಮೊತ್ತ 15 ರನ್ ಆಗುವಷ್ಟರಲ್ಲಿ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ ಜೊತೆಯಾದ ಗ್ಲೆನ್ ಫಿಲಿಪ್ಸ್ ಹಾಗೂ ಡೇರಿಲ್ ಮಿಚೆಲ್ ಜೋಡಿ 84 ರನ್‌ಗಳ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಡೇರಿಲ್ ಮಿಚೆಲ್ 22ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಅಮೋಘ ಬ್ಯಾಟಿಂಗ್ ಪ್ರದರ್ಶನ ನೀಡಿದ ಗ್ಲೆನ್ ಫಿಲಿಪ್ಸ್ 4 ಸಿಕ್ಸರ್, 10 ಬೌಂಡರಿ ಒಳಗೊಂಡ 104 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಸ್ಯಾಂಟ್ನರ್ 11 ರನ್ ಗಳಿಸಿದರು. ಅಂತಿಮವಾಗಿ ನ್ಯೂಜಿಲೆಂಡ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 167 ರನ್ ಗಳಿಸಿತು. ಲಂಕಾ ಪರ ರಜಿತಾ 2, ಮಹೇಶ್ ತೀಕ್ಷಣ, ಧನಂಜಯ ಡಿಸಿಲ್ವಾ, ವಾನಿಂದು ಹಸರಂಗ, ಲಹೀರು ಕುಮಾರ ತಲಾ ಒಂದೊಂದು ವಿಕೆಟ್ ಪಡೆದರು.

ನ್ಯೂಜಿಲೆಂಡ್ ನೀಡಿದ 168 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಶ್ರೀಲಂಕಾ 19.2 ಓವರ್‌ಗಳಲ್ಲಿ 102 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಭಾನುಕ ರಾಜಪಕ್ಷೆ 34, ದಾಸುನ್ ಶನಕ 35 ರನ್ ಗಳಿಸಿದರು. ನ್ಯೂಜಿಲೆಂಡ್ ಪರ ಟ್ರೆಂಟ್ ಬೌಲ್ಟ್ 4, ಮಿಚೆಲ್ ಸ್ಯಾಂಟ್ನರ್, ಇಶ್ ಸೋಧಿ ತಲಾ 2, ಟೀಮ್ ಸೌಥಿ, ಲ್ಯೂಕಿ ಫರ್ಗೂಸನ್ ತಲಾ 1 ವಿಕೆಟ್ ಪಡೆದರು. ಗ್ಲೆನ್ ಫಿಲಿಪ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದು ಭಾರತ–ದಕ್ಷಿಣ ಆಫ್ರಿಕಾ ಪಂದ್ಯ



ಪರ್ತ್, ಅ.29– ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಪಂದ್ಯಾವಳಿಯ ಮಹತ್ವದ ಪಂದ್ಯದಲ್ಲಿ ಭಾನುವಾರ (ಅ.30) ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳು ಸೆಣಸಾಡಲಿವೆ.

ಇಲ್ಲಿನ ಪರ್ತ್ ಅಂಗಳದಲ್ಲಿ ಭಾರತೀಯ ಕಾಲಮಾನ ಸಂಜೆ 4.30ಕ್ಕೆ ಪಂದ್ಯ ಆರಂಭವಾಗಲಿದ್ದು, ಟೂರ್ನಿಯ ಎರಡನೇ ಗುಂಪಿನ ಪಾಯಿಂಟ್ಸ್ ಟೇಬಲ್‌ನಲ್ಲಿ ಅಗ್ರಸ್ಥಾನಕ್ಕಾಗಿ ಇವೆರಡೂ ತಂಡಗಳು ಪೈಪೋಟಿ ನಡೆಸಲಿವೆ.

ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ಹಾಗೂ ನೆದರ್ಲೆಂಡ್ಸ್ ವಿರುದ್ಧ ಗೆಲುವು ಸಾಧಿಸಿರುವ ಭಾರತ, ದ.ಆಫ್ರಿಕಾ ವಿರುದ್ಧದ ಪಂದ್ಯ ಗೆಲ್ಲುವ ಆತ್ಮವಿಶ್ವಾಸದಲ್ಲಿದ್ದು, ಮತ್ತೊಂದೆಡೆ ಬಾಂಗ್ಲಾ ವಿರುದ್ಧ ಗೆಲುವು ಸಾಧಿಸಿರುವ ಹರಿಣಗಳು ನಾಳಿನ ಪಂದ್ಯ ಗೆದ್ದು ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುವ ತವಕದಲ್ಲಿದ್ದಾರೆ.

ಭಾರತದ ಪರ ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್ ಹಾಗೂ ಹಾರ್ದಿಕ್ ಪಾಂಡ್ಯ ಭರ್ಜರಿ ಫಾರ್ಮ್‌ನಲ್ಲಿದ್ದು, ಕನ್ನಡಿಗ ಕೆ.ಎಲ್.ರಾಹುಲ್ ಲಯ ಕಂಡುಕೊಳ್ಳಬೇಕಿದೆ. ಅಲ್ಲದೇ ಬೌಲಿಂಗ್ ವಿಭಾಗವೂ ನಾಳಿನ ಪಂದ್ಯದಲ್ಲಿ ದ.ಆಫ್ರಿಕಾ ಬಲಿಷ್ಠ ಬ್ಯಾಟ್ಸ್‌ಮನ್‌ಗಳನ್ನು ಕಟ್ಟಿಹಾಕಬೇಕಿದೆ.

ಕಗಿಸೊ ರಬಾಡ, ಎನ್ರಿಕ್ ನೋರ್ಕಿಯಾ, ಲುಂಗಿ ಎನ್ಗಿಡಿ ಹಾಗೂ ಮಾರ್ಕೋ ಯೆನ್ಸನ್ ಅವರನ್ನೊಳಗೊಂಡ ಬೌಲಿಂಗ್ ಮತ್ತು ರೈಲಿ ರೊಸೋವ್, ಏಡೆನ್ ಮಾರ್ಕ್ರಮ್ ಹಾಗೂ ಡೇವಿಡ್ ಮಿಲ್ಲರ್ ಅವರನ್ನೊಳಗೊಂಡ ಬಲಿಷ್ಠ ಮಧ್ಯಮ ಕ್ರಮಾಂಕವನ್ನು ದಕ್ಷಿಣ ಆಫ್ರಿಕಾ ತಂಡ ಹೊಂದಿದೆ. ಒಟ್ಟಾರೆ ನಾಳಿನ ಪಂದ್ಯ ಅಭಿಮಾನಿಗಳಿಗೆ ಭರಪೂರ ಮನರಂಜನೆ ಒದಗಿಸಲಿದೆ.

ಉಭಯ ತಂಡಗಳ ಸಂಭಾವ್ಯ ಪಟ್ಟಿ

ಭಾರತ: ಕೆ.ಎಲ್.ರಾಹುಲ್, ರೋಹಿತ್ ಶರ್ಮಾ (ನಾಯಕ), ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ ದಿನೇಶ್ ಕಾರ್ತಿಕ್, ಅಕ್ಷರ್ ಪಟೇಲ್, ಆರ್.ಅಶ್ವಿನ್, ಮೊಹಮ್ಮದ್ ಶಮಿ, ಭುವನೇಶ್ವರ್ ಕುಮಾರ್, ಅರ್ಷದೀಪ್ ಸಿಂಗ್.

ದಕ್ಷಿಣ ಆಫ್ರಿಕಾ: ಕ್ವಿಂಟನ್ ಡಿ ಕಾಕ್, ತೆಂಬ ಬವೂಮ, ರೈಲಿ ರೊಸೋವ್ (ನಾಯಕ), ಏಡೆನ್ ಮಾರ್ಕ್ರಮ್, ಡೇವಿಡ್ ಮಿಲ್ಲರ್, ಟ್ರಿಸ್ಟನ್ ಸ್ಟಬ್ಸ್, ವೇಯ್ನ್ ಪಾರ್ನೆಲ್, ಕೇಶವ್ ಮಹಾರಾಜ್, ಎನ್ರಿಚ್ ನೋರ್ಕಿಯಾ, ಕಗಿಸೊ ರಬಾಡ.

ಪಂದ್ಯದ ವಿವರ

ತಂಡಗಳು: ಭಾರತ / ದಕ್ಷಿಣ ಆಫ್ರಿಕಾ
ಸ್ಥಳ: ಪರ್ತ್ ಸ್ಟೇಡಿಯಂ, ಪರ್ತ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಟ್ರಾಕ್ಟರ್ ಮಗುಚಿ ಮೂವರು ಸ್ಥಳದಲ್ಲೇ ಸಾವು

ತಿ.ನರಸೀಪುರ, ಅ.29– ಚಾಲಕನ ನಿಯಂತ್ರಣ ತಪ್ಪಿ ಮುಸುಕಿನಜೋಳ ಬಿಡಿಸುವ ಯಂತ್ರವುಳ್ಳ ಟ್ರಾಕ್ಟರ್ ಮಗುಚಿ ಬಿದ್ದು ಮೂವರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ನೆರಗ್ಯಾತನಹಳ್ಳಿ ಬಳಿ ಶನಿವಾರ ಮಧ್ಯಾಹ್ನ ನಡೆದಿದೆ.

ತಾಲೂಕಿನ ಬೂದಹಳ್ಳಿ ಗ್ರಾಮದ ಲೇ.ಗವಿಸಿದ್ದಯ್ಯ ಪುತ್ರ ಮರಿಜೋಗಿ (45), ಮಹದೇವ್ ಎಂಬುವರ ಪುತ್ರ ಪ್ರಕಾಶ್(33) ಹಾಗೂ ನಾಗರಾಜು ಪುತ್ರ ಸಂತೋಷ್(19) ದುರಂತ ಸಾವಿಗೀಡಾದವರು. ಈ ಮೂವರು ಇಂದು ಬೆಳಗ್ಗೆ ಚಿಟಗಂಟ್ಯನಕೊಪ್ಪಲು ಗ್ರಾಮಕ್ಕೆ ಮುಸುಕಿನಜೋಳ ಬಿಡಿಸಲು ಟ್ರಾಕ್ಟರ್‌ನೊಂದಿಗೆ ತೆರಳಿದ್ದರು. ಕೆಲಸ ಮುಗಿಸಿಕೊಂಡು ಮಧ್ಯಾಹ್ನ ಸ್ವಗ್ರಾಮಕ್ಕೆ ವಾಪಸ್ಸಾಗುವ ಮಾರ್ಗ ಮಧ್ಯೆ ನೆರಗ್ಯಾತನಹಳ್ಳಿ ಬಳಿಯ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಟ್ರಾಕ್ಟರ್ ಮಗುಚಿದೆ. ಪರಿಣಾಮ ಟ್ರಾಕ್ಟರ್ ಹಿಂಬದಿ ಕುಳಿತಿದ್ದ ಮರಿಜೋಗಿ, ಪ್ರಕಾಶ್ ಹಾಗೂ ಸಂತೋಷ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆ ಬಳಿಕ ಟ್ರಾಕ್ಟರ್ ಚಾಲಕ ಪರಾರಿಯಾಗಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, ಎಎಸ್‌ಪಿ ನಂದಿನಿ, ಡಿವೈಎಸ್‌ಪಿ ಗೋವಿಂದರಾಜು ಹಾಗೂ ತಿ.ನರಸೀಪುರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಕೃಷ್ಣಪ್ಪ, ಅಪರಾಧ ವಿಭಾಗದ ಎಸ್‌ಐ ಪಚ್ಚೇಗೌಡ ಹಾಗೂ ಸಿಬ್ಬಂದಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಬಳಿಕ ಶವಗಳನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ರವಾನಿಸಲಾಗಿದೆ. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ಟ್ಯಾಲೆಂಟ್ಸ್ 2022: ಅಂತರ ಶಾಲಾ ಸಾಂಸ್ಕೃತಿಕ ಸ್ಪರ್ಧೆ; ಪ್ರವೇಶಾತಿ ಆಹ್ವಾನ



ಮೈಸೂರು, ಅ.29–ಮೈಸೂರು ರೌಂಡ್ ಟೇಬಲ್–21 ಮತ್ತು ಮೈಸೂರು ಲೇಡಿಸ್ ಸರ್ಕಲ್–9 ಸಂಯುಕ್ತಾಶ್ರಯದಲ್ಲಿ ನ.9ರ ಬೆಳಗ್ಗೆ 10 ಗಂಟೆಗೆ ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ 'ಮಹಿಳಾ ಸಬಲೀಕರಣ' ವಿಷಯದೊಂದಿಗೆ ಟ್ಯಾಲೆಂಟ್ಸ್ 2022: ಅಂತರ ಶಾಲಾ ಸಾಂಸ್ಕೃತಿಕ ಸ್ಪರ್ಧೆಗಳನ್ನು 5 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದೆ.

ಪಾಲ್ಗೊಳ್ಳುವ ಪ್ರತಿ ತಂಡವೂ ಕನಿಷ್ಠ 8 ಮತ್ತು ಗರಿಷ್ಠ 12 ವಿದ್ಯಾರ್ಥಿಗಳು, ಇಬ್ಬರು ಕೋ–ಆರ್ಡಿನೇಟರ್ಸ್ / ಶಿಕ್ಷಕರನ್ನು ಒಳಗೊಂಡಿರಬೇಕು. ಪ್ರತಿ ಶಾಲೆ ಈ ವಿಭಾಗಗಳಲ್ಲಿ ಪಾಲ್ಗೊಳ್ಳಬಹುದಾಗಿದೆ: ಸೋಲೋ ಸಾಂಗ್, ಸೋಲೋ ಡಾನ್ಸ್, ಮೊನೋ ಆ್ಯಕ್ಟ್, ಗ್ರೂಪ್ ಸಾಂಗ್, ಗ್ರೂಪ್ ಡಾನ್ಸ್, ಗ್ರೂಪ್ ಸ್ಕಿಟ್, ಮೈಮ್ ಆ್ಯಕ್ಟ್, ಡಿಬೆಟ್.

ಇವುಗಳಲ್ಲಿ ಪ್ರತಿಯೊಂದಕ್ಕೆ ಮೂರು ಬಹುಮಾನಗಳು; ಬೆಸ್ಟ್ ಸೋಲೋ ಪರ್ಫಾರ್ಮೆನ್ಸ್; ಬೆಸ್ಟ್ ಗ್ರೂಪ್ ಪರ್ಫಾರ್ಮೆನ್ಸ್; ಬೆಸ್ಟ್ ಗ್ರೂಪ್ ಸ್ಕಿಟ್, ಮೈಮ್ ಆ್ಯಕ್ಟ್; ಓವರಾಲ್ ಪರ್ಫಾಮೆನ್ಸ್. ನೋಂದಣಿಗೆ ಕಡೇ ದಿನಾಂಕ ನ.7. ಪ್ರವೇಶ ಉಚಿತ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: ಮೊ.ನಂ.99451–10183.

ರಿಷಿ ಸುನಕ್ ಬ್ರಿಟನ್ ಪ್ರಧಾನಿ: ಇನ್ಫೋಸಿಸ್ ನಾರಾಯಣಮೂರ್ತಿ ನಿವಾಸದ ಬಳಿ ಸಂಭ್ರಮಾಚರಣೆ



ಮೈಸೂರು,ಅ.29(ಎಂಟಿವೈ)– ಬ್ರಿಟನ್‌ನ ನೂತನ ಪ್ರಧಾನಿಯಾಗಿ ರಿಷಿ ಸುನಕ್ ಆಯ್ಕೆಯಾದ ಹಿನ್ನೆಲೆಯಲ್ಲಿ ಮೈಸೂರಿನ ಒಂಟಿಕೊಪ್ಪಲ್‌ನಲ್ಲಿರುವ ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿ ಹಾಗೂ ಡಾ.ಸುಧಾಮೂರ್ತಿ ದಂಪತಿ ನಿವಾಸದ ಮುಂದೆ ಹೆಬ್ಬಾಳು ಫೌಂಡೇಷನ್ ಸದಸ್ಯರು ಸಂಭ್ರಮಾಚರಿಸಿದರು. ಮೈಸೂರಿನ ನಾಗರಿಕರ ಪರವಾಗಿ ಹೆಬ್ಬಾಳು ಫೌಂಡೇಷನ್ ಹಾಗೂ ಯೂತ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾದ ಮೈಸೂರು ಘಟಕದ ಸದಸ್ಯರಿಂದ ಆಯೋಜಿಸಿದ್ದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಫೌಂಡೇಷನ್‌ನ ಗೌರವಾಧ್ಯಕ್ಷ, ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಅಧ್ಯಕ್ಷ ಕೆ.ಬಿ.ಲಿಂಗರಾಜು, ಕಾರ್ಯಾಧ್ಯಕ್ಷ ಕೆ.ಎಂ.ಬಸವೇಗೌಡ, ಉಪಾಧ್ಯಕ್ಷ ಬಿ.ಡಿ.ಸುಬ್ರಹ್ಮಣ್ಯ, ಖಜಾಂಚಿ ಎನ್.ಲಿಂಗೇಗೌಡ, ಕಾರ್ಯದರ್ಶಿ ಮಾ.ವೆಂಕಟೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡು, ಶುಭ ಸಂದೇಶ ರವಾನಿಸಿದರು.



ಶಾಸಕ ಜಿ.ಟಿ.ದೇವೇಗೌಡ, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅವರು ಮದ್ದೂರು ತಾಲೂಕಿನ ಕೊಪ್ಪ ಸಮೀಪದ ತರೀಕೆರೆ ಗ್ರಾಮದಲ್ಲಿ ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ನಿವೃತ್ತ ಡಿವೈಎಸ್‌ಪಿ ನಂಜುಂಡೇಗೌಡರ ಅಂತಿಮ ದರ್ಶನ ಪಡೆದರು.

ಮೈಸೂರು ಮಿತ್ರ ಭಾನುವಾರ 30 ಅಕ್ಟೋಬರ್ 2022

ಕೊಡಗು ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸಿ

ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಸಿಎನ್‌ಸಿ ಶಾಂತಿಯುತ ಧರಣಿ

ನ.1ರಂದು ನವದೆಹಲಿಯ ಜಂತರ್ ಮಂತರ್‌ನಲ್ಲೂ ಧರಣಿ



ಮಡಿಕೇರಿ, ಅ.29– ಸಂವಿಧಾನದ ವಿಧಿಯಡಿ ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಗಾಗಿ 2ನೇ ರಾಜ್ಯ ಮರುಸಂಘಟನೆ ಆಯೋಗ ರಚನೆ ಮಾಡಬೇಕು ಅಥವಾ ಕೂರ್ಗ್‌ನ 1956ರ ಹಿಂದಿನ ಸ್ಥಿತಿಯನ್ನು ಮರುಸ್ಥಾಪಿಸಿ 'ಸಿ' ರಾಜ್ಯದಿಂದ ಸಾಂವಿಧಾನಿಕವಾಗಿ ರೂಪಾಂತರಗೊಂಡ ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸಬೇಕೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಒತ್ತಾಯಿಸಿದೆ.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ನೇತೃತ್ವದಲ್ಲಿ ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸಿದ ಪ್ರಮುಖರು, ಈ ಎರಡು ಪ್ರಮುಖ ಬೇಡಿಕೆಗಳೊಂದಿಗೆ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಿದರು.

2ನೇ ರಾಜ್ಯ ಮರುಸಂಘಟನೆ ಆಯೋಗ ರಚನೆ ಅಥವಾ ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸಲು ಒತ್ತಾಯಿಸಿ ನ.1ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ ಸಿಎನ್‌ಸಿ ವತಿಯಿಂದ ಧರಣಿ ಸತ್ಯಾಗ್ರಹ ನಡೆಸಿ ಸರ್ಕಾರದ ಗಮನ ಸೆಳೆಯಲಾಗುವುದೆಂದು ನಾಚಪ್ಪ ತಿಳಿಸಿದರು.

'ಸಿ' ಸ್ಟೇಟ್ಸ್ ಆಕ್ಟ್ 1952ರ ಪ್ರಕಾರ ಕೊಡವ ತಾಂಯ್ನಾಡು ಕೂರ್ಗ್ ಭಾರತೀಯ ಒಕ್ಕೂಟದ ಭಾಗವಾಗಿ ಸ್ವಾವಲಂಬಿ 'ಸಿ' ರಾಜ್ಯವಾಯಿತು. ಭಾರತದ ಉಕ್ಕಿನ ಮನುಷ್ಯ, ಆಗಿನ ಉಪಪ್ರಧಾನಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಸಂಸತ್ತಿನಲ್ಲಿ 'ಕೂರ್ಗ್' ಅನ್ನು ಭಾರತದ ಏಕೈಕ ರಾಮ ರಾಜ್ಯ ಎಂದು ಹೆಮ್ಮೆಯಿಂದ ಹೇಳಿದ್ದರು.

ಅಪರಾಧವಿಲ್ಲದ ಭ್ರಷ್ಟಾಚಾರ ಮುಕ್ತ, ಶಾಂತಿಯುತ, ಸಂತೃಪ್ತ ರಾಜ್ಯ ಕೂರ್ಗ್ ಆಗಿತ್ತು. 1952ರಿಂದ 1956ರವರೆಗೆ ಒಂದು ಸುವರ್ಣಯುಗದ ರಾಜ್ಯವಾಗಿ ಅಭಿವೃದ್ಧಿ ಹೊಂದುವ ಹಾದಿಯಲ್ಲಿತ್ತು. ಆದರೆ ಅನ್ಯಾಯದ ರಾಜ್ಯ ಮರು–ಸಂಘಟನೆ ಕಾಯಿದೆ 1956ರ ಅಡಿಯಲ್ಲಿ ವಿಶಾಲ ಮೈಸೂರಿನೊಂದಿಗೆ ಕೂರ್ಗ್ ವಿಲೀನಕ್ಕೆ ಕಾರಣವಾಯಿತು. ನಂತರ ನಮ್ಮೆಲ್ಲ ಭರವಸೆಗಳು ಹಾಗೂ ಆಕಾಂಕ್ಷೆಗಳನ್ನು ಛಿದ್ರಗೊಳಿಸಲಾಯಿತು ಎಂದು ನಾಚಪ್ಪ ಆರೋಪಿಸಿದರು. ಮತ್ತೆ ಗತವೈಭವವನ್ನು ಹೊಂದಲು ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಯ ಅಗತ್ಯವಿದ್ದು, ಆ ನಿಟ್ಟಿನಲ್ಲಿ ಶಾಂತಿಯುತ ಹೋರಾಟ ನಡೆಯಲಿದೆ ಎಂದರು.

ಮನವಿ ಪತ್ರವನ್ನು ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಸಲ್ಲಿಸಿದರು. ಸಿಎನ್‌ಸಿ ಪ್ರಮುಖರಾದ ಕಲಿಯಂಡ ಮೀನಾಕ್ಷಿ ಕಾರ್ಯಪ್ಪ, ಪುಲ್ಲೇರ ಕಾಳಪ್ಪ, ಪುಲ್ಲೇರ ಸ್ವಾತಿ ಕಾಳಪ್ಪ, ಪಟ್ಟಮಾಡ ಲಲಿತಾ ಗಣಪತಿ, ಕೂಪದೀರ ಪುಷ್ಪಾ ಮುತ್ತಪ್ಪ, ಚೋಳಪಂಡ ಜ್ಯೋತಿ ನಾಣಯ್ಯ, ಅಜ್ಜಿನಿಕಂಡ ಇನಿತಾ ಮಾಚಯ್ಯ, ಕಲಿಯಂಡ ಪ್ರಕಾಶ್, ಅಜ್ಜಿಕುಟ್ಟೀರ ಲೋಕೇಶ್, ಅರೆಯಡ ಗಿರೀಶ್, ಅಲ್ಮಂಡ ಜೈ, ಬೇಪಡಿಯಂಡ ದಿನು, ಪಟ್ಟಮಾಡ ಕುಶ, ಕಿರಿಯಮಾಡ ಶೆರಿನ್, ಮಂದಪಂಡ ಮನೋಜ್, ಕಾಟುಮಣಿಯಂಡ ಉಮೇಶ್, ಅಪ್ಪಚ್ಚಿರ ರಮ್ಮಿ ನಾಣಯ್ಯ, ನಂದಿನೆರವಂಡ ವಿಜು, ಕೂಪದೀರ ಸಾಬು, ನಂದಿನೆರವಂಡ ಅಪ್ಪಯ್ಯ, ನಂದಿನೆರವಂಡ ಅಯ್ಯಣ್ಣ, ಮಣವಟ್ಟಿರ ಚಿಣ್ಣಪ್ಪ, ಪುಟ್ಟಿಚಂಡ ದೇವಯ್ಯ, ಅಜ್ಜಿನಿಕಂಡ ಸನ್ನಿ ಮಾಚಯ್ಯ, ಐಲಪಂಡ ಮಿಟ್ಟು, ಚೋಳಪಂಡ ಜ್ಯೋತಿ ನಾಣಯ್ಯ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

6 ಕೊಡಗಿನ ಆದಿವಾಸಿ ಮೂಲ ನಿವಾಸಿ ಕೊಡವ ಜನಾಂಗವನ್ನು ಎಸ್‌ಟಿ ಪಟ್ಟಿಯಲ್ಲಿ ಸೇರಿಸಬೇಕು, ಕೊಡವ ಜನಾಂಗೀಯ 'ಸಂಸ್ಕಾರ ಗನ್' ಅನ್ನು ನಮ್ಮ ಸಂವಿಧಾನದ 25 ಮತ್ತು 26ನೇ ವಿಧಿಗಳ ಅಡಿಯಲ್ಲಿ ಸಿಖ್ಖರ 'ಕಿರ್ಪಾನ್'ಗೆ ಸಮಾನವಾಗಿ ರಕ್ಷಿಸಬೇಕು, ಕೊಡವ ಜನಾಂಗದ ಪ್ರಾಚೀನ ಮತ್ತು ಶ್ರೀಮಂತ ಮಾತೃಭಾಷೆ 'ಕೊಡವ ಥಕ್' ಅನ್ನು ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿ ಸೇರಿಸಬೇಕು, ಕೊಡವ ಸಂಸ್ಕೃತಿ–ಜಾನಪದ ಪರಂಪರೆಯನ್ನು ಯುನೆಸ್ಕೋದ ಸಾಂಸ್ಕೃತಿಕ ಪರಂಪರೆಯ ಪಟ್ಟಿಯಲ್ಲಿ ಸೇರಿಸಬೇಕು.

–ಎನ್.ಯು.ನಾಚಪ್ಪ, ಸಿಎನ್‌ಸಿ ಅಧ್ಯಕ್ಷ

ರಸ್ತೆ ಬದಿ ಕಸ ಸುರಿದಿದ್ದವನಿಂದಲೇ ಮತ್ತೆ ಕಸ ತುಂಬಿಸಿ ದಂಡ

ಮಾಲ್ದಾರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಂದ ಕ್ರಮ



ಸಿದ್ದಾಪುರ, ಅ.29– ಸಿದ್ದಾಪುರ ಮಾಲ್ದಾರೆ ಮಾರ್ಗದ ಅರಣ್ಯದಂಚಿನ ರಸ್ತೆ ಬದಿಯಲ್ಲಿ ತ್ಯಾಜ್ಯ ಸುರಿದ ವ್ಯಕ್ತಿಯಿಂದಲೇ ಮತ್ತೆ ತ್ಯಾಜ್ಯ ತೆರವುಗೊಳಿಸಿ ದಂಡ ವಿಧಿಸಿದ ಘಟನೆಯೊಂದು ಸಂಭವಿಸಿದೆ.

ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಖ್ಯ ರಸ್ತೆಯ ಬದಿಯಲ್ಲಿ ವ್ಯಕ್ತಿಯೊಬ್ಬ ಗೂಡ್ಸ್ ಆಟೋದಲ್ಲಿ ಪ್ಲಾಸ್ಟಿಕ್, ಕಾರ್ಡ್ ಬೋರ್ಡ್ ಮತ್ತಿತರ ವಸ್ತುಗಳು ಸೇರಿದಂತೆ ತ್ಯಾಜ್ಯವನ್ನು ತಂದು ಸುರಿಯುತ್ತಿದ್ದ ಸಂದರ್ಭದಲ್ಲಿ ಮಾರ್ಗವಾಗಿ ತೆರಳುತ್ತಿದ್ದ ವಾಹನ ಸವಾರರು ತಕ್ಷಣ ಗ್ರಾಮ ಪಂಚಾಯಿತಿಗೆ ವಿಷಯ ಮುಟ್ಟಿಸಿದ್ದಾರೆ.

ಕೂಡಲೇ ಸ್ಥಳಕ್ಕಾಗಮಿಸಿದ ಮಾಲ್ದಾರೆ ಗ್ರಾಮ ಪಂಚಾಯತ್ ಅಧ್ಯಕ್ಷ ಸಮೀರ್ ತ್ಯಾಜ್ಯ ಸುರಿದ ವ್ಯಕ್ತಿಯನ್ನು ತರಾಟೆಗೆ ತೆಗೆದುಕೊಂಡು ಆತನಿಂದಲೇ ಸುರಿದ ತ್ಯಾಜ್ಯವನ್ನು ಆಟೋಗೆ ತುಂಬಿಸಿ ಒಂದು ಸಾವಿರ ರೂ. ದಂಡ ವಿಧಿಸಿ ಎಚ್ಚರಿಕೆ ನೀಡಿದರು.

ಅರಣ್ಯಕ್ಕೆ ಹೊಂದಿಕೊಂಡ ಸ್ಥಳದಲ್ಲಿ ತ್ಯಾಜ್ಯ ಸುರಿದ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಕೂಡ ಒಂದು ಸಾವಿರ ದಂಡ ವಿಧಿಸಿದ್ದಾರೆ. ಬಳಿಕ ಗ್ರಾಪಂ ಅಧ್ಯಕ್ಷ ಸಮೀರ್ ಮಾತನಾಡಿ, ಮಾಲ್ದಾರೆ ಸುತ್ತಮುತ್ತಲ ವ್ಯಾಪ್ತಿಯಲ್ಲಿ ಎಲ್ಲೆಂದರಲ್ಲಿ ತ್ಯಾಜ್ಯ ಸುರಿಯುತ್ತಿರುವುದು ಕಂಡು ಬರುತ್ತಿದ್ದು, ಅಂಥವರ ಮೇಲೆ ಕ್ರಮ ಕೈಗೊಳ್ಳಲಾಗುವುದು. ಶುಚಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಗ್ರಾಮದ ಪರಿಸರವನ್ನು ಸ್ವಚ್ಛ ಸುಂದರ ನಗರವನ್ನಾಗಿಡಲು ಪಂಚಾಯಿತಿಯೊಂದಿಗೆ ಕೈ ಜೋಡಿಸಬೇಕೆಂದರು.

ವಿರಾಜಪೇಟೆಯಲ್ಲಿ ಕೋಟಿ ಕಂಠ ಗಾಯನ



ವಿರಾಜಪೇಟೆ, ಅ.29– ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿರಾಜಪೇಟೆ ತಾಲೂಕು ಆಡಳಿತದ ವತಿಯಿಂದ ಕೋಟಿ ಕಂಠ ಗಾಯನ ಕಾರ್ಯಕ್ರಮವು ಮಿನಿ ವಿಧಾನ ಸೌಧದ ಎದುರು ನಗರದ ಶಾಲಾ ಕಾಲೇಜು ವಿದ್ಯಾರ್ಥಿಗಳು ಗಾಯಕರಾದ ಮೋಹನ್ ತಂಡದೊಂದಿಗೆ ಕನ್ನಡ ಗೀತೆಗಳ ಸಮಧುರ ಗಾಯನ ನಡೆಸಿಕೊಟ್ಟರು.

ತಹಸೀಲ್ದಾರ್ ಅರ್ಚನಾ ಭಟ್, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ.ಪಿ.ರಾಜೇಶ್, ಕಾರ್ಯದರ್ಶಿ ಟೋಮಿ ಥಾಮಸ್, ಕೆ.ಸಿ.ಶಭರೀಶ್, ಆಹ್ವಾನಿತರಾದ ಶಿಕ್ಷಕ ಮಂಜುನಾಥ್, ವಿರಾಜಪೇಟೆ ಕಂದಾಯ ಪರಿವೀಕ್ಷಕ ಮಂಡೇಪಂಡ ಹರೀಶ್, ಜಯಪ್ರಕಾಶ್ ನಾರಾಯಣ, ಪ್ರೌಢಶಾಲಾ ಮುಖ್ಯಶಿಕ್ಷಕ ಲಾಲ್ ಕುಮಾರ್ ಮುಂತಾದ ಪ್ರಮುಖರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಂತ ಅನ್ನಮ್ಮ ವಿದ್ಯಾಸಂಸ್ಥೆ, ರೋಟರಿ ಶಾಲೆ, ಜಯಪ್ರಕಾಶ್ ವಿದ್ಯಾಸಂಸ್ಥೆ, ಜೂನಿಯರ್ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ದಂತ ವೈದ್ಯರ ಅಂತಾರಾಷ್ಟ್ರೀಯ ಸಮ್ಮೇಳನ



ಮಡಿಕೇರಿ,ಅ.29– ಏಷ್ಯಾ ಖಂಡದ ವಿವಿಧ ದಂತ ಮಹಾವಿದ್ಯಾಲಯಗಳ ಮಹಾ ಬೋಧಕರು ಮತ್ತು ನುರಿತ ತಜ್ಞರ 16ನೇ ಅಂತಾರಾಷ್ಟ್ರೀಯ ದಂತ ಸಮ್ಮೇಳನ ವಿರಾಜಪೇಟೆ ನಗರದ ಹೊರ ವಲಯ ಮಗ್ಗುಲ ಗ್ರಾಮದ ಕೊಡಗು ದಂತ ವೈದ್ಯಕೀಯ ಮಹಾ ವಿದ್ಯಾಲಯದ ಆವರಣದಲ್ಲಿ ಉದ್ಘಾಟನೆಗೊಂಡಿತು.

ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ, ಮಾತನಾಡಿದ ಥೈಲ್ಯಾಂಡ್ ವಿಶ್ವ ವಿದ್ಯಾನಿಲಯದ ಕ್ಲಿನಿಕಲ್ ಪ್ರೊ.ಡಾ.ಸಿರಿಚಾಯಿ, ಸಮ್ಮೇಳನವು ಭಾರತ ದೇಶದ ಕರ್ನಾಟಕ ರಾಜ್ಯ ಕೊಡಗಿನಲ್ಲಿ ಆಯೋಜನೆ ಮಾಡಿರುವುದು ಸಂತೋಷದ ವಿಷಯವಾಗಿದೆ. ದಂತ ಕ್ಷೇತ್ರದಲ್ಲಿ ನೂತನವಾದ ತಂತ್ರಜ್ಞಾನ ಅಳವಡಿಸಿಕೊಂಡು ಮುನ್ನಡೆಯುವುದು ಅನಿವಾರ್ಯವಾಗಿದೆ. ಮಾನವನ ಪ್ರಮುಖವಾದ ಅಂಗಾಂಗಗಳಲ್ಲಿ ಒಂದಾದ ದಂತಗಳ ಬಗ್ಗೆ ಕಾಳಜಿ ಬಹುಮುಖ್ಯವಾಗಿದ್ದು, ಇವುಗಳ ಬಗ್ಗೆ ಅಧ್ಯಯನ, ಆವಿಷ್ಕಾರಗಳು ಮತ್ತು ದಂತ ಕಾಯಿಲೆಗಳು ಬಹುಬೇಗ ಉಪಶಮನವಾಗುವಂತೆ ಚಿಕಿತ್ಸಾ ವಿಧಿಗಳ ಕ್ರಮಗಳನ್ನು ಕಂಡು ಹಿಡಿಯಲು ತಜ್ಞರು ಮುಂದಾಗಬೇಕು ಎಂದು ಕರೆ ನೀಡಿದರು.

ಮಲೇಷಿಯ ಮಹಿಡೋಲ್ ವಿಶ್ವವಿದ್ಯಾನಿಲಯದ ದಂತ ವೈದ್ಯಕೀಯ ಸಹಾಯಕ ಪ್ರೊ. ಪೋರಮ್ ಪರಸ್ಪಸ್ಲಿಪ್ ಮಾತನಾಡಿದರು.

ಸಮ್ಮೇಳನ ಅಧ್ಯಕ್ಷ ಹಾಗೂ ಕೊಡಗು ದಂತ ವೈದ್ಯಕೀಯ ಮಹಾವಿದ್ಯಾಲಯದ ಡೀನ್ ಡಾ.ಸುನೀಲ್ ಮುದ್ದಯ್ಯ ಪ್ರಾಸ್ತಾವಿಕ ಮಾತನಾಡಿ, ವಿಶ್ವಾದ್ಯಂತ ಕೋವಿಡ್ ಮಹಾಮಾರಿ ಸೋಂಕು ಹರಡಿದ್ದ ಕಾರಣ ಸಮ್ಮೇಳನ ತಡವಾಗಿ ಆಯೋಜಿಸಲಾಯಿತು. ಮುಂದಿನ ವರ್ಷದಲ್ಲಿ ಸಂಸ್ಥೆ ಹಲವು ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು ಆಯೋಜಿಸಲಿದೆ. ದಂತ ಚಿಕಿತ್ಸೆಗಳಲ್ಲಿ ಕೃತಕ ಬುದ್ಧಿಮತ್ತೆ ವ್ಯವಸ್ಥೆಗಳನ್ನು ಅಳವಡಿಸಿಕೊಂಡು ಚಿಕಿತ್ಸಾ ಕ್ರಮಗಳ ಅನುಸರಿಸಿದಲ್ಲಿ ಜನಸಾಮಾನ್ಯರಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ನೀಡಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯ ವಿಧಾನಪರಿಷತ್ ಸದಸ್ಯ ಮಂಡೆಪಂಡ ಸುಜಾ ಕುಶಾಲಪ್ಪ, ಕೊಡಗು ದಂತ ವೈದ್ಯಕೀಯ ಮಹಾ ವಿದ್ಯಾಲಯದ ಪ್ರಾಂಶುಪಾಲರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಮತ್ತು ದೇಶದ 100ಕ್ಕೂ ಅಧಿಕ ಮಂದಿ ದಂತ ವೈದ್ಯಕೀಯ ವಿವಿ ಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ನದಿಗೆ ಹಾರಿ ಆಟೋ ಚಾಲಕ ಆತ್ಮಹತ್ಯೆ

ಮಡಿಕೇರಿ, ಅ.29– ನಗರಕ್ಕೆ ನೀರು ಪೂರೈಸುವ ಕೂಟುಹೊಳೆಗೆ ಹಾರಿ ಯುವ ಆಟೋ ಚಾಲಕರೊಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.

ಆಝಾದ್ ನಗರ ನಿವಾಸಿ ಸೈಫುದ್ದೀನ್(31) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಶುಕ್ರವಾರ ರಾತ್ರಿ 9 ಗಂಟೆ ವೇಳೆಯಲ್ಲಿ ಸೈಫುದ್ದೀನ್ ಕೂಟುಹೊಳೆಗೆ ಹಾರಿದ್ದು, ಅದಕ್ಕೂ ಮುನ್ನ ತಮ್ಮ ಸ್ನೇಹಿತರಿಗೆ ಕರೆ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಮಾಹಿತಿ ನೀಡಿದ್ದರು ಎನ್ನಲಾಗುತ್ತಿದೆ. ಬಳಿಕ ಸ್ನೇಹಿತರು ಹಾಗೂ ಕುಟುಂಬಸ್ಥರು ಹುಡುಕಾಟ ನಡೆಸಿದಾಗ ಕೂಟುಹೊಳೆ ಬದಿಯಲ್ಲಿ ಸೈಫುದ್ದೀನ್ ಅವರ ಆಟೋ ಪತ್ತೆಯಾಗಿತ್ತು.

ಶನಿವಾರ ಬೆಳಗ್ಗೆ ಅಗ್ನಿಶಾಮಕ ದಳ ಮತ್ತು ಮುಳುಗು ತಜ್ಞರ ಸಹಾಯದಿಂದ ಕೂಟುಹೊಳೆಯಲ್ಲಿ ಶೋಧ ಕಾರ್ಯ ನಡೆಸಿ ಮೃತದೇಹವನ್ನು ಹೊರತೆಗೆಯಲಾಯಿತು. ಅನಾರೋಗ್ಯ ಸಮಸ್ಯೆ ಆತ್ಮಹತ್ಯೆಗೆ ಕಾರಣ ಎನ್ನಲಾಗುತ್ತಿದ್ದು, ಈ ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ತವರು ಜಿಲ್ಲೆ ರಾಯಭಾರಿಯ ಪುಣ್ಯಸ್ಮರಣೆ

ಪುಷ್ಪಾರ್ಚನೆ, ಅನ್ನಸಂತರ್ಪಣೆಯೊಂದಿಗೆ ಪುನೀತ್ ರಾಜ್‌ಕುಮಾರ್ ಸ್ಮರಿಸಿದ ಅಭಿಮಾನಿಗಳು



ಚಾಮರಾಜನಗರ, ಅ.29–ತವರು ಜಿಲ್ಲೆ ಚಾಮರಾಜನಗರದ ರಾಯಭಾರಿ ಆಗಿದ್ದ ನಟ ಪುನೀತ್‌ರಾಜ್‌ಕುಮಾರ್ ಅವರ ಮೊದಲ ವರ್ಷದ ಪುಣ್ಯಸ್ಮರಣೆಯನ್ನು ನಗರ ಸೇರಿದಂತೆ ಜಿಲ್ಲಾದ್ಯಂತ ಅಭಿಮಾನಿಗಳು ಆಚರಿಸಿ, ಅನ್ನಸಂತರ್ಪಣೆ ಮಾಡಿದರು.

ನಗರದ ರಾಮಸಮುದ್ರ ಬಡಾವಣೆಯಲ್ಲಿ ಆಯೋಜಿಸಿದ್ದ ಪುನೀತ್ ರಾಜ್‌ಕುಮಾರ್ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಪುನೀತ್ ರಾಜ್‌ಕುಮಾರ್ ಕುರಿತು ಗುಣಗಾನ ಮಾಡಿದರು. ಈ ವೇಳೆ ಕ್ರೈಸ್ತ ಧರ್ಮಗುರು, ಎಎಸ್‌ಪಿ ಸುಂದರ್‌ರಾಜ್, ಮುಖಂಡರಾದ ಯು.ನಾಗರಾಜ್, ಪುನೀತ್ ಅಭಿಮಾನಿ ಬಳಗದ ಅಧ್ಯಕ್ಷ ತೀರ್ಥಪ್ರಸಾದ್, ಯೋಗೇಶ್, ರಾಮಸಮುದ್ರ ಡಾ.ಬಿ.ಆರ್. ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ಚೇತನ್‌ರಾಜು, ಕಿರಣ್, ನಾಗರಾಜು, ನಾಗಣ್ಣ, ಪ್ರತೀಪ್‌ಕುಮಾರ್, ರಾಮು, ನಂಜುಂಡಸ್ವಾಮಿ, ಲಿಂಗಣ್ಣ, ನಂಜಯ್ಯ ಸೇರಿದಂತೆ ಗ್ರಾಮದ ಮುಖಂಡರು, ಗ್ರಾಮಸ್ಥರಿದ್ದರು.

ನಗರದ ನೃಪತುಂಗ ವೃತ್ತದ ಬಳಿ ಅಪ್ಪು ಅಭಿಮಾನಿಗಳಿಂದ ಪುನೀತ್‌ರಾಜ್‌ಕುಮಾರ್ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಬರಹಗಾರ ಎಸ್.ಲಕ್ಷ್ಮೀನರಸಿಂಹ ಮಾತನಾಡಿದರು. ಅಭಿಮಾನಿಗಳಾದ ಹೂವಿನ ಕೃಷ್ಣ, ಮಂಟೇಸ್ವಾಮಿ, ಶಾ.ಮುರುಳಿ, ಮಂಜು, ರಾಜೇಗೌಡರು, ಅಂಕಣ್ಣ, ಕುಮಾರ್, ನಟರಾಜು, ಡಿ.ರಾಜು ಲಕ್ಷ್ಮಿ ಇತರರಿದ್ದರು.

ನಗರದ ನ್ಯಾಯಾಲಯ ರಸ್ತೆಯಲ್ಲಿ ಈಶ್ವರಿ ಟ್ರಸ್ಟ್‌ನಿಂದಲೂ ಪುನೀತ್‌ರಾಜ್‌ಕುಮಾರ್ ಪ್ರಥಮ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು. ದಲಿತ ಮುಖಂಡ ವೆಂಕಟರಮಣಸ್ವಾಮಿ ಪಾಪು ಅರಳಿಗಿಡ ನೆಟ್ಟು, ಅಪ್ಪು ಗುಣಗಾನ ಮಾಡಿದರು. ಈಶ್ವರಿ ಟ್ರಸ್ಟ್ ಸಂಸ್ಥಾಪಕರು ಹಾಗೂ ಪರಿಸರ ಪ್ರೇಮಿ ಸಿ.ಎಂ.ವೆಂಕಟೇಶ್ ಮಾತನಾಡಿದರು. ಈ ಸಂದರ್ಭದಲ್ಲಿ ಪುನೀತ್ ರಾಜ್‌ಕುಮಾರ್ ನಟಿಸಿರುವ ಚಿತ್ರಗಳ ಗೀತಗಾಯನ ಪ್ರಸ್ತುತ ಪಡಿಸಿ, ಅನ್ನದಾನ ಮಾಡಲಾಯಿತು. ಜಿಪಂ ಲೆಕ್ಕಾಧಿಕಾರಿ ಹೆಚ್.ಎಸ್.ಗಂಗಾಧರ್, ಸಮಾಜಸೇವಕ ಎಲ್.ಸುರೇಶ್, ಎಸ್.ಪಿ.ಬಾಲಸುಬ್ರಮಣ್ಯಂ ಸಂಘದ ಗೌರವಾಧ್ಯಕ್ಷ ಸುರೇಶ್, ಕಸಾಪ ಜಿಲ್ಲಾ ಉಪಾಧ್ಯಾಕ್ಷ ನಂಜುಂಡಸ್ವಾಮಿ, ಕನ್ನಡ ಹೋರಾಟಗಾರ ಪ್ರಸಾದ್, ಮಹದೇವಯ್ಯ, ಗೋಪಾಲ್, ಜಾನಪದ ಕಲಾವಿದ ಸಿ.ಎಂ.ನರಸಿಂಹಮೂರ್ತಿ ಇದ್ದರು.

ನಗರದ ಡಿವಿಯೇಷನ್ ರಸ್ತೆಯಲ್ಲಿ ಶ್ರೀ ವೆಂಕಟೇಶ್ವರ ಮಿಲಿಟರಿ ಹೋಟಲ್, ನಗರದ ಸತ್ತಿಮಂಗಲ ರಸ್ತೆಯಲ್ಲಿರುವ ಸಂತೋಷ್ ದಿ ಪ್ರಿನ್ಸ್ ಬಾರ್ ಅಂಡ್ ರೆಸ್ಟೋರೆಂಟ್ ವತಿಯಿಂದಲೂ ಅಪ್ಪು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಮಾಡಲಾಯಿತು.

ಚಾಮರಾಜನಗರ ತಾಲೂಕಿನ ಸರಗೂರು ಮೋಳೆ ಗ್ರಾಮದಲ್ಲಿ ಡಾ.ಪುನೀತ್ ರಾಜಕುಮಾರ್ ಅಭಿಮಾನಿಗಳ ಅಡ್ಡದಿಂದ 2 ಸಾವಿರ ಜನರಿಗೆ ಅನ್ನಸಂತರ್ಪಣೆ ಮಾಡಲಾಯಿತು. ಅಪ್ಪು ಬಾಲ್ಯದ ಪೋಟೋಗಳು ಸೇರಿದಂತೆ ಅಪ್ಪು ಅಭಿನಯದ ಭಾವಚಿತ್ರಗಳನ್ನು ಗ್ರಾಮದಲ್ಲಿ ಅಳವಡಿಸಿ ಅಭಿಮಾನಿಗಳು ನಮನ ಸಲ್ಲಿಸಿದರು. ಈ ವೇಳೆ ಗ್ರಾಮದ ಪ್ರಸಾದ್, ಮಹೇಶ್, ನಂಜ, ಪುಟ್ಟರಾಜು, ಶರತ್, ಸ್ವಾಮಿ, ಕುಮಾರ್, ಮಹೇಶ್, ನಾಗೇಂದ್ರ, ಬಸವ, ರಾಜು, ಸೋಮು ಇತರರಿದ್ದರು.

ವೆಂಕಟಯ್ಯನಛತ್ರ ಗ್ರಾಮದಲ್ಲಿ ಆರ್ಯ ಈಡಿಗರ ಜನಾಂಗ ಹಾಗೂ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳಿಂದ ನಟ ಪುನೀತ್ ಪುಣ್ಯಸ್ಮರಣೆ ಆಚರಿಸಲಾಯಿತು. ಇದೇ ವೇಳೆ ಬಿಜೆಪಿ ರೈತ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಮಿತ್‌ಕುಮಾರ್, ಆರ್ಯ ಈಡಿಗರ ಜನಾಂಗದ ಯುವಕರ ಸಂಘದ ಕುಮಾರ್ ಆರ್ಯ, ಸೋಮಣ್ಣ, ಸಿದ್ದರಾಜು, ರಾಜು ಆರ್ಯಾ, ಮುಖಂಡರಾದ ಪುಟ್ಟಸ್ವಾಮಿ, ಚಿನ್ನಸ್ವಾಮಿ, ಮಹದೇವಸ್ವಾಮಿ, ಪ್ರಭು, ಕೃಷ್ಣಮೂರ್ತಿ ಸೇರಿದಂತೆ ಗ್ರಾಮದ ಮುಖಂಡರಿದ್ದರು.



ಯಳಂದೂರಲ್ಲೂ ಅಪ್ಪು ಸ್ಮರಣೆ...

ತಾಲೂಕಿನ ಯರಗಂಬಳ್ಳಿ ಗ್ರಾಮದಲ್ಲಿ ಕರುನಾಡ ರಾಜಪುತ್ರ ಅಪ್ಪು ಯುವ ಸೈನ್ಯಯಿಂದ ಚಿತ್ರನಟ ಡಾ.ಪುನೀತ್ ರಾಜ್‌ಕುಮಾರ್ ಪುಣ್ಯಸ್ಮರಣೆಯ ಹಿನ್ನೆಲೆಯಲ್ಲಿ ಗ್ರಾಮದ ಆದಿಜಾಂಬವರ ಬೀದಿಯಲ್ಲಿರುವ ಅಪ್ಪು ಸರ್ಕಲ್‌ನಲ್ಲಿ ಅನ್ನಸಂತರ್ಪಣೆ ಮಾಡಲಾಯಿತು. ಇದಕ್ಕೂ ಮುನ್ನ ವಿಶೇಷವಾಗಿ ಅಲಂಕೃತವಾಗಿದ್ದ ಪುನೀತ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಭಾವಚಿತ್ರದ ಮುಂಭಾಗ ಮೇಣದ ಬತ್ತಿ ಹಚ್ಚಿ, ಮೌನಾಚರಿಸಿ ನಮನ ಸಲ್ಲಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಚಂದ್ರು, ಉಪಾಧ್ಯಕ್ಷ ಮನು, ಕಾರ್ಯದರ್ಶಿ ಜಯಶಂಕರ್, ಕೋಶಾಧ್ಯಕ್ಷ ಪುನೀತ್ ಸೇರಿದಂತೆ ಇತರೆ ಸದಸ್ಯರು ಹಾಗೂ ಗ್ರಾಮಸ್ಥರಿದ್ದರು.

ಜನಸಂಕಲ್ಪ ಯಾತ್ರೆ ಬಿಜೆಪಿ ಅಂತಿಮ ಯಾತ್ರೆ

ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್ ಕಿಡಿ



ಗುಂಡ್ಲುಪೇಟೆ, ಅ.29–ಬಿಜೆಪಿಯಿಂದ ನಡೆಯುತ್ತಿರುವ ಜನಸಂಕಲ್ಪ ಯಾತ್ರೆ ಯಾರ ಉದ್ಧಾರಕ್ಕಾಗಿ ಎಂಬುದನ್ನು ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಜನತೆಗೆ ತಿಳಿಸಬೇಕಿದ್ದು, ಜನಸಂಕಲ್ಪ ಯಾತ್ರೆ ಬಿಜೆಪಿಯ ಅಂತಿಮ ಯಾತ್ರೆಯಾಗಲಿದೆ ಎಂದು ಕಾಂಗ್ರೆಸ್ ಮುಖಂಡ ಹೆಚ್.ಎಂ. ಗಣೇಶ್ ಪ್ರಸಾದ್ ಕಿಡಿಕಾರಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು. ಕಳೆದ ನಾಲ್ಕು ವರ್ಷದಿಂದ ಅಧಿಕಾರದಲ್ಲಿದ್ದರೂ ಜನವಿರೋಧಿ ಆಡಳಿತ ನಡೆಸಿದ್ದೀರಿ. ಜಿಲ್ಲೆಯಲ್ಲಿ ಆಕ್ಸಿಜನ್ ದುರಂತ ಸಂಭವಿಸಿ ಸಾವಿಗೀಡಾದವರ ಸಂಖ್ಯೆ ಮುಚ್ಚಿಟ್ಟಿದ್ದೀರಿ. ಸಂತ್ರಸ್ತರಿಗೆ ಸಾಂತ್ವನ– ಪರಿಹಾರ ನೀಡಿಲ್ಲ ಆದರೆ ಕಾಂಗ್ರೆಸ್ ಎಲ್ಲಾ 36 ಸಂತ್ರಸ್ತರ ಮನೆಗಳಿಗೆ ಭೇಟಿ ನೀಡಿ ಸಾಂತ್ವನ ಹೇಳಿ, ಪರಿಹಾರ ನೀಡಿದೆ. ಚುನಾವಣೆ ಸಮೀಪಿಸಿದ ಹಿನ್ನೆಲೆಯಲ್ಲಿ ಗಿಮಿಕ್ ಮಾಡುತ್ತಿದ್ದೀರಿ. ಆದರೆ ಪ್ರಬುದ್ಧ ಮತದಾರರು ಎಲ್ಲವನ್ನೂ ನೋಡುತ್ತಿದ್ದಾರೆ ಎಂದು ಕುಟುಕಿದರು.

ಸ್ಥಳೀಯ ಶಾಸಕರು 110 ಕೆರೆಗಳನ್ನು ತುಂಬಿಸುವ ಮಾತನಾಡುತ್ತಿದ್ದು, ಅವು ಯಾವ ಕೆರೆಗಳು ಎಂಬುದನ್ನು ಸ್ಪಷ್ಟಪಡಿಸಲಿ? ಎಂದು ಸವಾಲು ಹಾಕಿದರು. ಈ ಸಂದರ್ಭದಲ್ಲಿ ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ.ಎಂ. ಮುನಿರಾಜು, ರಾಜಶೇಖರ್, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್ ಸೇರಿದಂತೆ ಹಲವರಿದ್ದರು.

ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಬಸ್ ಸಂಚಾರ

ಚಾಮರಾಜನಗರ, ಅ.29–ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರಗಳಲ್ಲೊಂದಾದ ಗುಂಡ್ಲುಪೇಟೆ ತಾಲೂಕಿನ ಗೋಪಾಲಸ್ವಾಮಿಬೆಟ್ಟದ ರಸ್ತೆ ದುರಸ್ತಿ ಹಿನ್ನೆಲೆ ಸ್ಥಗಿತಗೊಂಡಿದ್ದ ಬಸ್ ಸಂಚಾರ 13 ದಿನಗಳ ನಂತರ ಮತ್ತೆ ಆರಂಭವಾಗಿದೆ. ಇತ್ತೀಚೆಗೆ ಸುರಿದ ಮಳೆಗೆ ಗೋಪಾಲಸ್ವಾಮಿಬೆಟ್ಟದ ಹಲವೆಡೆ ರಸ್ತೆ ಕೊರೆದು ಹಳ್ಳಗಳಾಗಿದ್ದ ಕಾರಣ ಅ.16ರಂದು ಸಾರಿಗೆ ಬಸ್ ಸಂಚಾರ ಸ್ಥಗಿತಗೊಂಡಿತ್ತು. ಸದ್ಯ ಸಂಬಂಧಪಟ್ಟ ಅಧಿಕಾರಿಗಳು ಕೊರೆದ ರಸ್ತೆಯನ್ನು ತಾತ್ಕಾಲಿಕವಾಗಿ ದುರಸ್ತಿ ಮಾಡಿಸಿದ್ದು, ಶುಕ್ರವಾರದಿಂದ ಎರಡು ಮಿನಿ ಬಸ್‌ಗಳ ಸಂಚಾರ ಆರಂಭಗೊಂಡಿದೆ. ವಾರಾಂತ್ಯ ಹಿನ್ನೆಲೆ ಬೆಟ್ಟಕ್ಕೆ ಪ್ರವಾಸಿಗರು, ಭಕ್ತರ ದಂಡೇ ಹರಿದು ಬರುತ್ತಿದ್ದು, ಗೋಪಾಲಸ್ವಾಮಿ ಬೆಟ್ಟದ ಸೌಂದರ್ಯ ಕಣ್ತುಂಬಿಕೊಳ್ಳುತ್ತಿದ್ದಾರೆ. ಮಧ್ಯಾಹ್ನವಾದರೂ ಮಂಜು ಮುಸುಕಿರುವ ವಾತಾವರಣ ಜನರನ್ನು ಆಕರ್ಷಿಸುತ್ತಿದೆ.

ಸುಪ್ತ ಪ್ರತಿಭೆ ಹೊರತರಲು ಪ್ರತಿಭಾ ಕಾರಂಜಿ ವೇದಿಕೆ



ಹನೂರು, ಅ.29–ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆ ಹೊರತರಲು ಪ್ರತಿಭಾ ಕಾರಂಜಿ ಉತ್ತಮ ವೇದಿಕೆ ಎಂದು ಶಾಸಕ ಆರ್ .ನರೇಂದ್ರ ಅಭಿಪ್ರಾಯಪಟ್ಟರು.

ಪಟ್ಟಣದ ಕ್ರಿಸ್ತರಾಜ ಶಾಲಾ ಆವರಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕ್ಷೇತ್ರ ಶಿಕ್ಷಣ ಇಲಾಖೆ ಕಚೇರಿಯಿಂದ ಹಮ್ಮಿಕೊಂಡಿದ್ದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕರು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ವಿದ್ಯಾರ್ಥಿಗಳಿಗೆ ಸೂಕ್ತ ವೇದಿಕೆ ಕಲ್ಪಿಸಿಕೊಡಬೇಕು. ವಿದ್ಯಾರ್ಥಿಗಳೂ ಸಹ ತಮ್ಮ ಪ್ರತಿಭೆಯನ್ನು ಹೊರಹಾಕಲು ಇಂತಹ ಕಾರ್ಯಕ್ರಮಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಶಿವರಾಜು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಮುನಿರಾಜು, ಪ್ರಾಥಮಿಕ ಬಡ್ತಿ ಮುಖ್ಯಶಿಕ್ಷಕರ ಸಂಘಧ ಅಧ್ಯಕ್ಷ ಶಿವಮಲ್ಲು, ಪದವೀಧರ ಶಿಕ್ಷಕರ ಸಂಘದ ಅಧ್ಯಕ್ಷ ಮಾದೇಶ್, ಬಿಆರ್‌ಸಿ ದಿನೇಶ್, ಇಸಿಓಗಳಾದ ಕಂದವೇಲ್, ಕಿರಣ್, ದೈಹಿಕ ಶಿಕ್ಷಣ ಪರಿವೀಕ್ಷಕ ಮಹಾದೇವ್, ವಿವಿಧ ಶಾಲೆಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿದ್ದರು.

ವಿವಿಧ ಗ್ರಾಮಗಳಲ್ಲಿ ಸಿಇಓ ಸಂಚಾರ, ಪರಿಶೀಲನೆ



ಚಾಮರಾಜನಗರ, ಅ.29–ಚಾಮರಾಜನಗರ ತಾಲೂಕಿನ ಹೊನ್ನಹಳ್ಳಿ ಹಾಗೂ ಅರಕಲವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ ಇಂದು ಭೇಟಿ ನೀಡಿ ವಿವಿಧ ಯೋಜನೆಗಳ ಕಾಮಗಾರಿಯನ್ನು ಪರಿಶೀಲಿಸಿದರು.

ತಾಲೂಕಿನ ಹೊನ್ನಹಳ್ಳಿ ಗ್ರಾಪಂ ವ್ಯಾಪಿಯ ವಡ್ಗಲ್‌ಪುರಕ್ಕೆ ಭೇಟಿ ನೀಡಿದ ಸಿಇಓ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತೆಂಗು ಸಸಿ ನೆಡುವ ಕಾಮಗಾರಿ ವೀಕ್ಷಿಸಿದರು. ನಂತರ ಅರಕಲವಾಡಿ ಗ್ರಾಪಂಗೆ ಭೇಟಿ ನೀಡಿ, ಜಲಜೀವನ್ ಮಿಷನ್, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಹಾಗೂ ಸ್ವಚ್ಛ ಭಾರತ್ ಮಿಷನ್ ಯೋಜನೆಗಳ ಪ್ರಗತಿ ಹಾಗೂ ಮೂಲ ಸೌಕರ್ಯಾಭಿವೃದ್ಧಿ ಕುರಿತು ಚರ್ಚಿಸಿದರು.

ಬಳಿಕ ಅರಕಲವಾಡಿ ಗ್ರಾಮದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಸಿಇಓ, ಹೊರ ರೋಗಿಗಳ ವಿಭಾಗ, ಹೆರಿಗೆ ಕೊಠಡಿ, ಪುರುಷರ ವಾರ್ಡ್‌ಗಳು ಹಾಗೂ ಔಷಧ ದಾಸ್ತಾನು ಕೊಠಡಿಗೆ ಭೇಟಿ ನೀಡಿ ಪರಿಶೀಲಿಸಿದರು. ಅವಧಿ ಮುಗಿದಿರುವ ಔಷಧಿಗಳ ವಿಲೇವಾರಿಗೆ ವೈದ್ಯಾಧಿಕಾರಿಗಳಿಗೆ ನಿರ್ದೇಶಿಸಿದರು. ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗ ಉದ್ಯಾನವನ ಅಭಿವೃದ್ಧಿಪಡಿಸುವಂತೆ ಗ್ರಾಪಂ ಪಿಡಿಓಗೆ ಸೂಚಿಸಿದರು.

ಅಲ್ಲದೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಜಲಜೀವನ್ ಮಿಷನ್ ಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ನಳ ಸಂಪರ್ಕ ಕಾಮಗಾರಿ ಹಾಗೂ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಮಾಡುವ ಸಂಬಂಧ ಸ್ಥಳ ಪರಿಶೀಲಿಸಿ, ಉದ್ಯೋಗ ಖಾತರಿ ಯೋಜನೆಯಡಿ ನಡೆಯುತ್ತಿದ್ದ ಸಿ.ಸಿ ರಸ್ತೆ ಕಾಮಗಾರಿ ವೀಕ್ಷಿಸಿದರು. ಇದೇ ವೇಳೆ ಗ್ರಾಮದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಅಂಗನವಾಡಿ ಕೇಂದ್ರ, ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕೂ ಭೇಟಿ ನೀಡಿ, ಮೂಲಸೌಕರ್ಯ ಪರಿಶೀಲಿಸಿದರು. ಗ್ರಂಥಾಲಯದಲ್ಲಿ ಕಂಪ್ಯೂಟೀಕರಣ, ಕೊಠಡಿಯ ನೆಲಕ್ಕೆ ವೆಟ್ರಿಫೈಡ್ ಟೈಲ್ಸ್ ಅಳವಡಿಕೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಪುಸ್ತಕಗಳ ಖರೀದಿಗೆ ಪಿಡಿಓಗೆ ಸಿಇಓ ಗಾಯತ್ರಿ ನಿರ್ದೇಶಿಸಿದರು. ಮೂಡಲ ಹೊಸಹಳ್ಳಿ ಗ್ರಾಮದಲ್ಲಿ ನಡೆಯುತ್ತಿದ್ದ ಕಾಲುವೆ ಅಭಿವೃದ್ಧಿ, ಕಸ ವಿಲೇವಾರಿ ಘಟಕ ಕಾಮಗಾರಿಯನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ತಾಪಂ ಇಓ ಪೂರ್ಣಿಮಾ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಎಇಇ ಜಗದೀಶ್, ಪಿಡಿಓ ಷರೀಫ್ ಇತರರಿದ್ದರು.

ಇಂದು ಪ್ರತಿಭಾ ಪುರಸ್ಕಾರ

ಚಾಮರಾಜನಗರ,ಅ.29–ಜಿಲ್ಲಾ ಉಪ್ಪಾರ ಸಂಘದಿಂದ ಅ.30ರಂದು ನಗರದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯು ಪರೀಕ್ಷೆಯಲ್ಲಿ ಅಧಿಕ ಅಂಕ ಪಡೆದ ಜಿಲ್ಲೆಯ ಉಪ್ಪಾರ ಜನಾಂಗದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ.

ಶಾಸಕ ಹಾಗೂ ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಸಿ.ಪುಟ್ಟರಂಗಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲೆಯ ಉಪ್ಪಾರ ಜನಾಂಗದ ಮುಖಂಡರು, ವಿದ್ಯಾರ್ಥಿಗಳು ಆಗಮಿಸುವಂತೆ ಸಂಘ ಕೋರಿದೆ.

ನಾಗಣ್ಣ ನಿಧನ



ಚಾಮರಾಜನಗರ, ಅ.29–ಪಟ್ಟಣದ ನಿವಾಸಿ ಗಾಡಿ ನಾಗಣ್ಣ (87) ಶುಕ್ರವಾರ ರಾತ್ರಿ ನಿಧನರಾದರು.

ಮೃತರು ಐವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸಂಜೆ ತಾಲೂಕಿನ ಕರಿಯನಕಟ್ಟೆಯಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಿತು.

ಮೈಸೂರು ಮಿತ್ರ
ಭಾನುವಾರ 30 ಅಕ್ಟೋಬರ್ 2022

ಒಂದನೇ ಪುಟದಿಂದ

ಮತ್ತೆ ಅಧಿಕಾರಕ್ಕೆ ಬಂದೇ ಬರುತ್ತೆ...

ನಮ್ಮ ಸರ್ವೋಚ್ಛ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಕಲ್ಯಾಣ ಕರ್ನಾಟಕದಿಂದ ಸಂಕಲ್ಪ ಯಾತ್ರೆ ಆರಂಭಿಸಿದ್ದಾರೆ. ಪಕ್ಷದ ರಾಜ್ಯಾಧ್ಯಕ್ಷನಾಗಿ ನಾನು ತಾಯಿ ಚಾಮುಂಡೇಶ್ವರಿ ನೆಲೆವೀಡಲ್ಲಿ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ರಚನೆಗೆ ಆಶೀರ್ವದಿಸಿ, ಆ ನಿಟ್ಟಿನಲ್ಲಿ ಕೆಲಸ ಮಾಡಲು ಶಕ್ತಿ ನೀಡುವಂತೆ ಪ್ರಾರ್ಥಿಸಿದ್ದೇನೆ. ಮುಳುಗುತ್ತಿರುವ ಕಾಂಗ್ರೆಸ್‌ನ ಭಾರತ್ ಜೋಡೋ ಯಾತ್ರೆಗೆ ಬಸ್ಸುಗಳಲ್ಲಿ ಜನರನ್ನು ಕರೆತರುತ್ತಿದ್ದಾರೆ. ಬಿಜೆಪಿಗೆ ಎಲ್ಲೆಡೆ ಉತ್ತಮ ಜನಸ್ಪಂದನೆ ವ್ಯಕ್ತವಾಗುತ್ತಿದೆ. ಹಿಂದಿನ 17 ಕ್ಷೇತ್ರದ ಉಪಚುನಾವಣೆಗಳಲ್ಲಿ 15 ಬಿಜೆಪಿ ಅಭ್ಯರ್ಥಿಗಳನ್ನು ಜನ ಗೆಲ್ಲಿಸಿದ್ದಾರೆ. ಮೈಸೂರು ಮಹಾನಗರ ಪಾಲಿಕೆ ಸೇರಿದಂತೆ ಹಲವು ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ ಅಧಿಕಾರ ಹಿಡಿದಿದೆ. ಕಾಂಗ್ರೆಸ್ ಮುಕ್ತ ಕರ್ನಾಟಕ ಸನ್ನಿಹಿತವಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅಮ್ಮ-ಮಕ್ಕಳ ಪಕ್ಷವನ್ನು ದೆಹಲಿಗೆ ಹಾಗೂ ಅಪ್ಪ-ಮಕ್ಕಳ ಪಕ್ಷವನ್ನು ಗೂಡಿಗೆ ಸೇರಿಸಲು ಜನ ಸಿದ್ಧರಿದ್ದಾರೆ ಎಂದು ಕಾಂಗ್ರೆಸ್ ಹಾಗೂ ಜೆಡಿಎಸ್ ವಿರುದ್ಧ ಹರಿಹಾಯ್ದರು. ರೈತಪರ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ ನಡೆದ 2018ರ ಚುನಾವಣೆಯಲ್ಲಿ ಬಿಜೆಪಿಗೆ 104 ಸ್ಥಾನದಲ್ಲಿ ಗೆಲುವಾಯಿತು. ಆದರೆ ಬಿಜೆಪಿ ಸರ್ಕಾರ ರಚಿಸಬಾರದು, ಬಿಎಸ್‌ವೈ ಮುಖ್ಯಮಂತ್ರಿಯಾಗಬಾರದು ಎನ್ನುವ ಉದ್ದೇಶದಿಂದ ಸಿದ್ದರಾಮಯ್ಯನವರು ಜೆಡಿಎಸ್‌ನೊಂದಿಗೆ ಅನೈತಿಕ ಒಪ್ಪಂದ ಮಾಡಿಕೊಂಡು ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿದರು. ಅದರ ಹಿಂದೆಯೇ ಅವರನ್ನು ಕೆಳಗಿಳಿಸುವ ಪ್ರಯತ್ನವನ್ನೂ ಆರಂಭಿಸಿದರು. ಆದರೆ ಕುಮಾರಣ್ಣ ಸ್ವಪಕ್ಷದ ಶಾಸಕರಿಗೂ ಸಿಗದೆ ತಾಜ್ ಹೋಟೆಲ್‌ನಿಂದಲೇ ಆಡಳಿತ ನಡೆಸಿದರು. ಕುಮಾರಣ್ಣನಿಂದ ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ ಎಂಬುದನ್ನು ಅರಿತ ಜೆಡಿಎಸ್ ಹಾಗೂ ಕಾಂಗ್ರೆಸ್‌ನ 17 ಶಾಸಕರು ಹೊರಬಂದರು. ಸಚಿವರಾಗಿದ್ದವರೂ ರಾಜೀನಾಮೆ ನೀಡಿ ಬಿಎಸ್‌ವೈ ಮುಖ್ಯಮಂತ್ರಿಯಾಗಲು ಸಹಕರಿಸಿದರು. ನಂತರ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ 15 ಮಂದಿ ಪುನರಾಯ್ಕೆಯಾದರು. ಸಿದ್ದರಾಮಯ್ಯ ಯಾರಿಗೂ ಬೇಡವಾದರು ಎಂದು ವ್ಯಂಗ್ಯವಾಡಿದರು.

ಪಂಚಭೂತಗಳಲ್ಲೂ ಕೈ ಭ್ರಷ್ಟಾಚಾರ: ಕಾಂಗ್ರೆಸ್ ನಾಯಕರು ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಬಿಜೆಪಿ ಸರ್ಕಾರವನ್ನು 40 ಪರ್ಸೆಂಟ್ ಸರ್ಕಾರ ಎಂದು ಆರೋಪಿ ಸುತ್ತಿದ್ದಾರೆ. ಆದರೆ ಭ್ರಷ್ಟಾಚಾರಕ್ಕೆ ಮತ್ತೊಂದು ಹೆಸರೇ ಕಾಂಗ್ರೆಸ್. 60 ವರ್ಷದ ಕಾಂಗ್ರೆಸ್ ಆಡಳಿತದಲ್ಲಿ ನೆಹರೂ ಅವರಿಂದ ಮನಮೋಹನ್ ಸಿಂಗ್‌ವರೆಗೆ ಎಲ್ಲರ ಅವಧಿಯಲ್ಲೂ ಭ್ರಷ್ಟಾಚಾರ ನಡೆದಿದೆ. ಪಂಚಭೂತಗಳಲ್ಲೂ ಕಾಂಗ್ರೆಸ್ ಹಗರಣ ನಡೆಸಿದೆ. ಕಾಂಗ್ರೆಸ್‌ನ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಪ್ರಮುಖ ನಾಯಕರು ಬೇಲ್ ಮೇಲೆ ಹೊರಗಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸುಮ್ಮನೆ ಜೈಲಿಗೆ ಹೋಗಿದ್ದರಾ?. ಅರ್ಕಾವತಿ ಹಗರಣದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯನವರಿಗೂ ಅದೇ ಗತಿಯಾಗಲಿದೆ ಎಂದು ಹೇಳಿದರು.

ಸಿದ್ದರಾಮಯ್ಯರ ಆಟ ನಡೆಯೋಲ್ಲ: ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಯಾವುದೇ ಅಭಿವೃದ್ಧಿ ಕಾರ್ಯಗಳಾಗಲಿಲ್ಲ. ತಮ್ಮದೇ ಪಕ್ಷದ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಮನೆಗೆ ಬೆಂಕಿ ಇಟ್ಟವರ ವಿರುದ್ಧ ಕ್ರಮ ಜರುಗಿಸಲಿಲ್ಲ. ಎಸ್‌ಸಿ, ಎಸ್ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸಲಿಲ್ಲ. ಪೌರಕಾರ್ಮಿಕರನ್ನು ಖಾಯಂಗೊಳಿಸಲಿಲ್ಲ. ಈ ಎಲ್ಲಾ ಕಾರ್ಯಗಳನ್ನು ಬಿಜೆಪಿ ಸರ್ಕಾರ ಮಾಡಿ ತೋರಿಸಿದೆ. ಕುರುಬ ಸಮುದಾಯಕ್ಕೂ ಸಿದ್ದರಾಮಯ್ಯ ಅನ್ಯಾಯ ಮಾಡಿದ್ದಾರೆ. ಕನಕ ದಾಸರ ಜಯಂತಿ ಆಚರಣೆ ಜೊತೆಗೆ ಕಾಗಿನೆಲೆ ಕ್ಷೇತ್ರ ಅಭಿವೃದ್ಧಿಪಡಿಸಿದ್ದು ನಮ್ಮ ಬಿಎಸ್‌ವೈ. ಕರ್ನಾಟಕದಲ್ಲಿನ್ನು ಸಿದ್ದರಾಮಯ್ಯನವರ ಆಟ ನಡೆಯುವುದಿಲ್ಲ. ಮುಂದಿನ ಚುನಾವಣೆಯ ಕ್ಷೇತ್ರಕ್ಕಾಗಿ ಹುಡುಕಾಟ ನಡೆಸಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಹಾಗೂ ಡಾ.ಜಿ.ಪರಮೇಶ್ವರ್ ಅವರ ಸೋಲಿಸಿದ್ದರು. ಈಗ ಖರ್ಗೆಯವರೇ ಪಕ್ಷದ ರಾಷ್ಟ್ರಾಧ್ಯಕ್ಷರಾಗಿರುವುದು ಸಿದ್ದರಾಮಯ್ಯರಿಗೆ ಭಯ ಹುಟ್ಟಿಸಿದೆ. ಹುಲಿಯಾ ಈಗ ಮಂಕಾಗಿದೆ ಎಂದು ವಾಗ್ದಾಳಿ ನಡೆಸಿದರು.

ಕಾರ್ಯಕ್ರಮದಲ್ಲಿ ಶಾಸಕ ಎಸ್.ಎ.ರಾಮದಾಸ್, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಮೇಯರ್ ಎಂ.ಶಿವಕುಮಾರ್, ಉಪಮೇಯರ್ ರೂಪಾ, ವಿಧಾನಪರಿಷತ್ ಸದಸ್ಯ ತುಳಸಿ ಮುನಿರಾಜುಗೌಡ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್ ತೆಂಗಿನಕಾಯಿ, ಎಂ.ರಾಜೇಂದ್ರ, ಜಿಲ್ಲಾಧ್ಯಕ್ಷ ಶ್ರೀವತ್ಸ, ವಿಭಾಗೀಯ ಪ್ರಭಾರಿ ಮೈ.ವಿ.ರವಿಶಂಕರ್, ನಗರಾಧ್ಯಕ್ಷ ಶ್ರೀವತ್ಸ, ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ವಡಿವೇಲು, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್ ಗೌಡ, ನಗರಪಾಲಿಕೆ ಸದಸ್ಯರಾದ ಬಿ.ವಿ.ಮಂಜುನಾಥ್, ಮಾ.ವಿ.ರಾಮಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

"ಕೆಆರ್ ಕ್ಷೇತ್ರ ಸಂಘಟನೆಯ ಪ್ರಯೋಗ ಶಾಲೆ...

ರಾಜ್ಯದಲ್ಲೇ ಕೃಷ್ಣರಾಜ ಕ್ಷೇತ್ರ ಅತ್ಯಂತ ವೈಶಿಷ್ಟ್ಯ ಕ್ಷೇತ್ರವಾಗಿದೆ. ಇಲ್ಲಿನ ಶಾಸಕ ಎಸ್.ಎ.ರಾಮದಾಸ್ ಅವರ ಮಾದರಿಯಲ್ಲಿ ರಾಜ್ಯದಲ್ಲಿ ಸಂಘಟನೆ ಮಾಡುತ್ತಿದ್ದೇವೆ. ಬೂತ್ ಕಮಿಟಿ, ಮಂಡಲ ಕಮಿಟಿ ಹೀಗೆ ವಿವಿಧ ಹಂತಗಳ ರಚನೆ ಮಾಡಿದ ಮೊದಲ ಕ್ಷೇತ್ರವಿದು. ಕೇಂದ್ರ ಹಾಗೂ ರಾಜ್ಯದ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವ ಮೂಲಕ ರಾಮದಾಸ್, ಪ್ರಧಾನಿಯವರಿಂದ ಪ್ರಶಂಸೆ ಪಡೆದಿದ್ದಾರೆ. ಕಟ್ಟಕಡೆಯ ವ್ಯಕ್ತಿಗೂ ಸೌಲಭ್ಯ ತಲುಪಿಸಿರುವುದಕ್ಕೆ ರಾಮದಾಸ್‌ಗೆ ಅಭಿನಂದನೆ ಸಲ್ಲಿಸುತ್ತೇನೆ. ಚಾಮುಂಡೇಶ್ವರಿಯ ಸನ್ನಿಧಿಯಲ್ಲಿ ನೀವೂ ಮೂರು ಸಂಕಲ್ಪ ಮಾಡಿದ್ದೀರಿ. ಕ್ಷೇತ್ರದ ಎಲ್ಲವೂ ಬಿಜೆಪಿ ಬೂತ್, ಎಲ್ಲಾ ಮತಗಳೂ ಬಿಜೆಪಿ ಮತಗಳು ಹಾಗೂ ಭ್ರಷ್ಟಾಚಾರ ರಹಿತ ಮತಗಟ್ಟೆ, ಮತದಾರರ ನಿರ್ಮಾಣ ಈ ಮೂರು ಸಂಕಲ್ಪ ಈಡೇರಿಸುವ ಶಕ್ತಿಯನ್ನು ಶಕ್ತಿ ದೇವತೆ ಕರುಣಿಸಲಿ. –ನಳಿನ್‌ಕುಮಾರ್ ಕಟೀಲ್, ಬಿಜೆಪಿ ರಾಜ್ಯಾಧ್ಯಕ್ಷ

"ಸಿದ್ದರಾಮಯ್ಯರಿಂದ ಚುನಾವಣೆ ಜ್ವರ

ಮುಖ್ಯಮಂತ್ರಿಯಾಗಬೇಕೆಂದು ಭ್ರಮೆಯಲ್ಲಿ ಒಂದೇ ಸುಳ್ಳನ್ನು ನೂರು ಬಾರಿ ಹೇಳುವ ಸಿದ್ದರಾಮಯ್ಯನವರೇ ಚುನಾವಣೆ ಜ್ವರ ತಂದವರು. ಆದರೆ ನಮ್ಮ ಕ್ಷೇತ್ರದಲ್ಲಿ ಕಾರ್ಯಕರ್ತರೇ ದೊಡ್ಡ ಆಸ್ತಿಯಾಗಿದ್ದಾರೆ. ಹಣ, ಜಾತಿ, ಧರ್ಮ ಎಲ್ಲವನ್ನೂ ಮೀರಿ ಕೆಲಸ ಮಾಡುವುದನ್ನು ತೋರಿಸಿಕೊಟ್ಟಿದ್ದಾರೆ. ಹಿಂದೆ ಎಸ್.ಎಂ.ಕೃಷ್ಣ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಅರಮನೆ ಆವರಣದಲ್ಲಿ ನಡೆದ ಚುನಾವಣಾ ಪ್ರಚಾರದಲ್ಲಿ ಶಂಖ ಊದಿ ಪ್ರಚಾರ ಆರಂಭಿಸಿದ ಪರಿಣಾಮ 150 ಸ್ಥಾನ ಗೆದ್ದರು. ಕೃಷ್ಣ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ಮೆಚ್ಚಿ ಬಿಜೆಪಿ ಕುಟುಂಬ ಸೇರಿದ್ದಾರೆ. ಅವರಂತೆ ಈಗ ನಳೀನ್ ಕುಮಾರ್ ಕಟೀಲ್ ಅವರು ಶಂಖ ನಾದ ಮೊಳಗಿಸಿದ್ದು, ಅವರ ಇಚ್ಛೆಯನ್ನು ಸಾಕಾರಗೊಳಿಸುವ ಕೆಲಸವನ್ನು ನಾವು ಮಾಡಬೇಕಿದೆ. ಇಂತಹ ಕಾರ್ಯಕರ್ತರಿರುವುದು ನನ್ನ ಪುಣ್ಯ. ಭ್ರಷ್ಟಾಚಾರ ರಹಿತ ಚುನಾವಣಾ ವ್ಯವಸ್ಥೆ ಆಶಯದೊಂದಿಗೆ ಕೆಲಸ ಮಾಡುತ್ತಿದ್ದಾರೆ. ರಾಜು ಬಿಜೆಪಿಗೆ 'ಆಲ್ ಬೂತ್ ಬಿಜೆಪಿ ಬೂತ್' ಕೊಡುಗೆ ನೀಡಲಿದ್ದೇವೆ.
–ಶಾಸಕ ಎಸ್.ಎ.ರಾಮದಾಸ್

"ಬಿಜೆಪಿ ಅಶ್ವಮೇಧ ಕುದುರೆ ಬಿಟ್ಟಿದೆ...

ರಾಮದಾಸ್ ಅವರು ಇಡೀ ದೇಶವೇ ಮೆಚ್ಚಿದ ನರೇಂದ್ರ ಮೋದಿ ಅವರಿಂದ ಮೆಚ್ಚುಗೆ ಪಡೆದ ಶಾಸಕರಾಗಿದ್ದಾರೆ. 4 ಲಕ್ಷ ಜನರನ್ನು ಸೇರಿಸಿ ಸಿದ್ದರಾಮಯ್ಯ ಹುಟ್ಟುಹಬ್ಬ ಮಾಡಿಕೊಂಡರೆ, ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬವನ್ನು ಬ್ಯಾನರ್ ಹಾಕದೇ, ಯಾವುದೇ ಅಭಿಷೇಕ ಮಾಡದೇ ಸೇವಾ ಕಾರ್ಯಗಳ ಮೂಲಕ ನಮ್ಮ ಕಾರ್ಯಕರ್ತರು ಆಚರಣೆ ಮಾಡಿದ್ದಾರೆ. ರಕ್ತದಾನದ ಮೂಲಕ ಯುವ ಮೋರ್ಚಾ ಕಾರ್ಯಕರ್ತರು ದಾಖಲೆ ಬರೆದಿದ್ದಾರೆ. ಬಿಜೆಪಿ ಅಶ್ವಮೇಧ ಕುದುರೆ ಬಿಟ್ಟಿದ್ದೇವೆ. ಶಕ್ತಿ ಇದ್ದರೆ ಜೆಡಿಎಸ್, ಕಾಂಗ್ರೆಸ್ ನಾಯಕರು ಅದನ್ನು ಕಟ್ಟಿ ಹಾಕಲಿ. ಮುಂದಿನ ಚುನಾವಣೆಯಲ್ಲಿ 150 ಕ್ಷೇತ್ರದಲ್ಲಿ ಗೆದ್ದು ತೋರಿಸುತ್ತೇವೆ. –ಮಹೇಶ್ ತೆಂಗಿನಕಾಯಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

"ರಾಜ್ಯಾಧ್ಯಕ್ಷರು 5 ಬಾರಿ ಭೇಟಿ ನೀಡಿದ್ದಾರೆ...

ಪಕ್ಷದ ರಾಜ್ಯಾಧ್ಯಕ್ಷರಾದ ನಳೀನ್ ಕುಮಾರ್ ಕಟೀಲ್ ಅವರು ಕೆಆರ್ ಕ್ಷೇತ್ರಕ್ಕೆ ಐದನೇ ಬಾರಿಗೆ ಬಂದಿದ್ದಾರೆ. ಸಿಎಂ ಬಸವರಾಜ ಬೊಮ್ಮಾಯಿ ಮತ್ತು ಮಾಜಿ ಸಿಎಂ ಯಡಿಯೂರಪ್ಪ, ಅರುಣ್ ಸಿಂಗ್ ಹಾಗೂ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಮೂರು ತಂಡಗಳಲ್ಲಿ ಬಿಜೆಪಿ ಪ್ರವಾಸ ಮಾಡುತ್ತಿದೆ. ಕೊರೊನಾ ಸಂದರ್ಭದಲ್ಲಿ ನಳಿನ್ ಕುಮಾರ್ ಕಟೀಲ್ ಅವರು ಪಕ್ಷಕ್ಕೆ ಸಾಮಾಜಿಕ ಚಹರೆ ನೀಡಿದ್ದರ ಪರಿಣಾಮ ಮೈಸೂರಿನ ಎಲ್ಲಾ 65ವಾರ್ಡ್‌ಗಳಿಗೆ ಮೂವರು ಉಸ್ತುವಾರಿಗಳ ನೇಮಿಸಿ ಬಡವರಿಗೆ ಉಚಿತ, ಊಟ, ಔಷಧಿಯನ್ನು ಪಕ್ಷದಿಂದ ನೀಡಿದ್ದೇವೆ. – ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ

ಪ್ರಯಾಣಿಸುವವರ ಸಂಖ್ಯೆ ದ್ವಿಗುಣ

ಜುಲೈ 2022ರಲ್ಲಿ ಅತೀ ಹೆಚ್ಚು 23,199 ಮಂದಿ ಮೈಸೂರು ವಿಮಾನ ನಿಲ್ದಾಣದಿಂದ ಪ್ರಯಾಣಿಸಿ ದಾಖಲೆ ನಿರ್ಮಾಣ ವಾಗಿದೆ. ಕಳೆದ ವರ್ಷ ಜುಲೈ ತಿಂಗಳಲ್ಲಿ 7,060 ಮಂದಿ ಮಾತ್ರ ಪ್ರಯಾಣಿಸಿದ್ದರು. 2021ರ ಆಗಸ್ಟ್ ತಿಂಗಳಲ್ಲಿ 8,474 ಇದ್ದ ಪ್ರಯಾಣಿಕರ ಸಂಖ್ಯೆಯು ಈ ವರ್ಷ 16,181ಕ್ಕೇರಿದೆ. ಸೆಪ್ಟೆಂಬರ್‌ನಲ್ಲಿ 16,539 ಮಂದಿ ಪ್ರಯಾಣಿಸಿದ್ದು, ಕಳೆದ ವರ್ಷ 8,330 ಮಂದಿ ಮಾತ್ರವೇ ವಿಮಾನದಲ್ಲಿ ಸಂಚರಿಸಿದ್ದರು.

ಪ್ರಯಾಣಿಕರ ಹೆಚ್ಚಳ ಕುರಿತಂತೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಆರ್. ಮಂಜು ನಾಥ, ಕೊರೊನಾ ಸಂಪೂರ್ಣ ನಿರ್ಮೂಲನೆ ಯಾಗಿದ್ದು, ಎಲ್ಲರಿಗೂ ಬೂಸ್ಟರ್ ಡೋಸ್ ಲಸಿಕೆ ನೀಡಿರುವುದರಿಂದ ಜನ ಭಯದ ವಾತಾವರಣ ದಿಂದ ಹೊರಬಂದಿದ್ದಾರೆ. ಹಾಗಾಗಿ ವಿಮಾನದಲ್ಲಿ ಪ್ರಯಾಣಿಸುವವರ ಸಂಖ್ಯೆ ಹೆಚ್ಚಾಗಿದೆ ಎಂದರು. ಪ್ರತೀದಿನ ಮೈಸೂರು ವಿಮಾನ ನಿಲ್ದಾಣದಿಂದ ಸರಾಸರಿ 600 ರಿಂದ 700 ಮಂದಿ ಬಂದು ಹೋಗುತ್ತಿದ್ದಾರೆ ಎಂದು ಅವರು ನುಡಿದರು. ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಸಾಲಿನಲ್ಲಿ ಎರಡರಷ್ಟು ಪ್ರಯಾಣಿಕರು ವಿಮಾನದಲ್ಲಿ ಸಂಚರಿಸುತ್ತಿದ್ದಾರೆ. ದಿನ ಕಳೆದಂತೆ ರಸ್ತೆ, ರೈಲು ಸಂಚಾರಕ್ಕಿಂತ ವಿಮಾನದಲ್ಲಿ ಪ್ರಯಾಣಿಸಲು ಜನರು ಬಯಸುತ್ತಿರುವುದರಿಂದ ಮೈಸೂರು ವಿಮಾನ ನಿಲ್ದಾಣ ಇಡೀ ದಿನ ಚಟುವಟಿಕೆಯಿಂದ ಕೂಡಿರುತ್ತದೆ. ಸಂಸದ ಪ್ರತಾಪ್ ಸಿಂಹ ಏರ್‌ಪೋರ್ಟ್ ಅಥಾರಿಟಿ ಹಾಗೂ ವಿಮಾನ ಆಪರೇಟಿಂಗ್ ಸಂಸ್ಥೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಅವರ ಪ್ರಯತ್ನದ ಫಲವಾಗಿ ವಿಮಾನಗಳ ಸಂಖ್ಯೆಯೂ ಜಾಸ್ತಿಯಾಗುತ್ತಿದೆ ಎಂದರು.

ಬೌದ್ಧ ಧರ್ಮಕ್ಕೆ ಮತಾಂತರ ಆದವರು ಈಗ ಅತಂತ್ರ

ಮೈಸೂರು ವಿವಿ ಪ್ರಸಾರಂಗದ ನಿರ್ದೇಶಕ ಡಾ. ನಂಜಯ್ಯ ಹೊಂಗನೂರು ವಿವರಣೆ

ಮೈಸೂರು, ಅ.29(ಜಿಎ)– ಬೌದ್ಧ ಧರ್ಮಕ್ಕೆ ಮತಾಂತರವಾದವರು ಮೂಲ ಧರ್ಮವನ್ನು ಮರೆಯಲು ಸಾಧ್ಯವಾಗದೆ ತ್ರಿಶಂಕು ಸ್ಥಿತಿಯಲ್ಲಿದ್ದಾರೆ ಎಂದು ಮೈಸೂರು ವಿಶ್ವ ವಿದ್ಯಾನಿಲಯ ಪ್ರಸಾರಂಗದ ನಿರ್ದೇಶಕ ಡಾ. ನಂಜಯ್ಯ ಹೊಂಗನೂರು ಅಭಿಪ್ರಾಯಪಟ್ಟರು.

ಮಾನಸಗಂಗೋತ್ರಿಯ ಬುದ್ಧ ಪ್ರತಿಮೆ ಆವರಣದಲ್ಲಿ ರೌಂಡ್ ಟೇಬಲ್ ಇಂಡಿಯಾ, ದಿ ಶೇರ್ಡ್ ಮೀರರ್ ಪ್ರಕಾಶನ ಮತ್ತು ಅಂಗಳ ಸಾಹಿತ್ಯ ಬಳಗದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ನವಯಾನ ಬುದ್ಧಿಸಂ' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡುತ್ತಿದ್ದರು.

1956ರ ಸಂದರ್ಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಬೌದ್ಧ ಧರ್ಮಕ್ಕೆ ಮತಾಂತರ ಆದ ನಂತರ ಬೌದ್ಧ ನವಯಾನ ಆರಂಭವಾಯಿತು. ಬೌದ್ಧ ಧರ್ಮ ಸ್ವೀಕಾರ ಮತ್ತು ಅದರಲ್ಲಿನ ಕಟ್ಟುಪಾಡುಗಳಿಂದ ಉತ್ತಮ ಸಮಾಜವನ್ನು ಕಟ್ಟಬಹುದು ಎಂಬುದನ್ನು ಅವರು ತೋರಿಸಲು ಮುಂದಾಗಿದ್ದರು ಎಂದರು.



ಭಾರತದಲ್ಲಿ ಹುಟ್ಟಿಕೊಂಡ ಬೌದ್ಧ ಧರ್ಮವು ಅಳಿವಿನಂಚಿಗೆ ಹೋಗುತ್ತಿರುವ ಸಂದರ್ಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕಾರ ಮಾಡಿದ್ದರು. ಇತ್ತೀಚಿನ ದಿನಗಳಲ್ಲಿ ಬೌದ್ಧ ಧರ್ಮಕ್ಕೆ ಮಾತಾಂತರವಾದವರು ಬುದ್ಧ ವಿಹಾರಗಳನ್ನು ನಿರ್ಮಿಸುತ್ತಿದ್ದಾರೆ. ಜೊತೆಗೆ ಗುರುಪೌರ್ಣಿಮೆಯನ್ನು ಆಚರಿಸುತ್ತಾರೆ. ಆದರೆ, ಅವರಿಗೆ ಇನ್ನೂ ಅವರ ಮೂಲ ಧರ್ಮದ ಆಚರಣೆಗಳಿಂದ ಹೊರಬರಲು ಸಾಧ್ಯವಾಗದೆ ತ್ರಿಶಂಕು ಸ್ಥಿತಿಯಲ್ಲಿ ಸಿಲುಕಿದ್ದಾರೆ. ಬೌದ್ಧ ಧರ್ಮ ಸ್ವೀಕರಿಸುವವರು ಬುದ್ಧನ ಪ್ರಜ್ಞೆಯಲ್ಲಿ ಮುನ್ನಡೇದು, ಅವರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು. ಈ ರೀತಿಯ ದಿನಗಳು ಬರಲಿ ಎಂದು ಆಶಿಸಿದರು.

ದೇಶದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಬೌದ್ಧ ಧರ್ಮದ ಅಧ್ಯಯನ ಕೇಂದ್ರಗಳು ನಿರ್ಮಾಣವಾಗಬೇಕು. ಮೈಸೂರು ವಿವಿಯಲ್ಲಿ ಅಧ್ಯಯನ ಕೇಂದ್ರ ಸ್ಥಾಪಿಸುವಂತೆ ಎರಡು ಬಾರಿ ಮನವಿ ಮಾಡಲಾಗಿದೆ. ಇದರೊಟ್ಟಿಗೆ ಪಾಳಿ ಭಾಷೆಯನ್ನು ಕಲಿಸುವ ಕಾರ್ಯಕ್ಕೆ ಮುಂದಾಗಬೇಕಿದೆ. 'ನವಯಾನ ಬುದ್ಧಿಸಂ' ಕೃತಿಯ ಬಗ್ಗೆ ಹೆಚ್ಚು ಚರ್ಚೆ ಮತ್ತು ಸಂವಾದಗಳು ನಡೆಯಬೇಕು ಎಂದರು.

ಈ ವೇಳೆ ರೌಂಡ್ ಟೇಬಲ್ ಇಂಡಿಯಾ ಹಾಗೂ ದಿ ಶೇರ್ಡ್ ಮಿರರ್‌ನ ಸಹ ಸಂಸ್ಥಾಪಕ ಕುಫೀರ್ ಮಾತನಾಡಿ, ಯಾವ ಧರ್ಮ ದೇಶಕ್ಕೆ ಮಾರಕ ವಲ್ಲವೋ ಆ ಧರ್ಮಕ್ಕೆ ನಾನು ಸೇರುತ್ತೇನೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಬೌದ್ಧ ಧರ್ಮವನ್ನು ಆಯ್ಕೆ ಮಾಡಿಕೊಂಡರು. ಇನ್ನೂ 'ನವಯಾನ ಬುದ್ಧಿಸಂ' ಕೃತಿಯನ್ನು ಹೊರ ತರಲು 3 ವರ್ಷ ತೆಗೆದುಕೊಂಡಿದ್ದು, ಮಹಾರಾಷ್ಟ್ರದಲ್ಲಿ ಈಗಾಗಲೇ ಕೃತಿ ಬಿಡುಗಡೆಯಾಗಿ ಕೃತಿಯ ಬಗ್ಗೆ ಸಕರಾತ್ಮಕವಾದ ಚರ್ಚೆ ಮತ್ತು ಸಂವಾದಗಳನ್ನು ಮಾಡುತ್ತಿದ್ದಾರೆ. ಹಿಂದಿ, ಮರಾಠಿ ಮತ್ತು ತೆಲುಗು ಭಾಷೆಗಳಿಗೆ ಅನುವಾದ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಕನ್ನಡಕ್ಕೂ ಅನುವಾದ ಮಾಡುತ್ತೇವೆ. ಆಸಕ್ತಿ ಇರುವವರು ಮುಂದೆ ಬಂದರೆ ನಮ್ಮ ಸಹಕಾರವಿರಲಿದೆ ಎಂದರು. ಕಾರ್ಯಕ್ರಮದಲ್ಲಿ ಚಿಂತಕ ಶ್ರೀಧರ ಅಗಲಯ್ಯ, ಅಂಗಳ ಸಾಹಿತ್ಯದ ಪ್ರದೀಪ್ ಮುಮ್ಮಡಿ ಹಾಗೂ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಇಂದು ನಟ ಬಾಲಣ್ಣನಿಗೆ ನುಡಿ ನಮನ

ರಸ್ತೆ, ವೃತ್ತ ಅಥವಾ ಉದ್ಯಾನವೊಂದಕ್ಕೆ ಬಾಲಕೃಷ್ಣರ ಹೆಸರು ನಾಮಕರಣಕ್ಕೆ ಮನವಿ



ಮೈಸೂರು,ಅ.29(ಪಿಎಂ)– ಲಷ್ಕರ್ ಮೊಹಲ್ಲಾದ ದ್ರಾವಿಡ ಪಿಳ್ಳೆ ರಾಮ ಮಂದಿರ ಟ್ರಸ್ಟ್ ವತಿಯಿಂದ ಅ.30ರಂದು ಕನ್ನಡ ಚಿತ್ರರಂಗದ ಹಿರಿಯ ನಟ ದಿ.ಟಿ.ಎನ್. ಬಾಲಕೃಷ್ಣ ಅವರ 27ನೇ ಪುಣ್ಯ ತಿಥಿಯ ಅಂಗವಾಗಿ ನುಡಿ ನಮನ ಹಾಗೂ ಗಾಯನ ಕಾರ್ಯಕ್ರಮ ಹಮ್ಮಿ ಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ನಿರ್ದೇಶಕ ಎಂ.ಪುಟ್ಟಮಹದೇವಪ್ಪ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಕ್ಕೆ ಮೈಸೂರಿನ ಪುರಭವನದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಲಿದ್ದಾರೆ. ಶಾಸಕ ಎಲ್. ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ ಸೇರಿದಂತೆ ಮೊದಲಾದವರು ಪಾಲ್ಗೊಳ್ಳಲಿದ್ದಾರೆ ಎಂದರು.

ಉದ್ಘಾಟನೆಗೂ ಮುನ್ನ ಪುರಭವನ ಆವರಣದಲ್ಲಿ ಬಾಲಕೃಷ್ಣ ಅವರ ನೆನಪಿನಾರ್ಥ ಸಸಿವೊಂದನ್ನು ನೆಡಲಾಗುವುದು. ನುಡಿ ನಮನದ ಬಳಿಕ ಮಾತಾ ಸುಗಮ ಸಂಗೀತ ವೃಂದದಿಂದ ಭಕ್ತಿ ಗೀತೆ ಹಾಗೂ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ ನಡೆಯಲಿದೆ. ಇದಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಇದೇ ವೇಳೆ ಬಾಲಕೃಷ್ಣ ಅವರ ಅಭಿಯನದ ಆಯ್ದ ಚಿತ್ರಗಳ ದೃಶ್ಯಗಳನ್ನು ಎಲ್‌ಇಡಿ ಪರದೆಯಲ್ಲಿ ಪ್ರದರ್ಶಿಸಲಾಗುವುದು ಎಂದು ತಿಳಿಸಿದರು.

ಮುಖಂಡ ಕೆಪ್ರಸನ್ನ ಚಕ್ರವರ್ತಿ ಮಾತನಾಡಿ, ಬಾಲಕೃಷ್ಣ ಅವರು ಕಿವಿ ಕೇಳದೇ ಇದ್ದರೂ ಸಂಜ್ಞೆ ಮೂಲಕ ಗ್ರಹಿಸಿ ಅಭಿಯಿಸುವ ಕಲೆ ಕರಗತ ಮಾಡಿಕೊಂಡಿದ್ದರು. ಅವರ ಸ್ಮರಣಾರ್ಥ ಮೈಸೂರಿನ ಯಾವುದಾದರೂ ರಸ್ತೆ, ವೃತ್ತ ಅಥವಾ ಉದ್ಯಾನವನಕ್ಕೆ ಅವರ ಹೆಸರು ನಾಮಕರಣ ಮಾಡಲು ಸ್ಥಳೀಯ ಆಡಳಿತ ಹಾಗೂ ಸರ್ಕಾರ ಕ್ರಮ ವಹಿಸಬೇಕು ಎಂದು ಕೋರಿಸಿದರು. ಗಾಯಕಿಯರಾದ ಕೆ.ಪಿ.ಪ್ರೇಮ್ ಕುಮಾರ್, ಗೀರಾ ಶ್ರೀಧರ್, ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಜಿ.ಪಾರ್ಥಸಾರಥಿ ಗೋಷ್ಠಿಯಲ್ಲಿದ್ದರು.

ಇನ್ಸ್‌ಪೆಕ್ಟರ್ ನಂದೀಶ್ ಸಾವು; ವರ್ಗಾವಣೆ ದಂಧೆಗೆ ಸಾಕ್ಷಿ

ಪ್ರಕರಣದ ತನಿಖೆಗೆ ಒತ್ತಾಯ



ಮೈಸೂರು, ಅ.29(ಪಿಎಂ)– ಅಮಾನತುಗೊಂಡಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ನಂದೀಶ್ ಹೃದಯಾಘಾತದಿಂದ ಮೃತಪಟ್ಟಿರುವ ಬಗ್ಗೆ ಹಾಗೂ ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆಯು ದಂಧೆಯಾಗಿ ಮಾರ್ಪಟ್ಟಿರುವ ಆರೋಪ ಸಂಬಂಧ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ತನಿಖೆಗೆ ಸರ್ಕಾರ ಆದೇಶಿಸಬೇಕು ಎಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಮೂರೂವರೆ ತಿಂಗಳ ಹಿಂದೆಯಷ್ಟೇ ಬೆಂಗಳೂರು ಕೆಆರ್ ಪುರ ಠಾಣೆಗೆ ನಂದೀಶ್ ವರ್ಗವಾಗಿದ್ದು, ಅವಧಿ ಮೀರಿ ವಹಿವಾಟು ನಡೆಸುತ್ತಿದ್ದ ಪಬ್ ವಿರುದ್ಧ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿದ ಆರೋಪದಡಿ ನಂದೀಶ್ ಅವರನ್ನು ಬೆಂಗಳೂರು ನಗರ ಪೊಲೀಸ್ ಆಯುಕ್ತರು ಅಮಾನತು ಮಾಡಿದ್ದರು ಎಂದರು.

ನಂದೀಶ್ ಸಾವು ಸಂಬಂಧಿಸಿದಂತೆ ಪೋಸ್ಟಿಂಗ್‌ಗೆ 70–80 ಲಕ್ಷ ಕೊಟ್ಟು ಬಂದರೆ ಹೃದಯಾಘಾತವಾಗದೇ ಇನ್ನೇನಾಗುತ್ತದೆ ಎಂದು ಸಚಿವ ಎಂ.ಟಿ.ಬಿ.ನಾಗರಾಜ್ ಹೇಳಿರುವುದನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಉಲ್ಲೇಖಿಸಿದ್ದಾರೆ. ಹಾಗಾಗಿ ಇಲ್ಲಿ ಸರ್ಕಾರದ ವ್ಯವಸ್ಥೆಗಳು ನಂದೀಶ್ ಅವರಿಗೆ ಹೃದಯಾಘಾತ ಆಗುವಂತೆ ಮಾಡಿತೇ? ಎಂಬ ಅನುಮಾನ ವ್ಯಕ್ತವಾಗುತ್ತಿದೆ ಎಂದರು.

ಕರ್ನಾಟಕ ಪೊಲೀಸ್ ಇಲಾಖೆ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದೆ ಆದರೆ ಇಂದು ರಕ್ಷಣೆ ಕೊಡುವ ಪೊಲೀಸರಿಗೆ ರಕ್ಷಣೆ ಇಲ್ಲವಾಗಿದೆ. ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆಗೆ ಹಣ ವಸೂಲಿ ಮಾಡುತ್ತಿದ್ದರೆ, ಆ ಹಣ ಯಾರಿಗೆ ಹೋಗುತ್ತಿದೆ ಎಂಬುದು ತನಿಖೆ ಆಗಬೇಕು ಎಂದು ಆಗ್ರಹಿಸಿದರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ನಾಗೇಶ್, ಮುಖಂಡರಾದ ಮೈಸೂರು ಬಸವಣ್ಣ ಲೋಕೇಶ್ ಕುಮಾರ್ ಮಾದಾಪುರ, ಹರೀಶ್ ಮೊಗಣ್ಣ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮ್ಯೂಸಿಕ್ ಲವರ್ಸ್ ತಂಡದಿಂದ ಅಪ್ಪು ನೆನಪು

ಮೈಸೂರು, ಅ.29(ಜಿಎ)– ಬೊಂಬೆ ಹೇಳುತೈತೆ ಹಾಡಿನ ಮೂಲಕ ಮೈಸೂರಿನ 'ಮ್ಯೂಸಿಕ್ ಲವರ್ಸ್' ತಂಡವು ಅಪ್ಪು ನೆನಪು ಮರುಕಳಿಸುವಂತೆ ಮಾಡಿ ನೆರೆದಿದ್ದವರ ಕಣ್ಣಂಚಿನಲ್ಲಿ ನೀರಾಡಿತು.

ಮೈಸೂರಿನ ನಾದಬ್ರಹ್ಮ ಸಂಗೀತ ಸಭಾ ಭವನದಲ್ಲಿ ಕವಿತಾ ಕಾಮತ್ ನೇತೃತ್ವದಲ್ಲಿ ಆಯೋಜಿಸಿದ್ದ 'ಗೀತ್ ಸಂಗಂ' ಸಂಗೀತ ಕಾರ್ಯಕ್ರಮದಲ್ಲಿ ವೈದ್ಯರು, ಸರ್ಕಾರಿ ನೌಕರರು ಕನ್ನಡ, ಹಿಂದಿ ಚಲನಚಿತ್ರ ಗೀತೆಗಳ ಮೂಲಕ ಮಂತ್ರ ಮುಗ್ಧನಾಗಿಸಿದರು.

ಕವಿತಾ ಕಾಮತ್, ನಿತ್ಯಾನಂದ ಕಾಮತ್, ಡಾ. ಸೋಮನಾಥ್ ವಾಸುದೇವ್, ಡಾ.ಸೀತಾಲಕ್ಷ್ಮಿ, ಡಾ. ಕೆ.ಆರ್.ಮಂಜುನಾಥ್, ಹೆಡತಲೆ ನಾರಾಯಣ್, ಡಾ.ಭಾರತಿ, ನಿಖಿಲ್ ಪ್ರಭು, ಜಯಲಕ್ಷ್ಮಿ ನಾಯ್ಡು ಅವರು ಡಾ.ರಾಜ್ ಕುಮಾರ್ ಅವರ ಎರಡು ಕನಸು ಚಿತ್ರದ 'ತಂ ನಂತನಂ', ಕಸ್ತೂರಿ ನಿವಾಸದ ನೀ ಬಂದು ನಿಂತಾಗ ಗೀತೆಗಳು. ಡಾ. ವಿಷ್ಣುವರ್ಧನ್ ಅವರ ಕಥಾನಾಯಕ ಚಿತ್ರದ ನನ್ನೆದೆ ವೀಣೆಯು, ಬಂಧನ ಚಿತ್ರದ ಈ ಬಂಧನ ಗೀತೆ ಹಾಗೂ ಶಂಕರ್ ನಾಗ್, ಅನಂತ್ ನಾಗ್ ಸೇರಿದಂತೆ 60, 70 ಹಾಗೂ 80ರ ದಶಕದ ಕನ್ನಡ ಮತ್ತು ಹಿಂದಿ ಚಲನಚಿತ್ರಗಳ ಸುಮಧುರ ಗೀತೆಗಳ ಹಾಡಿ ರಂಜಿಸಿದರು.



ಈ ವೇಳೆ ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅಭಿನಯದ 'ರಾಜ ಕುಮಾರ' ಚಿತ್ರದ ಬೊಂಬೇ ಹೇಳುತೈತೆ ಗೀತೆ ಹಾಡುತ್ತಿದ್ದಂತೆ ಇಡೀ ಸಭಾಂಗಣ ನಿಶ್ಯಬ್ಧವಾಗಿ ಕಣ್ಣಂಚಿನಲ್ಲಿ ನೀರು ತುಂಬಿಕೊಂಡಿತು. ಕಾರ್ಯಕ್ರಮವನ್ನು ಜಗದೀಶ್, ಅನಿತಾ ನಿರೂಪಣೆ ಮಾಡಿದರು. ನಂತರ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಹಲವು ರೋಗಗಳಿಗೆ ಭಾರತದ ಸಂಗೀತ ಅಮೂಲ್ಯ ಔಷಧಿಯಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ. 'ಮ್ಯೂಸಿಕ್ ಲವರ್ಸ್' ತಂಡವು ಯಾವುದೇ ಲಾಭ ಅಪೇಕ್ಷಿಸದೆ. ಆತ್ಮ ಸಂತೋಷಕ್ಕಾಗಿ, ಇತರರ ಮನ ತಣಿಸಲು ಹಾಡುತ್ತಿದ್ದಾರೆ ಎಂದರು.

'ಹೆಡ್‌ಬುಷ್' ಸಿನಿಮಾ; ವೀರಗಾಸೆ ಕಲೆ ಅವಮಾನಕರ ದೃಶ್ಯ ಕೈಬಿಡಲು ಒತ್ತಾಯ



ಮೈಸೂರು,ಅ.29(ಪಿಎಂ)– 'ಹೆಡ್‌ಬುಷ್' ಸಿನಿಮಾದಲ್ಲಿ ವೀರಗಾಸೆ ಕಲೆಗೆ ಅವಮಾನ ಮಾಡಲಾಗಿದೆ ಎಂದು ಆರೋಪಿಸಿರುವ ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ, ಈ ದೃಶ್ಯಗಳನ್ನು ಕೈಬಿಡಬೇಕೆಂದು ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಜಿಲ್ಲೆಯ ವೀರಗಾಸೆ ಕಲಾವಿದರ ಸಮ್ಮುಖದಲ್ಲಿ ಪತ್ರಿಕಾಗೋಷ್ಠಿ ನಡೆಸಿ, ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ಗಿರೀಶ್ ಶಿವಾರ್ಚಕ, ಸದರಿ ಸಿನಿಮಾದಲ್ಲಿ ಖಳನಾಯಕರಿಗೆ ವೀರಗಾಸೆ ಉಡುಪು ತೊಡಿಸಿ ವೀರಗಾಸೆ ಕಲೆಗೆ ಅವಮಾನವಾಗುವ ರೀತಿಯಲ್ಲಿ ಚಿತ್ರೀಕರಿಸಲಾಗಿದೆ ಎಂದು ದೂರಿದರು.

ಚಿತ್ರತಂಡ ಕೂಡಲೇ ವೀರಗಾಸೆ ಕಲಾವಿದರ ಕ್ಷಮೆ ಕೋರಿ, ಚಿತ್ರದಿಂದ ಸದರಿ ದೃಶ್ಯಗಳನ್ನು ಕೈಬಿಡಬೇಕು. ಇಲ್ಲವಾದರೆ ಈ ಸಿನಿಮಾ ಪ್ರದರ್ಶನಗೊಳ್ಳುವ ಚಿತ್ರ ಮಂದಿರಗಳಿಗೆ ಮುತ್ತಿಗೆ ಹಾಕಿ ಪ್ರತಿಭಟಿಸುವ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ವೀರಗಾಸೆ ಕಲಾವಿದರಾದ ಕಿರಾಳು ಮಹೇಶ್, ಹಲರೆ ಬಸವಣ್ಣ, ದೇಬೂರು ನಟರಾಜು, ಮಲ್ಲೇಶ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ನಾಳೆ ಮಹಾರತ್ನ ಟ್ರಸ್ಟ್ ಉದ್ಘಾಟನೆ



ಮೈಸೂರು,ಅ.29(ಪಿಎಂ)– ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಅಸ್ತಿತ್ವಕ್ಕೆ ತಂದಿರುವ ಮಹಾರತ್ನ ಟ್ರಸ್ಟ್‌ನ ಉದ್ಘಾಟನೆ ಹಾಗೂ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಜನಪದ ಗೀತೆಗಳ ಕಲಿಕಾ ಶಿಬಿರದ ಸಮಾರೋಪ ಸಮಾರಂಭ ಅ.31ರಂದು ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಎಂ.ಮಹಾಲಿಂಗ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5ಕ್ಕೆ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಹಮ್ಮಿಕೊಂಡಿರುವ ಸಮಾರಂಭದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಟ್ರಸ್ಟ್ ಅನ್ನು ಅಧಿಕೃತವಾಗಿ ಉದ್ಘಾಟಿಸಲಿದ್ದಾರೆ. ಜಾನಪದ ವಿದ್ವಾಂಸ ಪ್ರೊ.ಮೈಸೂರು ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಅತಿಥಿಗಳಾಗಿ ರಂಗಕರ್ಮಿ ಶಿವಾಜಿರಾವ್ ಜಾದವ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕ ಪ್ರಶಾಂತ್ ತಾತಾಚಾರ್ ಸೇರಿದಂತೆ ಮೊದಲಾದ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಇದೇ ಸಂದರ್ಭದಲ್ಲಿ ಟ್ರಸ್ಟ್ ವತಿಯಿಂದ ವಾರ ಕಾಲ ನಡೆದ ಜನಪದ ಗೀತೆಗಳ ಕಲಿಕಾ ಶಿಬಿರದ ಶಿಬಿರಾರ್ಥಿಗಳು ಜನಪದ ಗೀತೆಗಳನ್ನು ಸಾದರಪಡಿಸಲಿದ್ದಾರೆ ಎಂದು ತಿಳಿಸಿದರು. ಟ್ರಸ್ಟ್‌ನ ಪದಾಧಿಕಾರಿಗಳಾದ ನಾಗಶ್ರೀ, ಪಾರ್ವತಿ ಗೋಷ್ಠಿಯಲ್ಲಿದ್ದರು.

ಟಿಕೆಟ್ ಖರೀದಿಸಿ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ನಾಯಿಗಳನ್ನು ಸಾಗಿಸಲು ಅವಕಾಶ

ಮೈಸೂರು, ಅ.29(ಎಸ್‌ಪಿಎನ್)–ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ನಾಯಿ ಮತ್ತು ನಾಯಿ ಮರಿಗಳನ್ನು ಕರೆದೊಯ್ಯಲು ನಿಗಧಿತ ಟಿಕೆಟ್ ದರ (ವಯಸ್ಕ/ಮಕ್ಕಳ ದರ ವಿಧಿಸುವುದು) ವಿಧಿಸುವಂತೆ ಕೆಎಸ್‌ಆರ್‌ಟಿಸಿ ಬೆಂಗಳೂರು ಕೇಂದ್ರ ಕಚೇರಿಯ ಸಂಚಾರ(ವಾಣಿಜ್ಯ) ಇಲಾಖೆ ನಿರ್ದೇಶಕರು ಶುಕ್ರವಾರ(ಅ.28) ಪರಿಷ್ಕರಿಸಿದ ಸುತ್ತೋಲೆಯಲ್ಲಿ ಸೂಚಿಸಿದ್ದಾರೆ.

ಈ ಆದೇಶ(ಸಾ.ಸ್ಥಾ.ಆದೇಶ ಸಂಖ್ಯೆ:721/2017–18)ದನ್ವಯ ಸಾಮಾನ್ಯ, ವೇಗದೂತ, ನಗರ ಬಸ್, ಹೊರವಲಯ ಬಸ್ಸುಗಳಲ್ಲಿ ಮಾತ್ರ ಸಾಗಣೆ ಮಾಡುವುದನ್ನು ಮುಂದುವರೆಸಲಾಗಿದೆ. ಮತ್ತೊಂದು ಆದೇಶ (ಸಾ.ಸ್ಥಾ.ಆದೇಶ ಸಂಖ್ಯೆ: 791/2017–18)ದಲ್ಲಿ ಪ್ರಯಾಣಿಕರು ಹೆಚ್ಚಿನ ತೂಕದ ಲಗೇಜ್ ಕೊಂಡೊಯ್ಯಲು ಇರುವ 30 ಕೆಜಿ ಹೊರತುಪಡಿಸಿ, ಉಳಿದ ತೂಕಕ್ಕೆ ದರ ವಿಧಿಸುವಂತೆ ಸೂಚಿಸಿದ್ದಾರೆ.

ಪ್ರತಿ ಪ್ರಯಾಣಿಕರು 30 ಕೆಜಿ ತೂಕದವರೆಗೆ ಉಚಿತವಾಗಿ ಲಗೇಜ್ ಕೊಂಡೊಯ್ಯಲು ಸಂಸ್ಥೆ ಅವಕಾಶ ನೀಡಿದೆ ಅಲ್ಲದೆ, ಪ್ರಯಾಣಿಕ ತನ್ನ ವೈಯಕ್ತಿಕ ಲಗೇಜ್ ಸೇರಿದಂತೆ ಬ್ಯಾಗ್, ಸೂಟ್‌ಕೇಸ್, ಕಿಟ್‌ಬ್ಯಾಗ್ ಇತ್ಯಾದಿ ವಸ್ತುಗಳನ್ನು (ತೆಂಗಿನ ಕಾಯಿ, ರಾಗಿ, ಅಕ್ಕಿ, ಹಿಟ್ಟು ತರಕಾರಿ, ಹಣ್ಣು, ಹೂವು, ಒಂದು ಸೀಲಿಂಗ್ ಫ್ಯಾನ್, ಒಂದು ಮಿಕ್ಸರ್ ಗ್ರೈಂಡರ್ ಬಾಕ್ಸ್) ಉಚಿತ ಪರಿಮಿತಿ(30ಕೆಜಿ) ಯೊಳಗೆ ಪರಿಗಣಿಸಬೇಕು. ಇದಕ್ಕಿಂತ ಜಾಸ್ತಿ ತೂಕದ ಲಗೇಜ್ ಇದ್ದಲ್ಲಿ ನಿಗಧಿತ ಲಗೇಜ್ ದರ ಪಡೆಯುವಂತೆ ಪರಿಷ್ಕೃತ ಆದೇಶದಲ್ಲಿ ಸೂಚಿಸಿದ್ದಾರೆ.

ಮೈಸೂರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಪ್ರಸ್ತಾಪ

ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಯೊಂದಿಗೆ ಸಂಸದ ಪ್ರತಾಪ್ ಸಿಂಹ ಚರ್ಚೆ

ಮೈಸೂರು, ಅ.29(ಆರ್‌ಕೆ)–ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (KCSA)ನಿಂದ ಮೈಸೂರಲ್ಲಿ ನಿರ್ಮಿಸಲುದ್ದೇಶಿಸಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಭೂಮಿ ನೀಡುವ ಸಂಬಂಧ ಸಂಸದ ಪ್ರತಾಪ್ ಸಿಂಹ ಅವರು ಇಂದು ಬೆಳಗ್ಗೆ ಬೆಂಗಳೂರಿನ ವಿಕಾಸಸೌಧದಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ. ಅಜಯ್ ನಾಗಭೂಷಣ್ ಅವರನ್ನು ಭೇಟಿ ಮಾಡಿ, ಚರ್ಚೆ ನಡೆಸಿದರು.

ಮೈಸೂರಿನ ಹಂಚ್ಯಾ–ಸಾತಗಳ್ಳಿ 'ಬಿ' ವಲಯದ ವಿಟಿಯು ಪ್ರಾದೇಶಿಕ ಕೇಂದ್ರದ ಬಳಿ ರಿಂಗ್ ರಸ್ತೆಗೆ ಹೊಂದಿಕೊಂಡಂತೆ 19.30 ಎಕರೆ ಭೂಮಿಯನ್ನು ಉದ್ದೇಶಿತ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು ಕೆಎಸ್‌ಸಿಎಗೆ ಹಸ್ತಾಂತರಿಸಲು ಇರುವ ಅಡೆ–ತಡೆ ನಿವಾರಿಸಿ ಸಚಿವ ಸಂಪುಟ ಸಭೆಗೆ ಕಡತ ಮಂಡಿಸುವಂತೆ ಪ್ರತಾಪ್ ಸಿಂಹ ಮನವಿ ಮಾಡಿದರು.



ಪ್ರಸ್ತಾಪಿತ ಭೂಮಿಯಲ್ಲಿ ಬತ್ತಿ ಹೋಗಿರುವ ಹಳೇ ಕೆರೆ ಇರುವುದು ರೆವಿನ್ಯೂ ದಾಖಲಾತಿಗಳಲ್ಲಿ ದಾಖಲಾಗಿರುವ ಕಾರಣ ಜಾಗ ಮಂಜೂರಾತಿಗೆ ತಾಂತ್ರಿಕ ತೊಂದರೆಯಾಗಿದೆ. ಎಸಿ, ತಹಸೀಲ್ದಾರ್ ರೊಂದಿಗೆ ಚರ್ಚಿಸಿ ಪರಿಹಾರೋಪಾಯ ಕಂಡುಕೊಂಡು ಅಡೆ–ತಡೆ ನಿವಾರಿಸಿ ಸಮಸ್ಯೆ ಬಗೆಹರಿಸುವಂತೆಯೂ ಅವರು ಡಾ. ಅಜಯ್ ನಾಗಭೂಷಣ್ ಅವರನ್ನು ಕೋರಿಕೊಂಡರು.

ಪೆರಿಫೆರಲ್ ರಿಂಗ್ ರಸ್ತೆಗೆ ಡಿಪಿಆರ್ ತಯಾರಿಸಲು ಅನುಮೋದನೆ, ಬಿದರಗೂಡಿನಿಂದ ಮೈಸೂರಿಗೆ ಕುಡಿಯುವ ನೀರು ಪೂರೈಸುವ ಯೋಜನೆ ಅನುಷ್ಠಾನಕ್ಕೆ 150 ಕೋಟಿ ರೂ. ಅನುದಾನ ಬಳಕೆಗೆ ಅನುಮತಿ ನೀಡುವುದು, ಗುಂಪು ವಸತಿ ಯೋಜನೆ ಪ್ರಸ್ತಾಪಕ್ಕೆ ಅನುಮೋದನೆ, ತುಂಡು ಜಾಗ ಮಂಜೂರಾತಿ ಸೇರಿದಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಹಲವು ಪ್ರಗತಿ ಕಾರ್ಯಗಳ ಬಗ್ಗೆ ಸಂಸದರು ಇಂದು ಚರ್ಚೆ ನಡೆಸಿ ಕಡತಗಳ ವಿಲೇವಾರಿ ಮಾಡುವಂತೆ ಕೋರಿಕೊಂಡರು.

ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಅವರು ಈ ಸಂದರ್ಭ ಉಪಸ್ಥಿತರಿದ್ದರು.

ವಿಟಿಯು ಕುಲಪತಿ ವಿದ್ಯಾಶಂಕರ್‌ಗೆ ಮಾತೃ ವಿಯೋಗ

ಮೈಸೂರು, ಅ.29– ಮೈಸೂರು ವಿಜಯನಗರ 3ನೇ ಹಂತದ ನಿವಾಸಿ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ (ವಿಟಿಯು) ಕುಲಪತಿ ವಿದ್ಯಾಶಂಕರ್ ಅವರ ತಾಯಿ ಲಕ್ಷ್ಮಿದೇವಿ (87) ಶನಿವಾರ ನಿಧನರಾದರು.



ಅ.30ರ ಬೆಳಗ್ಗೆ (ಭಾನುವಾರ) 6 ಗಂಟೆಯಿಂದ ಬೆಳಗ್ಗೆ 7.30ರವರೆಗೂ ವಿಜಯನಗರ 3ನೇ ಹಂತದ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮೃತರ ಅಂತ್ಯಕ್ರಿಯೆ ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನ ಚಾಮರಾಜಪೇಟೆಯ ಚಿತಾಗಾರದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ

ಬಿಜೆಪಿಗೆ 150 ಸ್ಥಾನ ನಿಶ್ಚಿತ: ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿಶ್ವಾಸ



ನಂಜನಗೂಡು, ಅ.29– ಮುಂದಿನ ಮುಖ್ಯಮಂತ್ರಿ ವಿಚಾರವಾಗಿ ಕಾಂಗ್ರೆಸ್‌ನಲ್ಲಿ ಒಳಜಗಳ ಹೆಚ್ಚಾಗಿದೆ. ಡಿಕೆಶಿ ಅವರನ್ನು ಸಿದ್ದರಾಮಯ್ಯ ಸೋಲಿಸಲಿದ್ದಾರೆ. ಸಿದ್ದರಾಮಯ್ಯ ಅವರನ್ನು ಡಿಕೆಶಿ ಸೋಲಿಸುತ್ತಾರೆ. ಕೇವಲ ಕಾಂಗ್ರೆಸ್‌ನ ಒಳಬೇಗುದಿಯಿಂದ ಅಲ್ಲ ಬಿಜೆಪಿ ಅಭಿವೃದ್ಧಿ ಮಂತ್ರದಿಂದ 150 ಸ್ಥಾನ ಗಳಿಸಿ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಮಹದೇವನಗರದಲ್ಲಿರುವ ಜಯಲಕ್ಷ್ಮಿ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ನಡೆದ ನಂಜನಗೂಡು ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಂಕಲ್ಪ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗುವುದನ್ನು ತಪ್ಪಿಸಲು ಮತ್ತು ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವ ಉದ್ದೇಶದಿಂದ ಖಳನಾಯಕ, ಗೋಮುಖ ರಾಜಕಾರಣಿ ಸಿದ್ದರಾಮಯ್ಯ, ಕಣ್ಣೀರಿನಲ್ಲಿ ನಾಟಕವಾಡುವ ಕುಮಾರಸ್ವಾಮಿ, ಅನೈತಿಕ ಒಪ್ಪಂದದಿಂದ ಮೈತ್ರಿ ಸರ್ಕಾರ ತಂದರು. ಆದರೆ ಶಾಸಕರಿಗೆ ಅನುದಾನ ನೀಡದೆ, ಅಭಿವೃದ್ಧಿ ಮಾಡದೆ ಕಾಲ ಕಳೆದರು. ಕರ್ನಾಟಕ ಕಲ್ಯಾಣ ರಾಜ್ಯವಾಗಬೇಕು. ಅಭಿವೃದ್ಧಿಯಾಗಬೇಕೆಂಬ ಉದ್ದೇಶದಿಂದ 17 ಮಂದಿ, ಕೆಲವರು ಮಂತ್ರಿಗಳೂ ರಾಜೀನಾಮೆ ನೀಡಿ ಬಿಜೆಪಿ ಸೇರಿದರು. ಆಪರೇಷನ್ ಕಮಲ ಆಗಿದ್ದು ಮೈತ್ರಿ ಸರ್ಕಾರದ ದುರಾಡಳಿತ, ಆಡಳಿತ ವೈಫಲ್ಯದಿಂದಾಗಿ ಎಂದರು.

> ನಂಜನಗೂಡನ್ನು ಸ್ಯಾಟಲೈಟ್ ಟೌನ್ ಆಗಿ ರೂಪಿಸಲು ಶ್ರಮಿಸಿದ್ದೇನೆ. ಈ ಭಾಗದ ಬಹುದಿನಗಳ ಬೇಡಿಕೆಯಾಗಿದ್ದ ನುಗು ಏತ ನಿರಾವರಿ ಯೋಜನೆ ಮತ್ತು 75 ಕೊಠಡಿಗಳ ಅತಿಥಿಗೃಹ ನಿರ್ಮಾಣಕ್ಕೆ ನವೆಂಬರ್‌ನಲ್ಲಿ ಮುಖ್ಯಮಂತ್ರಿಗಳಿಂದ ಚಾಲನೆ ನೀಡಲಾಗುವುದು. ಬದನವಾಳು ಭಾಗದ ಕೆರೆ ತುಂಬಿಸುವ ಯೋಜನೆಗೆ 70 ಕೋಟಿ ಅನುದಾನಕ್ಕೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದು, ಅವರು ಒಪ್ಪಿಗೆ ಸೂಚಿಸುವ ವಿಶ್ವಾಸವಿದೆ. ಕ್ಷೇತ್ರದಲ್ಲಿ ನನ್ನ ಗೆಲುವಿಗೆ ಅಭಿವೃದ್ಧಿ ಕೆಲಸಗಳೇ ಶ್ರೀರಕ್ಷೆಯಾಗಲಿದೆ.
> -ಬಿ.ಹರ್ಷವರ್ಧನ್, ಶಾಸಕ

ಸಿದ್ದರಾಮಯ್ಯ, ಡಿಕೆಶಿ ಆಂಬುಲೆನ್ಸ್ ನೀಡಲಿಲ್ಲ. ಆಕ್ಸಿಜನ್ ನೀಡಲಿಲ್ಲ ಎಂದು ಆರೋಪಿಸುತ್ತಾರೆ. 60 ವರ್ಷ ದೇಶ, ರಾಜ್ಯ ಆಳಿದ್ದು ಕಾಂಗ್ರೆಸ್ ಪಕ್ಷ. ಆದರೂ ಆಸ್ಪತ್ರೆಗಳಿಗೆ ಸೌಲಭ್ಯ ಒದಗಿಸಿರಲಿಲ್ಲ. ಕೊರೊನಾ ಬಂದ 6 ತಿಂಗಳಲ್ಲಿ ಬಿಜೆಪಿ ಸರ್ಕಾರ ಆಸ್ಪತ್ರೆಗಳನ್ನು ಉನ್ನತೀಕರಿಸಿ ವೆಂಟಿಲೇಟರ್, ಆಕ್ಸಿಜನ್ ವ್ಯವಸ್ಥೆ ಕಲ್ಪಿಸಿದೆ. ಸಿದ್ದರಾಮಯ್ಯ ಅವಧಿಯಲ್ಲಿ ಜನರಿಗೆ ಆಂಬುಲೆನ್ಸ್ ಇರಲಿಲ್ಲ. ಬೊಮ್ಮಾಯಿ ಕಾಲದಲ್ಲಿ ಪಶುಗಳಿಗೂ ಆಂಬುಲೆನ್ಸ್ ಬಂದಿದೆ. ಸಿದ್ದರಾಮಯ್ಯ ಕಾಲದಲ್ಲಿ 3 ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡರು. ಅವರಿಗೆ ಪರಿಹಾರ ನೀಡಲಿಲ್ಲ. ರೈತರ ಕಣ್ಣೀರು ಒರೆಸುವ ಕೆಲಸ ಮಾಡಿದ್ದು ಪ್ರಧಾನಿ ಮೋದಿ, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಮಾತ್ರ. ರೈತರಿಗಾಗಿ ಪ್ರತ್ಯೇಕ ಬಜೆಟ್ ಮಂಡಿಸಿ, ಸಾಲ ಮನ್ನಾ ಮಾಡಿದ್ದಲ್ಲದೆ ಕಿಸಾನ್ ಸಮ್ಮಾನ್ ನಿಧಿಗೆ 4 ಸಾವಿರ ರೂ. ನೀಡಿದ ಕೀರ್ತಿ ಬಿಎಸ್‌ವೈಗೆ ಸಲ್ಲುತ್ತದೆ. ಬೊಮ್ಮಾಯಿ ಅವರು 11,500 ಪೌರಕಾರ್ಮಿಕರನ್ನು ಖಾಯಂಗೊಳಿಸಿ ಎಸ್ಸಿ, ಎಸ್ಟಿ ಮೀಸಲಾತಿ ಹೆಚ್ಚಿಸುವ ಧೈರ್ಯ ತೋರಿದ್ದಾರೆ. ಸಿದ್ದರಾಮಯ್ಯ ಅವರು ಗಂಡಸುತನದ ಬಗ್ಗೆ ಮಾತನಾಡುತ್ತಾರೆ. ಅವರ ಗಂಡಸುತನದ ಬಗ್ಗೆ ನಮಗೆ ಗೊತ್ತಿದೆ. ತನ್ವೀರ್ ಸೇಠ್‌ಗೆ ಚೂರಿ ಹಾಕಿದ ಸಂಘಟನೆಯನ್ನು ಜೈಲಿಗೆ ಹಾಕುವ ಧೈರ್ಯ ಇರಲಿಲ್ಲ. ಅವರ ಗಂಡಸ್ತನಕ್ಕೆ ನಾಚಿಕೆಯಾಗಬೇಕು. ಪಿಎಫ್‌ಐ ಸಂಘಟನೆ ನಿಷೇಧಿಸಿ ಜೈಲಿಗೆ ಹಾಕುವ ಕೆಲಸ ಮಾಡಿದ್ದು ಮೋದಿ ಸರ್ಕಾರ ಬೊಮ್ಮಾಯಿ ಸರ್ಕಾರದ ಸಾಧನೆಗಳನ್ನು ಮುಂದಿಟ್ಟುಕೊಂಡು ಬಿಎಸ್‌ವೈ ಅವರ ನಾಯತ್ವದಲ್ಲಿ ಚುನಾವಣೆ ಎದುರಿಸಲಿದ್ದು ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದರು.

ರಾಹುಲ್ ಗಾಂಧಿ ಕಾಲಿಟ್ಟ ಕ್ಷೇತ್ರಗಳಲ್ಲಿ ಸೋಲು ಖಂಡಿತ. ನಂಜನಗೂಡು ಕ್ಷೇತ್ರದಲ್ಲಿ ಇನ್ನೂ 20 ವರ್ಷ ಬಿಜೆಪಿಯೇ ಗೆಲ್ಲಲಿದೆ. ಶಾಸಕ ಬಿ.ಹರ್ಷವರ್ಧನ್ 600 ಕೋಟಿಗೂ ಹೆಚ್ಚು ಅನುದಾನ ತಂದು ಅಭಿವೃದ್ಧಿ ಶಕೆ ಆರಂಭಿಸಿದ್ದಾರೆ. ನಂಜನಗೂಡಿಗೆ ಸಿದ್ದರಾಮಯ್ಯ ಕೊಡುಗೆ ಶೂನ್ಯ ಎಂದರು.

ಇದಕ್ಕೂ ಮುನ್ನ ನಳಿನ್ ಕುಮಾರ್ ಕಟೀಲ್ ಅವರು ನಗರದ ಚಾಮಲಾಪುರಹುಂಡಿಯಲ್ಲಿ ಹಿಂದುಳಿದ ವರ್ಗದ ಮುಖಂಡರೊಡನೆ ಸಂವಾದ ನಡೆಸಿದರು. ಬಳಿಕ ಪೌರಕಾರ್ಮಿಕರ ಕಾಲೋನಿಗೆ ಭೇಟಿ ನೀಡಿ ಸನ್ಮಾನ ಸ್ವೀಕರಿಸಿದರು. ನಂತರ ಶ್ರೀಕಂಠೇಶ್ವರನ ದರ್ಶನ ಪಡೆದು, ತಾಲೂಕಿನ ಮಹದೇವನಗರದಲ್ಲಿ ಪಕ್ಷದ ಪದಾಧಿಕಾರಿಗಳ ಸಭೆ ನಡೆಸಿದರು.

ಸಮಾರಂಭದಲ್ಲಿ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ತಾಲೂಕು ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ಜಿಪಂ ಮಾಜಿ ಸದಸ್ಯರಾದ ಶಿವರಾಮು, ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ಖಾದಿ ಮಂಡಳಿ ನಿಗಮ ಮಾಜಿ ಅಧ್ಯಕ್ಷ ಕೃಷ್ಣಪ್ಪಗೌಡ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ನಗರಸಭಾಧ್ಯಕ್ಷ ಎಚ್.ಎಸ್.ಮಹದೇವಸ್ವಾಮಿ, ನಗರಸಭಾ ಸದಸ್ಯ ದೇವ್ರ, ಮುಖಂಡರಾದ ಕೆಂಡಗಣ್ಣಪ್ಪ, ಸೋಮಣ್ಣ, ಪುಟ್ಟಸ್ವಾಮಿ, ಗಂಗಾಧರ್, ರಾಜೇಂದ್ರ, ಮೈ.ವಿ.ರವಿಶಂಕರ್ ಸೇರಿದಂತೆ ಇತರರಿದ್ದರು.

ಜನವರಿ ವೇಳೆಗೆ ಅರ್ಕಾವತಿ ಹಗರಣ ಬೆಳಕಿಗೆ

ತಾಕತ್ತಿದ್ದರೆ ಶೇ.40 ಕಮಿಷನ್‌ಗೆ ದಾಖಲೆ ನೀಡಿ: ಕಟೀಲ್ ಸವಾಲ್

ನಂಜನಗೂಡು, ಅ.29– ಬಿಜೆಪಿ ಡಬಲ್ ಇಂಜಿನ್ ಸರ್ಕಾರದ ಅಭಿವೃದ್ಧಿ ಸಹಿಸದ ಕಾಂಗ್ರೆಸ್, ಭ್ರಷ್ಟಾಚಾರದ ಆರೋಪ ಮಾಡುತ್ತಿದೆ. ಭ್ರಷ್ಟಾಚಾರದ ಮೂಲ ಕಾಂಗ್ರೆಸ್ ಪಕ್ಷವಾಗಿದ್ದು, ಜನವರಿ ವೇಳೆಗೆ ಅರ್ಕಾವತಿ ಹಗರಣ ಬೆಳಕಿಗೆ ಬರಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ತಿಳಿಸಿದರು.

ತಾಲೂಕಿನ ಮಹದೇವನಗರದಲ್ಲಿ ನಡೆದ ಕಾರ್ಯಕರ್ತರ ಸಂಕಲ್ಪ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ 60 ವರ್ಷಗಳ ಆಡಳಿತದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಮಾತ್ರ ಕಳಂಕ ರಹಿತ ರಾಜಕಾರಣಿ. ನೆಹರು ಕಾಲಘಟ್ಟದಿಂದ ಮನಮೋಹನ್‌ಸಿಂಗ್‌ವರೆಗೆ ಹಗರಣ ಹೆಚ್ಚಾಗಿವೆ. ಸಿದ್ದರಾಮಯ್ಯ ಕಾಲದಲ್ಲಿ ಬೆಡ್‌ಶೀಟ್, ಹಾಸಿಗೆ, ಮೊಟ್ಟೆ ಜೊತೆಗೆ ಪಿಎಸ್‌ಐ, ಶಿಕ್ಷಕರ ನೇಮಕಾತಿ ಹಗರಣ ಮುಚ್ಚಿ ಹಾಕಿದ್ದೀರಿ, ಅಲ್ಲದೆ ಜೈಲಿಗೆ ಹೋಗುತ್ತೇನೆ ಎಂಬ ಭಯದಿಂದ ಲೋಕಾಯುಕ್ತ ಮುಚ್ಚಿದರು. ಆದರೆ ಬಿಜೆಪಿ ಸರ್ಕಾರ ಪಿಎಸ್‌ಐ ಹಗರಣವನ್ನು ತನಿಖೆ ನಡೆಸಿ, ಆರೋಪಿಗಳ ಜೈಲಿಗೆ ಹಾಕುವ ಮೂಲಕ ಬೊಮ್ಮಾಯಿ ತಮ್ಮ ತಾಕತ್ತು ತೋರಿಸಿದ್ದಾರೆ. ನಿಮ್ಮ ಸರ್ಕಾರದ ದಾಖಲೆಗಳು ನಮ್ಮ ಬಳಿ ಇವೆ. ಜನವರಿ ವೇಳೆಗೆ ಅರ್ಕಾವತಿ ಪ್ರಕರಣ ಬೆಳಕಿಗೆ ಬರಲಿದೆ. ನಿಮಗೆ ತಾಕತ್ತಿದ್ದರೆ ಶೇ.40 ಕಮಿಷನ್ ಬಗ್ಗೆ ದಾಖಲೆ ನೀಡಿ ಎಂದು ಸವಾಲೆಸೆದರು.

ಕಾಂಗ್ರೆಸ್ ನಾಯಕರು ಬೇಲ್‌ನಲ್ಲಿದ್ದಾರೆ: ಈ ಹಿಂದೆ ಕೋರ್ಟ್‌ನಲ್ಲಿ ಕೋಳಿ ಚಿಕ್ಕಣ್ಣ, ಚೂರಿ ಘಜಲ್ ಎಂದು ಕೂಗುತ್ತಿದ್ದರು. ಈಗ ಸೋನಿಯಾ, ರಾಹುಲ್, ವಾದ್ರ ಚಿದಂಬರಂ, ಡಿಕೆಶಿ ಕೋರ್ಟ್‌ನಲ್ಲಿದ್ದಾರೆ. ಅವರೆಲ್ಲ ಬೇಲ್‌ನಲ್ಲಿ ಹೊರಗಿದ್ದಾರೆ ಎಂದು ಕುಟುಕಿದರು.

ಸಿದ್ದರಾಮಯ್ಯಗೆ ಟಿಕೆಟ್ ಇಲ್ಲ: ದಲಿತ ಮುಖ್ಯಮಂತ್ರಿಯಾಗುತ್ತಾರೆ ಎಂದು ಅಡ್ಡಗಾಲು ಹಾಕಿ ಖರ್ಗೆ ಮತ್ತು ಪರಮೇಶ್ವರ್ ಅವರನ್ನು ಸೋಲಿಸಿದ್ದೀರಿ. ನಿಮಗೆ ಖರ್ಗೆ ಮತ್ತು ಪರಮೇಶ್ವರ್ ಶಾಪವಿದೆ. ಮಲ್ಲಿಕಾರ್ಜುನ ಖರ್ಗೆ ಈಗ ಎಐಸಿಸಿ ಅಧ್ಯಕ್ಷರಾಗಿದ್ದು, ನಿಮಗೆ ಟಿಕೆಟ್ ಇಲ್ಲವಾಗಿದೆ. ಆದ್ದರಿಂದ ಜೋಡೋ ಯಾತ್ರೆಯಲ್ಲಿ ಸಿದ್ದರಾಮಯ್ಯ ರಾಹುಲ್ ಮೇಲಿನ ಪ್ರೀತಿಯಿಂದ ಭಾಗವಹಿಸಿಲ್ಲ. ಯಾತ್ರೆ ಮೂಲಕ ಕ್ಷೇತ್ರದ ಹುಡುಕಾಟದಲ್ಲಿದ್ದಾರೆ. ಚಾಮುಂಡೇಶ್ವರಿ, ವರುಣಾದಿಂದ ಜನರು ಓಡಿಸಿದ್ದಾರೆ. ಬಾದಾಮಿಯಲ್ಲಿ ನಿಲ್ಲುವುದು ಬೇಡ ಎಂದಿದ್ದಾರೆ. ಕೋಲಾರದಲ್ಲಿ ಕತ್ತಿ, ಮೈಸೂರಿನಲ್ಲಿ ಬೆತ್ತ ಹಿಡಿದು ನಿಂತಿದ್ದಾರೆ. ಹುಲಿಯಾ ಕಾಡಿನೊಳಗೆ ಹೋಗುತ್ತದೆ ಎಂದು ಜರಿದರು. ಶ್ರೀರಾಮ ಮಂದಿರ ತಲೆ ಎತ್ತುತ್ತಿದೆ. ಇತ್ತ ಕಾಶಿ ಕಾರಿಡಾರ್ ಸಿದ್ಧವಾಗಿದೆ, ಉಜ್ಜೈನಿ, ಕಾಶ್ಮೀರದಲ್ಲಿ ಅಭಿವೃದ್ಧಿ ಕೆಲಸ ಮಾಡಿ ಮೋದಿಯವರು ಭಾರತವನ್ನು ಜೋಡಿಸುವ ಕೆಲಸ ಮಾಡಿದ್ದಾರೆ ಎಂದರು.

ಜಾತಿ, ಧರ್ಮಗಳಿಲ್ಲದ ಧರ್ಮಸ್ಥಳ ಸಂಘ

ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ



ಹೆಚ್.ಡಿ.ಕೋಟೆ, ಅ.29– ಜಾತಿ, ಧರ್ಮಗಳಿಲ್ಲದ ಸಂಘವಿದ್ದರೆ ಅದು ಧರ್ಮಸ್ಥಳ ಸಂಘ ಮಾತ್ರ ಎಂದು ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ತಿಳಿಸಿದರು.

ಪಟ್ಟಣದ ಕನಕ ಭವನದಲ್ಲಿ ನಡೆದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹೆಚ್.ಡಿ.ಕೋಟೆ ತಾಲೂಕು ವಲಯ ಆಯೋಜಿಸಿದ್ದ ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜೆ ಮತ್ತು ಧಾರ್ಮಿಕ ಸಭೆ ಹಾಗೂ ತಾಲೂಕಿನ 2701ನೇ ಸ್ವಸಹಾಯ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆ ಅವರು ಯಾವುದೇ ಜಾತಿ, ಧರ್ಮ ಆಧಾರಿತವಾಗಿ ಪಕ್ಷಭೇದ ಮಾಡದೆ ಎಲ್ಲರನ್ನೂ ಒಂದೇ ರೀತಿ ಕಾಣುತ್ತಾರೆ ಎಂದರು.

ಮಹಿಳೆಯರು ಸ್ವಾವಲಂಬಿಗಳಾಗಬೇಕೆಂಬ ಉದ್ದೇಶದಿಂದ ವೀರೇಂದ್ರ ಹೆಗಡೆ ಅವರು ಎಲ್ಲೆಡೆ ಸಂಘಗಳನ್ನು ಸ್ಥಾಪಿಸಿದ್ದಾರೆ. ಮಹಿಳೆಯರು ಯಶಸ್ವಿಯಾಗಿ ಸಂಘ ನಡೆಸಿಕೊಂಡು ಹೋಗುವ ಮೂಲಕ ಅವರಿಗೆ ಕೀರ್ತಿ ತರಬೇಕು ಎಂದರು.

ಸಂಘಗಳಲ್ಲಿ ಒಂದು ರೂಪಾಯಿ ಕೂಡ ಮುಖ್ಯವಾಗಿದ್ದು, ಸಂಘದ ಹಣ ದುರುಪಯೋಗಪಡಿಸಿಕೊಳ್ಳದೆ ಸದುಪಯೋಗಪಡಿಸಿಕೊಳ್ಳಿ ಎಂದ ಅವರು, ಹೆಗಡೆ ಅವರ ಮಾರ್ಗದರ್ಶನದ ಮೇರೆಗೆ ಇಂತಹ ಕಾರ್ಯಕ್ರಮ ನಮ್ಮ ತಾಲೂಕಿನಲ್ಲಿ ನಡೆಯುತ್ತಿರುವುದು ತಾಲೂಕಿನ ಜನತೆಯ ಸೌಭಾಗ್ಯ, ಅದರಲ್ಲೂ ಈ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿರುವುದು ನನ್ನ ಪುಣ್ಯ ಎಂದರು.

ಗೌಡಗೆರೆ ಗುರುಲಿಂಗ ಜಂಗಮದೇವ ಮಠದ ನಟರಾಜ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆ ವಹಿಸಿದ್ದರು. ಪುರಸಭಾಧ್ಯಕ್ಷೆ ಅನಿತಾ, ಸದಸ್ಯರಾದ ಸುಹಾಸಿನಿ, ಹೆಚ್.ಸಿ.ನರಸಿಂಹಮೂರ್ತಿ, ರಾಜು, ಪುರಸಭಾ ಮುಖ್ಯಾಧಿಕಾರಿ ಸುರೇಶ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಎಂ.ಬಿ.ಆನಂದ್, ಧರ್ಮಸ್ಥಳ ಜಿಲ್ಲಾ ನಿರ್ದೇಶಕ ಎಂ.ಲಕ್ಷ್ಮಣ್, ರಾಜೇಗೌಡ, ಬಿ.ವಿ.ಬಸವರಾಜ್, ತಾಲೂಕು ನಾಯಕ ಸಂಘದ ಅಧ್ಯಕ್ಷ ದೊಡ್ಡನಾಯಕ, ವೀರಪ್ಪ, ರೇವಣ್ಣ, ವರ್ತಕರ ಸಂಘದ ಅಧ್ಯಕ್ಷ ವಿನಯ್, ನಟರಾಜ್, ಧರ್ಮಸ್ಥಳ ಯೋಜನಾಧಿಕಾರಿ ಎಂ.ಶಶಿಧರ್, ಮೇಲ್ವಿಚಾರಕಿ ಪವಿತ್ರ, ಜಿಲ್ಲಾ ಜಾಗೃತಿ ವೇದಿಕೆ ಸದಸ್ಯ ಕನ್ನಡ ಪ್ರಮೋದ್, ಕ್ಯಾತನಹಳ್ಳಿ ನಾಗರಾಜ್, ರಾಜನಾಯಕ, ಪ್ರದೀಪ್ ಸೇರಿದಂತೆ ನೂರಾರು ಮಹಿಳೆಯರಿದ್ದರು.



ಡಾ.ಪುನೀತ್ ರಾಜಕುಮಾರ್ ಮೊದಲ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಸರಗೂರಿನಲ್ಲಿ ಅಭಿಮಾನಿಗಳು ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಈ ಸಂದರ್ಭ ಸರಗೂರು ರೆಸಿಡೆನ್ಸಿ ಮ್ಯಾನೇಜರ್ ಕಿರಣ್, ವಿಷ್ಣು ಸೇನಾ ಸಮಿತಿ ಉಪಾಧ್ಯಕ್ಷ ಶಂಭು, ಶಂಕರ್ ಸಿದ್ದರಾಜು, ಡ್ರೈವರ್ ಸುಂದರ್, ಸೋಮಶೇಖರ್, ಜೆಡಿಎಸ್ ಮುಖಂಡ ಎಂ.ನಾಗರಾಜು, ಅಭಿಮಾನಿಗಳಾದ ಚಿಕ್ಕಮಾದು, ಉಮೇಶ್, ಸಿದ್ದು, ಕಾಳಿಪ್ರಸಾದ್, ಮಂಜು, ಕುಮಾರ್, ಎಸ್.ಜೆ.ಹರ್ಷ ಸೇರಿದಂತೆ ಅಪ್ಪು ಅಭಿಮಾನಿಗಳು ಇದ್ದರು.

ತಿ.ನರಸೀಪುರ ಪುರಸಭೆಯಲ್ಲಿ ಆಶ್ರಯ ಸಮಿತಿ ಸಭೆ

ಆಶ್ರಯ ಯೋಜನೆಯ ಭೂ ದಾಖಲೆ ಪಡೆಯಿರಿ

ಅಧಿಕಾರಿಗಳಿಗೆ ಶಾಸಕ ಡಾ.ಯತೀಂದ್ರ ಸೂಚನೆ

ತಿ.ನರಸೀಪುರ, ಅ.29– ಪುರಸಭೆ ವ್ಯಾಪ್ತಿಯ ಆಶ್ರಯ ಯೋಜನೆ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಭೂಮಿ ಮಂಜೂರಾತಿಯ ಅಗತ್ಯ ಆದೇಶ ಪ್ರತಿಗಳನ್ನು ಸಂಬಂಧಪಟ್ಟ ಕಚೇರಿಗಳಿಂದ ಪಡೆಯುವಂತೆ ಅಧಿಕಾರಿಗಳಿಗೆ ಆಶ್ರಯ ಸಮಿತಿ ಅಧ್ಯಕ್ಷರೂ ಆದ ಶಾಸಕ ಡಾ.ಯತೀಂದ್ರ ಸೂಚಿಸಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಶನಿವಾರ ನಡೆದ ಆಶ್ರಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಪುರಸಭಾ ವ್ಯಾಪ್ತಿಯ ಸರ್ವೆ ನಂ.41/3ರ ನಿವೇಶನ ಹಂಚಿಕೆ ಮಾಡುವಂತೆ ಗೋಪಾಲಪುರ ನಿವಾಸಿಗಳ ನಿರಂತರ ಮನವಿ ಮೇರೆಗೆ ಇಂದು ಸಮಿತಿ ಸಭೆ ಕರೆಯಲಾಗಿತ್ತು. ಆಶ್ರಯ ಯೋಜನೆಗೆ ಜಮೀನು ಸ್ವಾಧೀನವಾಗಿದೆಯೇ, ಹಂಚಿಕೆಗೆ ಮೀಸಲಿಡಲಾಗಿದೆಯೇ ಎಂಬ ಅಗತ್ಯ ದಾಖಲೆ ನೀಡುವಂತೆ ಅಧಿಕಾರಿಗಳಿಗೆ ಕೇಳಲಾಗಿತ್ತು. ಆದರೆ ಆದೇಶ ಪ್ರತಿ ಸಿಕ್ಕಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅದರ ಪ್ರತಿಗಳು ಕಳೆದಿದ್ದರೆ ಎಸಿ ಕಚೇರಿಯಲ್ಲಿ ಅದರ ದಾಖಲೆ, ಆದೇಶ ಪ್ರತಿಗಳನ್ನು ಹುಡುಕಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇವೆ. ದಾಖಲೆ ಬಂದ ನಂತರ ಪರಿಶೀಲಿಸಿ ನಿವೇಶನ ಹಂಚಿಕೆಗೆ ಮೀಸಲಿಟ್ಟಿದ್ದಲ್ಲಿ ಅಗತ್ಯ ಕ್ರಮವಹಿಸುತ್ತೇವೆ. ಸಿಗದಿದ್ದಲ್ಲಿ ನಿವೇಶನ ಹಂಚಿಕೆಗೆ ಯಾವ ಕ್ರಮ ವಹಿಸಬಹುದು ಎಂಬುದರ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದರು.



ಆಶ್ರಯ ಸಮಿತಿ ಸದಸ್ಯ ಹಾಗೂ ಮಾಜಿ ವಿಧಾನಪರಿಷತ್ ಸದಸ್ಯ ಸಿ.ರಮೇಶ್ ಮಾತನಾಡಿ, ನಿವೇಶನ ಇಲ್ಲದವರಿಗೆ ನಿವೇಶನ ನೀಡಲಾಗುವುದು. ಈಗಾಗಲೇ ಸಾಕಷ್ಟು ಮಂದಿ ಅರ್ಜಿ ಹಾಕಿದ್ದಾರೆ. ಮನೆ ಹಾಗೂ ನಿವೇಶನ ಉಳ್ಳವರಿಗೆ ನಿವೇಶನ ಕೊಡುವುದಿಲ್ಲ. ಗೋಪಾಲಪುರ ನಿವೇಶನದ ಗೆಜೆಟ್ ನೋಟಿಫಿಕೇಶನ್ ದಾಖಲೆ ಒದಗಿಸಲು ತಹಸೀಲ್ದಾರ್, ಪುರಸಭಾ ಮುಖ್ಯಾಧಿಕಾರಿ ಹಾಗೂ ಇಓಗೆ ಜವಾಬ್ದಾರಿ ನೀಡಲಾಗಿದೆ. ದಾಖಲೆ ಒದಗಿಸಿದ ನಂತರ ಮುಂದಿನ ಸಭೆಯಲ್ಲಿ ನಿವೇಶನ ಹಂಚಿಕೆಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಅವರಿಂದ ನಿವೇಶನ ಕೊಡಿಸುವುದಾಗಿ ಕೆಲವರು ಹಣ ಮಾಡುವ ದಂಧೆಯಲ್ಲಿ ತೊಡಗಿದ್ದಾರೆ. ಅಂತವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಸಭೆಯಲ್ಲಿ ನಿರ್ಧರಿಸಲಾಯಿತು ಎಂದರು.

ಸಭೆಯಲ್ಲಿ ಪುರಸಭಾಧ್ಯಕ್ಷ ಎಸ್. ಮದನ್‌ರಾಜ್, ತಹಸೀಲ್ದಾರ್ ಸಿ.ಜೆ. ಗೀತಾ, ಮುಖ್ಯಾಧಿಕಾರಿ ಹೆಚ್.ಆರ್. ಬಸವರಾಜು, ಕಂದಾಯಾಧಿಕಾರಿ ಪುಟ್ಟಸ್ವಾಮಿ, ಸಮುದಾಯ ಸಂಘಟಕ ಮಹದೇವ್, ಆಶ್ರಯ ಸಮಿತಿ ಸದಸ್ಯರಾದ ಮಲ್ಲೇಶ್, ಲಕ್ಷ್ಮಿ, ಸೈಫುಲ್ಲಾ ಇತರರಿದ್ದರು.

ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

ಹನಗೋಡು, ಅ.29– ಇಲ್ಲಿಗೆ ಸಮೀಪದ ತಟ್ಟೆಕೆರೆ ಗ್ರಾಮದಲ್ಲಿ ರಸ್ತೆ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಪಿ. ಮಂಜುನಾಥ್ ಭೂಮಿ ಪೂಜೆ ನೆರವೇರಿಸಿದರು.

ಗ್ರಾಮದ ಈಶ್ವರ ದೇವಾಲಯದ ಆವರಣದಲ್ಲಿ ಲೋಕೋಪಯೋಗಿ ಇಲಾಖೆಯ ಕೋಟಿ ರೂ. ವೆಚ್ಚದ ರಸ್ತೆ ಡಾಂಬರೀಕರಣ, ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕೊರೊನಾ ಹಾಗೂ ಅತಿವೃಷ್ಟಿ ನಡುವೆ ಸರ್ಕಾರ ನೀಡಿರುವ ಅಲ್ಪ ಸ್ವಲ್ಪ ಅನುದಾನದಲ್ಲಿ ಆದ್ಯತೆ ಮೇರೆಗೆ ತಾಲೂಕಿನ ಎಲ್ಲಾ ಗ್ರಾಮಗಳಿಗೂ ಅನುದಾನ ಹಂಚಿಕೆ ಮಾಡಿ ಗ್ರಾಮಗಳ ಅಭಿವೃದ್ಧಿ ಕೈಗೊಂಡಿದ್ದೇನೆ. ಮುಂದಿನ ದಿನಗಳಲ್ಲಿ ತಟ್ಟೆಕೆರೆ ಸೇರಿದಂತೆ ಸುತ್ತಮುತ್ತಲ ಎಲ್ಲಾ ಗ್ರಾಮಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಭರವಸೆ ನೀಡಿದರು.



ಬಳಿಕ ಬೈಕ್‌ನಲ್ಲಿ ತೆರಳಿದ ಶಾಸಕ ಹೆಚ್.ಪಿ.ಮಂಜುನಾಥ್, ತಟ್ಟೆಕೆರೆ–ಹೈರಿಗೆ ಸಂಪರ್ಕ ರಸ್ತೆ ಅತಿವೃಷ್ಟಿಯಿಂದ ಹಾನಿಯಾಗಿರುವುದನ್ನು ಅಧಿಕಾರಿಗಳೊಂದಿಗೆ ವೀಕ್ಷಿಸಿ ಕೂಡಲೇ ರಸ್ತೆ ದುರಸ್ತಿಗೆ ಕ್ರಮವಹಿಸುವಂತೆ ಲೋಕೋಪಯೋಗಿ ಇಲಾಖೆ ಎಇಇ ಭೋಜರಾಜ್ ಅವರಿಗೆ ಸೂಚಿಸಿದರು.

ಈ ವೇಳೆ ತಟ್ಟೆಕೆರೆ ಗ್ರಾಪಂ ಅಧ್ಯಕ್ಷ ದೇವರಾಜ್, ಉಪಾಧ್ಯಕ್ಷೆ ಮಹದೇವಮ್ಮ, ಮಾಜಿ ಅಧ್ಯಕ್ಷ ಕುಮಾರ್, ತಾಪಂ ಮಾಜಿ ಸದಸ್ಯ ಶ್ರೀನಿವಾಸ್, ಗ್ರಾಪಂ ಸದಸ್ಯರಾದ ನವೀನ್ ಕುಮಾರ್, ಗೋವಿಂದೇಗೌಡ, ನಾಗರಾಜ್, ಭಾಸ್ಕರ್, ಮಂಜುಳಮ್ಮ, ಸಣ್ಣಮ್ಮ, ಮಂಜುಳಾ, ಡೇರಿ ಅಧ್ಯಕ್ಷ ಚಂದ್ರಹಾಸ, ಲೋಕೋಪಯೋಗಿ ಇಲಾಖೆ ಎಇಇ ಭೋಜರಾಜ್, ಇಂಜಿನಿಯರ್ ಪ್ರಭಾಕರ್, ಗುತ್ತಿಗೆದಾರ ಮಹದೇವ್ ಸೇರಿದಂತೆ ಗ್ರಾಮಸ್ಥರಿದ್ದರು.

ಪ್ರತಿಯೊಬ್ಬರೂ ಕಡ್ಡಾಯವಾಗಿ ಕನ್ನಡ ಬಳಸಿ: ಯತೀಂದ್ರ

ತಿ.ನರಸೀಪುರ, ಅ.29– ಪರಸ್ಪರ ಸಂವಹನಕ್ಕೆ ಬಳಸುವ ಕನ್ನಡ ಬರೀ ಭಾಷೆಯಲ್ಲ, ಕನ್ನಡ ನಾಡಿನ ಜನರ ಬದುಕು, ನೆಲದ ಸಂಸ್ಕೃತಿ. ಎರಡೂವರೆ ಸಾವಿರ ಇತಿಹಾಸವಿರುವ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬಳಸುವ ಮೂಲಕ ಪ್ರತಿಯೊಬ್ಬರೂ ಭಾಷೆ ಬೆಳೆಸಬೇಕು ಎಂದು ಶಾಸಕ ಡಾ.ಯತೀಂದ್ರ ಕರೆ ನೀಡಿದರು.

ಪಟ್ಟಣದ ಗುರುಭವನದಲ್ಲಿ ಶುಕ್ರವಾರ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ಕವಿಗೋಷ್ಠಿ ಹಾಗೂ ಪದಾಧಿಕಾರಿಗಳ ನೇಮಕಾತಿ ಪತ್ರವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆ ಬೆಳವಣಿಗೆ ಅಭಿಮಾನದಿಂದ ಆಗಬೇಕು. ಯುವ ಜನತೆಗೆ ಸಾಹಿತ್ಯ ವಿಸ್ತರಣೆಯಾಗಲು ಗ್ರಾಮ ಮಟ್ಟದಲ್ಲಿ ಕವಿಗೋಷ್ಠಿ ನಡೆಸಬೇಕು ಎಂದು ಸಲಹೆ ನೀಡಿದರು.

ಶಾಸಕಾಂಗ, ಕಾರ್ಯಾಂಗದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸುವಂತೆ, ನ್ಯಾಯಾಲಯದ ಆದೇಶಗಳನ್ನು ಕನ್ನಡದಲ್ಲಿ ನೀಡುವ ಕಾರ್ಯಕ್ಕೆ ಸುಪ್ರೀಂ ಕೋರ್ಟ್ ಅವಕಾಶ ನೀಡಿದ್ದರಿಂದ ಕೋರ್ಟ್ ಕಲಾಪಗಳು ಕನ್ನಡದಲ್ಲಿ ಲಭ್ಯವಾಗುತ್ತಿವೆ ತಾಲೂಕು ಮಟ್ಟದಲ್ಲಿ ಕ್ರಿಯಾಶೀಲತೆ ಹೊಂದಿರುವ ಕಸಾಪ ಒಂದಲ್ಲೊಂದು ಸಾಹಿತ್ಯ ಕಾರ್ಯಕ್ರಮ ಆಯೋಜಿಸಿ, ಭಾಷೆ ಬೆಳವಣಿಗೆಗೆ ದುಡಿಯುತ್ತಿರುವುದು ಹೆಮ್ಮೆಯ ವಿಷಯ ಎಂದರು.



ಇದೇ ವೇಳೆ ಶಾಸಕರು ಕಸಾಪ ಗೌರವಾಧ್ಯಕ್ಷ, ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿದರು. ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ನ.1ರ ರಾಜ್ಯೋತ್ಸವದಂದು ಪ್ರತಿ ಮನೆ ಮನೆಯಲ್ಲೂ ಕನ್ನಡ ಧ್ವಜ ಹಾರಿಸುವಂತೆ ಶಾಸಕ ಎಂ.ಅಶ್ವಿನ್ ಕುಮಾರ್ ಬಳಗದಿಂದ ಕನ್ನಡ ಧ್ವಜ ವಿತರಿಸಲಾಯಿತು.

ಸಾರ್ವಜನಿಕ ಆಸ್ಪತ್ರೆ ಶಸ್ತ್ರಚಿಕಿತ್ಸಕ ರೇವಣ್ಣ, ಪುರಸಭಾಧ್ಯಕ್ಷ ಎಸ್.ಮದನರಾಜು, ಸದಸ್ಯ ಬಾದಾಮಿ ಮಂಜು, ಎನ್. ಸೋಮಣ್ಣ, ತಹಸೀಲ್ದಾರ್ ಸಿ.ಜಿ.ಗೀತಾ, ತಾಪಂ ಇಓ ಸಿ.ಕೃಷ್ಣ, ಬಿಇಓ ಮರಿಸ್ವಾಮಿ, ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಡಿ.ಮಾದಪ್ಪ, ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಉಪನ್ಯಾಸಕ ಕುಮಾರಸ್ವಾಮಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ. ಶಿವಶಂಕರಮೂರ್ತಿ, ವರುಣಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ನಾಯಕರ ಸಂಘದ ಅಧ್ಯಕ್ಷ ಚಿಕ್ಕಯ್ಯ, ಕಸಾಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಮಾಜಿ ಅಧ್ಯಕ್ಷ ಎಸ್. ಮಹದೇವಶೆಟ್ಟಿ ಕೆಪಿಸಿಸಿ ಅಲ್ಪಸಂಖ್ಯಾತರ ಸಂಚಾಲಕ ಬಿ.ಮನ್ಸೂರ್ ಆಲಿ, ಪದಾಧಿಕಾರಿಗಳಾದ ಭಾಗ್ಯಮ್ಮ, ಜಯರಾಮು, ಮಹದೇವಮ್ಮ, ಸಂತೃಪ್ತಿ ಕುಮಾರ್, ಸತ್ಯನಾರಾಯಣ, ಬಸಪ್ಪ ಜ್ಞಾನೇಂದ್ರ ಮೂರ್ತಿ, ಸಾಗರ್ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.20ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ.
ಸ್ಕ್ರೀನ್ 2	ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.25ಕ್ಕೆ, ಹೆಡ್ ಬುಷ್(ಕ): 10.40ಕ್ಕೆ, ಮ.1.25ಕ್ಕೆ, ಕಾಂತಾರ (ಕ): ಸಂ.4.10ಕ್ಕೆ, 9.50ಕ್ಕೆ, ರಾಮ್ ಸೇತು (ಹಿಂ): ರಾ.7ಕ್ಕೆ.
ಸ್ಕ್ರೀನ್ 3	ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.35ಕ್ಕೆ, ಮ.1.20ಕ್ಕೆ, ಮ.3.25ಕ್ಕೆ, ಸಂ.5.30ಕ್ಕೆ, ರಾ.7.35ಕ್ಕೆ, ಬ್ಲ್ಯಾಕ್ ಆಡಮ್ (ಇಂ): ಬೆ.10.45ಕ್ಕೆ, ಕಾಂತಾರ (ಕ): ರಾ.9.55ಕ್ಕೆ.
ಸ್ಕ್ರೀನ್ 4	ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.20ಕ್ಕೆ, ಬೆ.10.15ಕ್ಕೆ, ಮ.12.15ಕ್ಕೆ, ಮ.2.15ಕ್ಕೆ, ಸಂ.4.15ಕ್ಕೆ, ಸಂ.6.15ಕ್ಕೆ, ರಾ.8.15ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ರಾಮ್‌ಸೇತು (ಹಿಂ): ಬೆ.9.20ಕ್ಕೆ, ಕಾಂತಾರ (ಕ): ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಗಂಧದಗುಡಿ (ಕ): ಬೆ.9ಕ್ಕೆ, ಬೆ.11.05ಕ್ಕೆ, ಮ.1.10ಕ್ಕೆ, ಮ.3.20ಕ್ಕೆ, ರಾ.8.20ಕ್ಕೆ, ರಾ.10.30ಕ್ಕೆ, ಹೆಡ್ ಬುಷ್ (ಕ): ಸಂ.5.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ, ಥ್ಯಾಂಕ್ ಗಾಡ್ (ಹಿಂ): ಮ.1.10ಕ್ಕೆ
ಸ್ಕ್ರೀನ್ 4	ಕಾಂತಾರ (ಕ): ಬೆ.10.45ಕ್ಕೆ, ಹೆಡ್ ಬುಷ್ (ಕ): ಮ.1.45ಕ್ಕೆ, ರಾಮ್ ಸೇತು (ಹಿಂ): ಸಂ.4.35ಕ್ಕೆ, ರಾ.10.10ಕ್ಕೆ, ಥ್ಯಾಂಕ್ ಗಾಡ್ (ಹಿಂ): ರಾ.7.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಭೂ ನಾಟಕ ಮಂಡಳಿ(ಕ): ಬೆ.10.20ಕ್ಕೆ, ಸರ್ದಾರ್ (ತ): ಮ.12.40ಕ್ಕೆ, ಪ್ರಿನ್ಸ್ (ತ): ಮ.3.50ಕ್ಕೆ, ಸಂ. 6.40ಕ್ಕೆ ಮಾನ್ಸ್ಟರ್ (ಮ): ರಾ.9.30ಕ್ಕೆ
ಸ್ಕ್ರೀನ್ 2	ಕಾಂತಾರ (ಕ): ಬೆ.10.15ಕ್ಕೆ, ಸಂ. 4ಕ್ಕೆ, ಹೆಡ್ ಬುಷ್ (ಕ): ಮ.1.10ಕ್ಕೆ, ಸಂ.7ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಹೆಡ್ ಬುಷ್ (ಕ): ಬೆ.10ಕ್ಕೆ, ಮ.3.55ಕ್ಕೆ, ಕಾಂತಾರ (ಕ): ಮ.1ಕ್ಕೆ, ಸ.6.40ಕ್ಕೆ, 9.45ಕ್ಕೆ
ಸ್ಕ್ರೀನ್ 4	ಕಥಾನಾಯಕ (ಕ): ಬೆ.10.15ಕ್ಕೆ, ಪ್ರಿನ್ಸ್ (ತ): ಮ.1ಕ್ಕೆ, ಸರ್ದಾರ್ (ತ): ಮ. 3.55ಕ್ಕೆ, ಮಾನ್ಸ್ಟರ್ (ಮ): ಸಂ.7.05ಕ್ಕೆ, ಸರ್ದಾರ್ (ತ): ರಾ. 9.45ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗಂಧದಗುಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸರ್ದಾರ್ (ತ)	4 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	5 ಪ್ರದರ್ಶನಗಳು
ಲಿಡೋ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಮ್ ಸೇತು (ಹಿಂ)	4 ಪ್ರದರ್ಶನಗಳು
ಪ್ರಭಾ	
ತೋತಾಪುರಿ (ಕ)	4 ಪ್ರದರ್ಶನಗಳು

ಮೈಸೂರು ರೇಸುಗಳು–2022

18ನೇ ದಿನ, ಭಾನುವಾರ 30-10-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.00 ಗಂಟೆಗೆ)

I. ಡೆಲ್ಲಿ ರೇಸ್ ಕ್ಲಬ್ ಟ್ರೋಫಿ ಡಿ2–1200 ಮೀ. ರೇಟೆಡ್ 00 ರಿಂದ 25. ಮ.1.00ಕ್ಕೆ
1. ರೀಗಲ್ ಫೋರ್ಸ್ 2. ಚೈನ್ ಆಫ್ ಥಾಟ್ಸ್ 3. ಸೋ ಫಾರ್

II. ಡೆಲ್ಲಿ ರೇಸ್ ಕ್ಲಬ್ ಟ್ರೋಫಿ ಡಿ1–1200 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಡಾನ್ ರೈಸಿಂಗ್ 2. ರೈಟ್‌ಲಿ ನೋಬಲ್ 3. ಏರೋಸ್ಪಿಡ್

III. ಮದ್ರಾಸ್ ರೇಸ್ ಕ್ಲಬ್ ಟ್ರೋಫಿ ಡಿ1–1400 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1 ಸರ್‌ದಾರ್ 2. ಯೂನಿಕ್ ಸ್ಟೈಲ್ 3. ಆಲ್‌ಟೈರ್

IV. ರಾಯಲ್ ವೆಸ್ಟರ್ನ್ ಇಂಡಿಯನ್ ಟರ್ಫ್ ಕ್ಲಬ್ ಟ್ರೋಫಿ–1200 ಮೀ. ರೇಟೆಡ್ 40 ರಿಂದ 65. ಮ.2.30ಕ್ಕೆ
1. ಸ್ಕೈ ಪೈರ್ 2. ಗೋಲ್ಡನ್ ವಿಷನ್ 3. ಎಲ್ಯೂಸಿವ್ ಗರ್ಲ್

V. ಹೈದ್ರಾಬಾದ್ ರೇಸ್ ಕ್ಲಬ್ ಟ್ರೋಫಿ–1400 ಮೀ. ರೇಟೆಡ್ 60ರಿಂದ 85. ಮ.3.00ಕ್ಕೆ
1. ಪಿಂಯೋ 2. ಎವಲಾಡೊ 3. ಕರಾಕಸ್

VI. ಬೆಂಗಳೂರು ಟರ್ಫ್ ಕ್ಲಬ್ ಟ್ರೋಫಿ–1200 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಮ.3.30ಕ್ಕೆ
1. ದಿ ಸವರಿನ್ ಆರ್ಟ್ 2. ಗೋಲ್ಡನ್ ಓಕ್ಸ್ 3. ಗೋಲ್ಡ್ ಫೀಲ್ಡ್

VII. ಬೆಟ್‌ವೇ ಮೈಸೂರ್ ಡರ್ಬಿ–2022–2000 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಸಾಲೆಂಟೊ 2. ಒನ್ಸ್ ಯು ಗೋ ಬ್ಲಾಕ್ 3. ಸೂಕ್ರೆ


VIII. ರಾಯಲ್ ಕಲ್ಕತ್ತ ಟರ್ಫ್ ಕ್ಲಬ್ ಟ್ರೋಫಿ–1400 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1 ಜೆಮಿನಿ 2 ಸಿಂಗ್ಸ್ ಸ್ಪೀಚ್ 3. ಸ್ಮೈಲ್ ಅರೌಂಡ್

IX. ಮದ್ರಾಸ್ ರೇಸ್ ಕ್ಲಬ್ ಟ್ರೋಫಿ ಡಿ2–1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಕ್ಲಿಮ್ಟ್ 2. ಸದರನ್ ಫೋರ್ಸ್ 3. ವಾರ್ ಟೈಯಲ್

ದಿನದ ಅತ್ಯುತ್ತಮ	: ಸಾಲೆಂಟೊ
ಡಬ್ಬಲ್	: ಸರ್‌ದಾರ್, ಜೆಮಿನಿ
ಜಾಕ್‌ಪಾಟ್	: 5, 6, 7, 8 ಮತ್ತು 9
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 4, 5 ಮತ್ತು 6
III ಟ್ರಿಬಲ್	: 7, 8 ಮತ್ತು 9
ಎಕ್ಸ್‌ಆಕ್ಸ್	: 8 ಮತ್ತು 9

ಟಿಪ್‌ಸ್ಟರ್ ಪಿಜೆಸಿ

ಎಂ.ಎಲ್.ನಾಗಣ್ಣ ನಿಧನ




ಮಲ್ಲುಂಡಿ, ಅ.29– ಗ್ರಾಮದ ನಿವಾಸಿ ಹಾಗೂ ಕಾಂಗ್ರೆಸ್ ಮುಖಂಡ ಎಂ.ಎಲ್. ನಾಗಣ್ಣ (60) ಶನಿವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಗ್ಗೆ ಸ್ವಗ್ರಾಮ ಮಲ್ಲುಂಡಿಯ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಶಾಸಕ ಬಿ.ಹರ್ಷವರ್ಧನ್ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮೈಸೂರಲ್ಲಿ ರಾತ್ರಿ ವೇಳೆ ಪುಂಡರ ಅಟ್ಟಹಾಸ

ಖಾಲಿ ಬಿಯರ್ ಬಾಟಲಿಯಿಂದ ಬಡಿದು ಕಾರಿನ ಮಿರರ್ ಡ್ಯಾಮೇಜ್

ಮೈಸೂರು, ಅ. 29– ಮೈಸೂರಲ್ಲಿ ಪುಂಡರ ಅಟ್ಟಹಾಸ ಮುಂದುವರೆದಿದೆ.





ನಿನ್ನೆ ರಾತ್ರಿ ಮೈಸೂರು ಸರಸ್ವತಿಪುರಂ ಸ್ವಿಮ್ಮಿಂಗ್ ಪೂಲ್ ರಸ್ತೆಯಲ್ಲಿ ಕುಡಿದು ಖಾಲಿ ಮಾಡಿದ ಬಿಯರ್ ಬಾಟಲಿಯಿಂದ ರಸ್ತೆಯಲ್ಲಿ ನಿಂತಿದ್ದ ಕಾರುಗಳ ಮಿರರ್ ಜಖಂಗೊಳಿಸಿದ್ದಾರೆ.

ನಿನ್ನೆ ರಾತ್ರಿ 11.30ರ ಸಂದರ್ಭದಲ್ಲಿ ಮೂರು ಬೈಕ್‌ನಲ್ಲಿ ಆರು ಮಂದಿ, ವೇಗವಾಗಿ ಓಡಿಸುತ್ತಾ, ಕೈಯ್ಯಲ್ಲಿ ಬಿಯರ್ ಬಾಟಲ್ ಹಿಡಿದು, ಮನಸ್ಸೋಇಚ್ಛೆ ಅರಚುತ್ತಾ ಸಾಗಿದ್ದಾರೆ. ಅವರಲ್ಲಿ ಒಬ್ಬಾತ ಖಾಲಿ ಬಿಯರ್ ಬಾಟಲಿಯಿಂದ ಮನೆ ಮುಂದೆ ರಸ್ತೆಬದಿ ನಿಂತಿದ್ದ ಕಾರಿನ ಮಿರರ್‌ಗೆ ಬಡಿದು, ಅದನ್ನು ಜಖಂಗೊಳಿಸಿದ್ದಾನೆ.

ಶಬ್ಧ ಕೇಳಿ ಕೂಡಲೇ ಹೊರಬಂದ ಕಾರು ಮಾಲೀಕರು, ಗದರಿಸುತ್ತಿದ್ದಂತೆ ವೇಗವಾಗಿ ಬೈಕ್ ಓಡಿಸಿಕೊಂಡು ಪರಾರಿಯಾಗಿದ್ದಾರೆ. ಕಾರು ಮಾಲೀಕರಾದ ಹರೀಶ್ ಅವರು ಅವರನ್ನು ಹಿಂಬಾಲಿಸಿದರೂ, ಅತೀ ವೇಗವಾಗಿ ಕಣ್ಮರೆಯಾಗಿದ್ದಾರೆ.

ಈ ಪುಂಡರು ರಾತ್ರಿ ವೇಳೆ ಅಮಾಯಕರು ದಾರಿಯಲ್ಲಿ ಸಿಕ್ಕರೆ ವಿನಾಕಾರಣ ಅವರ ಮೇಲೆ ಹಲ್ಲೆ ನಡೆಸದೇ ಇರಲಾರರು ಎಂದು ಆತಂಕ ವ್ಯಕ್ತಪಡಿಸಿರುವ ಹರೀಶ್, ಮೈಸೂರಲ್ಲಿ ಪುಂಡರ ಹಾವಳಿ ವ್ಯಾಪಕಗೊಳ್ಳುತ್ತಿದೆ. ಪೊಲೀಸರ ಭಯವಿದ್ದರೆ ಹೀಗೆಲ್ಲಾ ಮಾಡಲು ಸಾಧ್ಯವಿಲ್ಲ. ರಾತ್ರಿ ವೇಳೆ ಪೊಲೀಸರು ತಪಾಸಣೆ ನಡೆಸುತ್ತಾರೆ ಎಂಬ ಕನಿಷ್ಠ ಭಯವಿದ್ದರೆ ಈ ರೀತಿ ಹಾವಳಿಗೆ ಬ್ರೇಕ್ ಬೀಳುತ್ತಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಲ್ಲಿ ಬೈಕ್, ಸ್ಕೂಟರ್‌ಗಳಲ್ಲಿ ಮೂರು–ನಾಲ್ಕು ಮಂದಿ ಸವಾರಿ ಮಾಡುವುದು ಮಾಮೂಲಾಗಿದೆ. ಬ್ಯಾಲೆನ್ಸ್ ತಪ್ಪಿ ಇಂತಹವರಿಂದ ಅಪಘಾತ ವಾದರೆ ಕೊನೆಗೆ ಅಮಾಯಕರು ಬಲಿಯಾಗುತ್ತಾರೆ. ಈ ರೀತಿಯ ಹಾವಳಿಗೆ ಕಡಿವಾಣ ಹಾಕುವತ್ತ ಪೊಲೀಸರು ಗಮನಹರಿಸುತ್ತಿಲ್ಲ ಎಂದು ಬೇಸರಿಸಿದ್ದಾರೆ.

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ

ಹಾವೇರಿ, ಅ.29– ನಗರದಲ್ಲಿ 2023ರ ಜನವರಿ 6,7 ಮತ್ತು 8ರಂದು ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ಶನಿವಾರ ಬಿಡುಗಡೆ ಮಾಡಲಾಯಿತು.



ಇಲ್ಲಿಯ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನಿಲ್ ಕುಮಾರ್ ನೇತೃತ್ವದಲ್ಲಿ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಲಾಂಛನ ಬಿಡುಗಡೆ ಮಾಡಲಾಗಿದ್ದು, ಲಾಂಛನವು ರಾಣೆಬೆನ್ನೂರಿನ ಕೃಷ್ಣಮೃಗ, ಯಾಲಕ್ಕಿ ಹಾರ, ಬ್ಯಾಡಗಿ ಮೆಣಸಿನಕಾಯಿ, ಬಂಕಾಪುರದ ನವಿಲುಧಾಮ, ಭುವನೇಶ್ವರಿ ದೇವಿ, ಮದಗ ಮಾಸೂರು ಕೆರೆ, ಗಳಗನಾಥೇಶ್ವರ ದೇವಾಲಯ, ಹಾವೇರಿಯ ಪುರಸಿದ್ಧೇಶ್ವರ ದೇವಾಲಯ, ಹಾನಗಲ್ ಕುಮಾರ ಶಿವಯೋಗಿ, ವಿ.ಕೃ.ಗೋಕಾಕ್, ಅಂಬಿಗರ ಚೌಡಯ್ಯ, ಸರ್ವಜ್ಞ, ಕನಕದಾಸರು, ಶಿಶುನಾಳ ಷರೀಫ, ಪಂಚಾಕ್ಷರಿ ಗವಾಯಿ, ಶರಣೆ ಹೆಳವನಕಟ್ಟೆ ಗಿರಿಯಮ್ಮ, ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಮೈಲಾರ ಮಹದೇವಪ್ಪ ಕಾದಂಬರಿ ಪಿತಾಮಹ ಗಳಗನಾಥ, ಜಾನಪದ ವಿವಿ ಧ್ಯೇಯ ವಾಕ್ಯ, ಕಸಾಪ ಕೇಂದ್ರ ಕಚೇರಿಯ ಚಿತ್ರಗಳನ್ನು ಲಾಂಛನ ಒಳಗೊಂಡಿದೆ.

16 ನೇ ವರ್ಷದ ಸವಿನೆನಪು



ಜನನ: 05-10-1962 ಮರಣ 30-10-2006

ಶ್ರೀ ಎಂ.ಗಿರೀಶ್ (ಕಂಟ್ರಾಕ್ಟರ್)

ನೀವು ನಮ್ಮನ್ನಗಲಿ ಇಂದಿಗೆ 16 ವರ್ಷ ಕಳೆದರೂ, ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಅಚ್ಚ ಹಸಿರಾಗಿದೆ.

ದುಃಖತಪ್ತರು: ಪತ್ನಿ ಭಾಗ್ಯಮ್ಮ, ಮಗ: ಶ್ರೀನಿವಾಸ್ ಜಿ., ಹೆಣ್ಣುಮಕ್ಕಳು, ಅಳಿಯಂದಿರು, ಸೊಸೆ: ಮೊಮ್ಮಕ್ಕಳು, ರಾಮಕೃಷ್ಣನಗರ, ಮೈಸೂರು

5ನೇ ವರ್ಷದ ಚಿರಸ್ಮರಣೆ



ಜನನ: 30-09-1915 ಮರಣ 30-10-2017

ಶತಾಯುಷಿ ಪಟೇಲ್ ನಾಗಮ್ಮನವರು

ಸಂತೇ ಕಾವುದವಾಡಿ, ಚಾಮರಾಜನಗರ (ತಾಲ್ಲೂಕು)

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ, ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಅಚ್ಚ ಹಸಿರಾಗಿದೆ.

ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಬಂಧುಬಳಗ ಹಾಗೂ ಕಾವುದವಾಡಿ ಗ್ರಾಮಸ್ಥರು

PLOTS
Next to New NH
10 Lakh ONWARDS 80% LOAN
Yesh 9538885508

ಯಶಸ್ವಿ ಪ್ರದರ್ಶನ
ಪದ್ಮ
ದಿನ 4 ಪ್ರದರ್ಶನ
10.30 1.30
4.30 7.30
ಡಾ|| ಪುನೀತ್ ರಾಜ್‌ಕುಮಾರ್ ನಟಿಸಿರುವ
ಗಂಧದಗುಡಿ (ಕನ್ನಡ)



40X60 ಸೈಟ್ ಮಾರಾಟಕ್ಕಿದೆ
ದಟ್ಟಗಳ್ಳಿ ಆದಿತ್ಯ ಸರ್ಕಲ್ ಹತ್ತಿರ.
ಸೈಟ್, ಹಳೆಮನೆ, ಹೊಸಮನೆ ಮಾರುವವರು, ಕೊಳ್ಳುವವರು
9945042875

MUDA APPROVED
SITES FOR SALE
20x30 - Rs. 22 Lakhs
20x40 - Rs. 27 Lakhs
(North & South Facing)
Ready to Registration.
Vijayanagar 4th Stage, 2nd Phase, attached to MS Ramaiah Layout.
Bank Loan Available
Mob: 80955-55558

ಬೇಕಾಗಿದ್ದಾರೆ
ಕುಶಾಲನಗರ, ಕೊಡಗು ಅನುಭವವುಳ್ಳ ಇಂಡಕ್ಷನ್ ಹಾಗೂ ಸಬ್‌ಮರ್ಸಿಬಲ್ ಮೋಟಾರ್ ರಿವೈಂಡರ್ ಸ್ಟಾರ್ಟರ್ ರಿಪೇರಿ ಮಾಡುವವರು, ಲೇತ್ ಟರ್ನರ್, ಹಿಟಾಚಿ, JCB, CO2 ವೆಲ್ಡಿಂಗ್ ಮಾಡುವವರು ಬೇಕಾಗಿದ್ದಾರೆ. ವೇತನ: 20,000 ದಿಂದ 30,000 ವರೆಗೆ ಹಾಗೂ ಉಚಿತ ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ:
9448433350 / 9945465002

BALAJI NAVODAYA
Premium plots at Bogadi Road, 75% Bank Loan available futuristic location, attached to State Highway, Ready to Registration and Construction storm concrete Road, Rain water harvesting system.
Call for free site visit
99804 91145

SITES FOR SALE
MUDA APPROVED
LVR ENCLAVE
40 x 52 E/F
40 x 54 E/F
40 x 57 E/F
55x 50 S/E Corner
60 ft Road, Adjacent to Preethi Layout, Srirampura 2nd Stage, Mysuru
9900466811 / 9686573798

SITE FOR SALE
30 x 40 West Facing, Semi Commercial site, adjacent to Delhi Public School, Bannur Road with Clear Title
Contact: 9943346990

SITE FOR SALE
MUDA Approved,
20x40, 30x50-SHRINIDHI ENCLAVE,
Hunsur-Mysore Road, Near Police Check Post, Opp. to Sai Garments.
30x40, 30x50 - Next to KBL SILICON CITY Near INFOSYS, BEML, NIE Engineering College.
Mob: 9035696961

FOR SALE
30x50, Roopa Nagar.
40x60, Vijaynagar 4th stage.
3600 sft., close to Christ School.
3600 sft., Commercial Plot at Gokulam
Call: 8904319072

ದಿವ್ಯಜ್ಯೋತಿ ಜ್ಯೋತಿಷ್ಯ ಮಹಾವಿದ್ಯಾಲಯ (ರಿ)
ಮೈಸೂರು ಶಾಖೆ – ಬೆಂಗಳೂರು ಕೇಂದ್ರ
(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ಬೆಂಗಳೂರು ಇವರಿಂದ ಮಾನ್ಯತೆ ಪಡೆದ ವಿದ್ಯಾ ಸಂಸ್ಥೆ)
ಜ್ಯೋತಿಷ್ಯ ಅಧ್ಯಯನದ ವಿಷಯಗಳು (ಸಂಸ್ಥೆಯ ಸರ್ಟಿಫಿಕೇಟ್ ಕೋರ್ಸ್‌ಗಳು)
1. ಜ್ಯೋತಿಷ್ಯ ರತ್ನ – ಮೊದಲನೇ 6 ತಿಂಗಳು
2. ಜ್ಯೋತಿಷ್ಯ ವಿಶಾರದ – ಎರಡನೇ 6 ತಿಂಗಳು
3. ಜ್ಯೋತಿಷ್ಯ ವಿದ್ಯಾಭೂಷಣ – ಮೂರನೇ 6 ತಿಂಗಳು
ತರಗತಿಗಳು ಪ್ರತಿ ಭಾನುವಾರ 10 ರಿಂದ 12 ರವರೆಗೆ ನಡೆಯುತ್ತವೆ.
ನವೆಂಬರ್ ತಿಂಗಳಿಂದ ತರಗತಿಗಳು ಪ್ರಾರಂಭವಾಗುತ್ತವೆ.
ಆಸಕ್ತರು ಸಂಪರ್ಕಿಸಿ – ಡಾ. ಜಿ. ವೆಂಕಟೇಶ್ 9739140474, 6361900429
ವಿಜಯ ಪ್ರಕಾಶ್ : 96639066666
ಸ್ಥಳ : ಗೋಪಾಲಸ್ವಾಮಿ ಶಿಶುವಿಹಾರ ಮತ್ತು ಶ್ರೀ ಯೂನಿವರ್ಸಿಟಿ ಇಂಡಿಪೆಂಡೆಂಟ್ ಕಾಲೇಜು, ನ್ಯೂ ನಂಜುಮಳಿಗೆ, ಲಕ್ಷ್ಮೀಪುರಂ, ಮೈಸೂರು.

ಶ್ರೀ ಗೌರಿಶಂಕರ ಟ್ರಾವೆಲ್ಸ್
1–11–22 (8 ದಿನ) ದೆಹಲಿ, ಆಗ್ರಾ, ಪ್ರಯಾಗ್ ರಾಜ್, ಕಾಶಿ, ಗಯಾ, ಅಯೋಧ್ಯ ಇತ್ಯಾದಿ.
10–11–22 (4 ದಿನ) ಬಾಂಬೆ, ಶಿರಡಿ, ನಾಸಿಕ್, 3 ಜ್ಯೋತಿರ್ಲಿಂಗ, ಎಲ್ಲೋರ.
24–12–22 (6 ದಿನ) ಗುರುವಾಯೂರು, ಮುನ್ನಾರ್
9620002114


WANTED
CAKE CHEF WITH KNOWLEDGE IN FONDANT CAKE FOR KNOWN AND REPUTED BAKERY FOR INTERVIEW. CONTACT
9742021226

ORANGE CITY – MYSORE
RESIDENTIAL PLOTS
@ just Rs. 525/ sqft.,
near to new KIADB Land.
Dimension:
"30x40" "30x50" "40x60"
Madikeri-Mysore Highway
Contact: 8553727271

BOOKINGS OPEN FOR
Construction of Brand New Architecture Designed Houses
MUDA APPROVED
20'x40 - 30 Lakhs
30'x40' - 44.99 Lakhs
Near St. Joseph's Central School, Hunsur Road, Mysore.
9740767576, 8884001233

SITE FOR SALE
40 X 60 East Facing Site with clear title at M S Ramiah Nagar, near Vijaynagar 4th Stage, Mysore.
Contact: 9740328018

ನಿಸರ್ಗ ಪ್ಯಾರಡೈಸ್
DEVELOPED PLOTS
ONE OF THE HIGHTECH LAYOUT IN MYSURU
50 ACRES TOWNSHIP PROJECT



ತಕ್ಷಣ ಕ್ರಯ
ಎಲ್ಲಾ ಸೌಲಭ್ಯಗಳನ್ನೊಳಗೊಂಡಿರುವ
ಬುಕ್ಕಿಂಗ್ ತೆರೆದಿದೆ
ತ್ವರೆ ಮಾಡಿ..! ಕೆಲವೇ ಸೈಟ್‌ಗಳು ಮಾತ್ರ
30X40
30X50
40X60
ಬ್ಯಾಂಕ್ ಸಾಲ ಸೌಲಭ್ಯವಿದೆ
HDFC BANK LIC HFL ICICI Bank
ಹೈಲ್ಯಾಂಡ್ ಪ್ರಾಪರ್ಟೀಸ್
ಹುಣಸೂರು– ಮೈಸೂರು ಮುಖ್ಯ ರಸ್ತೆ, ಮೈಸೂರು
95133 01854
90713 86615



Hi! TAXI
ONLY ONE WAY TAXI CHARGE
MYSORE to BANGALORE
City drop or Pick up
BANGALORE to MYSORE Airport drop or Pick up
Shakthi Nagar MYSURU
9611177599

REQUIRED FOR
MMG CONSTRUCTIONS LLP
ACCOUNTANT WITH BUSSY / TALLY, GST, TDS KNOWLEDGE
(Exp. 2 to 3 Years) attractive Salary
You can forward ur CV to our mail id
mmgcllp@gmail.com
Contact : 99004 86822

BUILDING CONSTRUCTION
Navi Nivas
@ 1499 Rs/sqft onwards
Call: 7676768868

ವಿದೇಶ ಪ್ರವಾಸ



ಒಮಾನ್ (ಮಸ್ಕತ್) ಹಾಗೂ ದುಬೈ ದೇಶಗಳಿಗೆ ಪ್ರವಾಸ ಹೊರಟಿರುವ ಶ್ರೀ ಸಿ. ಚಿನ್ನಸ್ವಾಮಿ ಶ್ರೀಮತಿ ಲಕ್ಷ್ಮಿ.ಎಂ.ಎಸ್, ಕಿರಣ್.ಸಿ, ಅಶ್ವಿನಿ.ಪಿ, ಆಧ್ಯಾ.ಕೆ, ಮಹರ್ತ್.ಕೆ, ಕಾವ್ಯಶ್ರೀ.ಸಿ ಹಾಗೂ ಮಿಲನ್.ಎನ್ ರವರುಗಳಿಗೆ

ಶುಭಹಾರೈಸುವವರು

ವಿ.ಶಿವಕುಮಾರ್ (ಭೀಮ), ತಾರಾದೇವಿ.ಎಂ.ಎಸ್, ಹೆಚ್.ಆರ್.ಶಾಂತರಾಜು, ಉಮಾ.ಎಂ.ಎಸ್, ಪ್ರಕಾಶ್ ಕುಮಾರ್.ಕೆ.ಎ, ಚಂದ್ರಕಲಾ, ಪ್ರಸಾದ್.ಎಸ್.ಎ, ರೂಪಕಲಾ, ವನಜಾಕ್ಷಿ ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

ಮೈಸೂರು ಮಿತ್ರ 43
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

ಪುರಸಭಾ ಕಾರ್ಯಾಲಯ, ಹೊಳೆನರಸೀಪುರ

ದೂರವಾಣಿ ಮತ್ತು ಫ್ಯಾಕ್ಸ್ ಸಂಖ್ಯೆ:08175–273229

email:itstaff_ulb_holenarasipur@yahoo.co.in

ನಂ:ಪುಸ.ಹೊನಪುರ/ಆ.ಶಾ/ಪಿ.ಆರ್02/2022–23 ದಿನಾಂಕ: 29.10.2022

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮುಖಾಂತರ)

ಹೊಳೆನರಸೀಪುರ ಪಟ್ಟಣದ ವ್ಯಾಪ್ತಿಯಲ್ಲಿ ಈ ಕೆಳಕಂಡ ಕೆಲಸಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 2017 ನಿಯಮಗಳಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ–ಪ್ರೊಕೊರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು/ಸಂಸ್ಥೆಗಳಿಂದ ಐಟಂವಾರು ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ–ಪ್ರೊಕೊರ್‌ಮೆಂಟ್ Visit:https:// www. eproc.karnataka.gov.in/ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ. ಪುರಸಭಾ ನಿಧಿ ಕ್ರ.ಸಂ.1)ಕಾಮಗಾರಿಯ ವಿವರ:ಹೊಳೆನರಸೀಪುರ ಪುರಸಭಾ ವ್ಯಾಪ್ತಿಯ ವಾರ್ಡ್ ನಂ 1 ರಿಂದ 23 ವಾರ್ಡ್‌ಗಳ ಬೀದಿ ದೀಪ ವಾರ್ಷಿಕ ನಿರ್ವಹಣೆ Indent No: DMA/ 2022-23/OW/WORK_INDENT131619/ ಅಂದಾಜು ಮೊತ್ತ (ಲಕ್ಷಗಳಲ್ಲಿ) 30.20 ಇಎಂಡಿ ಮೊತ್ತ (ರೂ.ಗಳಲ್ಲಿ): 75500–00 ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭರ್ತಿಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 19.11.2022 ಸಂಜೆ 4.30 ಗಂಟೆವರೆಗೆ ; ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 21.11.2022 ಬೆಳ್ಳಿಗೆ 11.00 ಕ್ಕೆ

ಸಹಿ/– ಅಧ್ಯಕ್ಷರು, ಪುರಸಭೆ, ಹೊಳೆನರಸೀಪುರ.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಹೊಳೆನರಸೀಪುರ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/674/2022–23

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲಾ ಮತ್ತು ತಾಲ್ಲೂಕು, ಇಲವಾಲ ಹೋಬಳಿ, ಕೆ.ಹೆಮ್ಮನಹಳ್ಳಿ ಗ್ರಾಮದ ಸರ್ವೆ ನಂ. 106\1 ರಲ್ಲಿ 0–29 ಗುಂಟೆ ಖುಷ್ಕಿ ಜಮೀನನ್ನು ಮೈಸೂರಿನ ಎ.ವಿ. ಜಾನ್ ಮತ್ತು ಕುಟುಂಬಸ್ಥರಿಂದ ನಮ್ಮ ಕಕ್ಷಿದಾರರಾದ ಬಸವರಾಜ್ ಗಂಜೀಗಾಯಿ ರವರು ಖರೀದಿಸಲು ವ್ಯವಹಾರ ನಡೆಸಿದ್ದು, ಈ ಮೊದಲು ಸದರಿ ಸ್ವತ್ತು ನಿಂಗಯ್ಯನವರ ಮಗ ರವಿಕುಮಾರ್. ಎನ್ ಎಂಬವರಿಗೆ ನೊಂದಾಯಿತ ಕ್ರಯದ ಅಗ್ರಿಮೆಂಟ್ ಆಗಿದ್ದು ಅವರ ಒಪ್ಪಿಗೆ ಮೇರೆಗೆ ಖರೀದಿಸಲು ಅಡ್ವಾನ್ಸ್ ಸಹ ನೀಡಿದ್ದು ಸರಿಯಷ್ಟೆ. ಈ ಸ್ವತ್ತಿಗೆ ಸಂಬಂಧಿಸಿದಂತೆ ಆಸಕ್ತಿಯುಳ್ಳ ವ್ಯಕ್ತಿಗಳು ಯಾರಾದರೂ ಇದ್ದರೆ ಮೇಲ್ಕಂಡ ವಕೀಲರ ಕಛೇರಿಗೆ ಹಾಜರಾಗಿ ವೈಯಕ್ತಿಕವಾಗಿ ಇಲ್ಲವೆ ವಕೀಲರ ಮುಖಾಂತರ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ಭಾವಿಸಿ ಈ ಪ್ರಕಟಣೆ ಪ್ರಕಟಣೆಗೊಂಡ 15 ದಿವಸಗಳ ನಂತರ ಮೇಲ್ಕಂಡ ನಮ್ಮ ಕಕ್ಷಿದಾರರಾದ ಬಸವರಾಜು ಗುಂಜೀಗಾಯಿರವರು ಷೆಡ್ಯೂಲ್ ಸ್ವತ್ತನ್ನು ನೊಂದಣಿ ಮಾಡಿಸಿಕೊಳ್ಳುವವರಿದ್ದಾರೆಂದು ತಿಳಿಯುವುದು.

ದಿನಾಂಕ 29–10–2022 ರಂದು ಪ್ರಕಟಣೆ ನೀಡಲಾಗಿದೆ.

ಷೆಡ್ಯೂಲ್

ಮೈಸೂರು ಜಿಲ್ಲಾ ಮತ್ತು ತಾಲ್ಲೂಕು, ಇಲವಾಲ ಹೋಬಳಿ, ಕೆ.ಹೆಮ್ಮನಹಳ್ಳಿ ಗ್ರಾಮದ ಸರ್ವೆ ನಂ. 106\1 ರಲ್ಲಿ 0–29 ಗುಂಟೆ ಖುಷ್ಕಿ ಜಮೀನಿನ ಚಕ್ಕುಬಂದಿ: ಪೂರ್ವಕ್ಕೆ : ಬ್ಲಾಕ್ ನಂ 1, ಪಶ್ಚಿಮಕ್ಕೆ : ನಾಲಾ, ಉತ್ತರಕ್ಕೆ : ಮಾದಗಳ್ಳಿ ಗಡಿ ಮತ್ತು ದಕ್ಷಿಣಕ್ಕೆ : ರಸ್ತೆ.

ಸ್ಥಳ : ಮೈಸೂರು (ಹೆಚ್.ಪಿ.ಮಹದೇವಪ್ಪ)

ದಿನಾಂಕ : 29-10-2022 ವಕೀಲರು

ನಂ 1531/1, ಕೆ 15/1, ನವಗ್ರಹ ದೇವಸ್ಥಾನದ ರಸ್ತೆ, ಮೈಸೂರು – 570004. ಮೊಬೈಲ್ ನಂ. 9900501881

ಮೈಸೂರು ಜಿಲ್ಲಾ ಪಂಚಾಯತ್

(ಕೈಗಾರಿಕೆ ವಿಭಾಗ)

ಉಪ ನಿರ್ದೇಶಕರವರ ಕಛೇರಿ, ಗ್ರಾಮೀಣ ಕೈಗಾರಿಕೆ ವಿಭಾಗ, ಜಿಲ್ಲಾ ಪಂಚಾಯತ್, ಕೈಗಾರಿಕೆ ಇಲಾಖೆ,

ಸಿ.ಟಿ.ಐ ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು

ದಿನಾಂಕ: 28.10.2022

ವೃತ್ತಿನಿರತ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜಿಗಾಗಿ (ಇ–ಪ್ರೊಕ್ಯೂರ್‌ಮೆಂಟ್) ಮರು ಟೆಂಡರ್ ಪ್ರಕಟಣೆ

ಇ–ಪ್ರೋಕ್ಯೂರ್‌ಮೆಂಟ್ ಮರು ಟೆಂಡರ್ ಆದೇಶ ಸಂಖ್ಯೆ: ಉನಿ/(ಖಾಗ್ರಾ)/ಜಿಪಂ/ಮೈ/ಇ–ಪ್ರೋಕ್ಯೂರ್‌ಮೆಂಟ್ ಮರು ಟೆಂಡರ್/2022–23 ದಿ: 28.10.2022 **ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸ್ವೀಕರಿಸುವ ದಿ:** 28.10.2022 ರಿಂದ 07.11.2022 ಸಂಜೆ 04.30 ಗಂಟೆಯೊಳಗೆ **ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ:** 07.11.2022 ಸಂಜೆ 04.30 ಗಂಟೆಯೊಳಗೆ https://eproc.karnataka.gov.in **ಟೆಂಡರ್ ತೆರೆಯುವ ತಾತ್ಕಾಲಿಕ ದಿನಾಂಕ ಮತ್ತು ಸಮಯ:** 09.11.2022 ಬೆಳಿಗ್ಗೆ 11.00 ಗಂಟೆ. **ಟೆಂಡರ್ ತೆರೆಯುವ ಅಧಿಕಾರಿ:** ಉಪ ನಿರ್ದೇಶಕರು (ಖಾಗ್ರಾ) ಜಿ.ಪಂ. ಮೈಸೂರು. **ಸಂಪರ್ಕಿಸಬೇಕಾದ ಕಛೇರಿ ವಿಳಾಸ:** ಉಪ ನಿರ್ದೇಶಕರು (ಖಾಗ್ರಾ) ರವರ ಕಛೇರಿ, ಗ್ರಾಮೀಣ ಕೈಗಾರಿಕೆ ವಿಭಾಗ, ಜಿಲ್ಲಾ ಪಂಚಾಯತ್, ಕೈಗಾರಿಕೆ ಇಲಾಖೆ, ಸಿ.ಟಿ.ಐ ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು. **ಮೇಲ್ಮನವಿ ಪ್ರಾಧಿಕಾರ:** ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು

ಉಪನಿರ್ದೇಶಕರು(ಖಾಗ್ರಾ), ಜಿಲ್ಲಾ ಪಂಚಾಯತ್(ಕೈಗಾರಿಕಾ ವಿಭಾಗ), ಮೈಸೂರು ರವರ ಕಛೇರಿಯಿಂದ ಮೈಸೂರು ಜಿಲ್ಲೆಯಲ್ಲಿರುವ ವೃತ್ತಿನಿರತ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳನ್ನು ಸರಬರಾಜು ಮಾಡಲು ಈ ಕೆಳಕಂಡ ಉಪಕರಣಗಳ ಸರಬರಾಜಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮರು ಮೂಲಕ ಟೆಂಡರ್ ಆಹ್ವಾನಿಸಿದೆ.

ಕ್ರಸಂ.01 ವಿವರಗಳು: ವಿದ್ಯುತ್ ಚಾಲಿತ ಮರಗೆಲಸದ ಉಪಕರಣ. **ಅಂದಾಜು ಸಂಖ್ಯೆ:** 100 **ಇ.ಎಂ.ಡಿ.:** 20,000/– **ಅಂದಾಜು ಟೆಂಡರ್ ಮೊತ್ತ ರೂ. ಲಕ್ಷಗಳಲ್ಲಿ:** 08.00

ಸಹಿ/– ಉಪನಿರ್ದೇಶಕರು(ಖಾಗ್ರಾ), ಜಿಲ್ಲಾ ಪಂಚಾಯತ್, ಮೈಸೂರು

DIPR/DDMYS/MCA/609/2022-23

ಇಂದಿನಿಂದ ಶುಭಾರಂಭ
ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಸೇಲ್
ಪುರುಷರ, ಮಹಿಳೆಯರ ಹಾಗೂ ಮಕ್ಕಳ ಉಡುಪುಗಳ ಭಾರಿ ರಿಯಾಯಿತಿ ಮಾರಾಟ
FACTORY OUTLET SALE UPTO 80% OFF
ಮೊಟ್ಟಮೊದಲ ಬಾರಿಗೆ ಮೈಸೂರಿನಲ್ಲಿ 50,000ಕ್ಕಿಂತಲೂ ಅಪಾರ ವೆರೈಟಿಯ ಜೀನ್ಸ್‌ಪ್ಯಾಂಟ್, ಕಾಟನ್‌ಪ್ಯಾಂಟ್, ಫಾರ್ಮಲ್‌ಪ್ಯಾಂಟ್, ಫಾರ್ಮಲ್ ಶರ್ಟ್‌ಗಳು, ಕ್ಯಾಶುಯಲ್ ಶರ್ಟ್‌ಗಳು, ಆಫೀಸ್ ಮತ್ತು ಪಾರ್ಟಿವೇರ್ ಶರ್ಟ್‌ಗಳು, ಟಿ–ಶರ್ಟ್‌ಗಳು, ಲೋವರ್, ಬರ್ಮುಡಾಸ್, ಶಾರ್ಟ್ಸ್, ಟಾಪ್, ಕುರ್ತೀಸ್, ಲೇಡಿಸ್ ಜೀನ್ಸ್‌ಪ್ಯಾಂಟ್, ಪುಲ್ಲೋವರ್, ಜಾಕೆಟ್‌ನ ಹಲವು ವೈವಿಧ್ಯಗಳು ಮತ್ತು ವಿನ್ಯಾಸಗಳನ್ನು ಸ್ವಯಂ ಆಯ್ಕೆ ಮಾಡಿಕೊಳ್ಳಿ. ಕಿಡ್ಸ್‌ವೇರ್ ಇತ್ಯಾದಿ ಒಂದೇ ಸೂರಿನಡಿ.
ಸಂಪೂರ್ಣ ಹೊಸ ಸ್ಟಾಕ್‌ನೊಂದಿಗೆ ಹಾಗೂ ಹೊಸ ವಿವಿಧ ವಿನ್ಯಾಸಗಳೊಂದಿಗೆ
ನಂಜರಾಜ ಬಹದ್ದೂರ್ ಛತ್ರದಲ್ಲಿ ಭಾರಿ ರಿಯಾಯಿತಿ ಮಾರಾಟ
ಕೇವಲ 5 ದಿನಗಳು ಮಾತ್ರ : ಅಕ್ಟೋಬರ್ 30, 31 ಹಾಗೂ ನವೆಂಬರ್ 1, 2 ಮತ್ತು 3 ರವರೆಗೆ
ಪುರುಷರ, ಮಹಿಳೆಯರ ಮತ್ತು ಮಕ್ಕಳ ರೆಡಿಮೇಡ್ ಉಡುಪುಗಳು
ಕೇವಲ ರೂ. 150/– 600/– ರಿಂದ ಪ್ರಾರಂಭ
ಬಿಗ್‌ಬ್ರ್ಯಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್ : ವಿವಿಧ ಪ್ರಕಾರದ ಕಾಟನ್ ಪ್ಯಾಂಟ್, ಜೀನ್ಸ್‌ಪ್ಯಾಂಟ್, ಫಾರ್ಮಲ್ ಪ್ಯಾಂಟ್ ಶರ್ಟ್, ಟೀ–ಶರ್ಟ್ಸ್, ಲೋಯರ್, ಪುಲ್‌ಓವರ್ ಮತ್ತು ಇತ್ಯಾದಿ
ಕೇವಲ ರೂ. 150/– ರಿಂದ ರೂ. 400/– ಮಾತ್ರ
ಬ್ರಾಂಡೆಡ್ ಮಹಿಳೆಯರ ಕುರ್ತೀಸ್, ಟಾಪ್‌ಗಳು ಮತ್ತು ವೆಸ್ಟರ್ನ್ ರೆಡಿಮೇಡ್ ಗಾರ್ಮೆಂಟ್ಸ್ ವಿವಿಧ ಪ್ರಕಾರದ ಲಾಂಗ್ ಕುರ್ತೀಸ್, ಪ್ಲಾಜೋ, ಶಾರ್ಟ್ ಕುರ್ತೀಸ್, ವೆಸ್ಟರ್ನ್ ಟಾಪ್ ಲೇಡೀಸ್ ಜೀನ್ಸ್ ಪ್ಯಾಂಟ್ & ಲೇಡೀಸ್ ಜೀನ್ಸ್ ಜಾಕೆಟ್ ಇತ್ಯಾದಿ.
ಕೇವಲ ರೂ. 200/–, 400/– ಮತ್ತು 600/– ಮಾತ್ರ
ಬ್ರಾಂಡೆಡ್ ಪುರುಷರ ಶೂ, ಲೇಡಿಸ್ ಪಾದರಕ್ಷೆಗಳು & ಸ್ಯಾಂಡಲ್ಸ್ ಕೇವಲ ರೂ. 350/– 500/– ರಿಂದ ಪ್ರಾರಂಭ
ವಿವಿಧ ಬಗೆಯ ಮಕ್ಕಳ ಉಡುಪುಗಳು ಕೇವಲ ರೂ. 200 ರಿಂದ 500
ವಿಶೇಷ ಕೌಂಟರ್‌ನಲ್ಲಿ ಬ್ರಾಂಡೆಡ್ ಶೂಗಳ ಮಾರಾಟ : ರೂ. 400/– ರಿಂದ ರೂ. 2000/–ವರೆಗೆ
NIKE Timberland adidas ARROW Reebok WOODLAND PUMA GAS HRX The Roadster Life Co.
And many more brands
ಸ್ಥಳ : ನಂಜರಾಜ ಬಹದ್ದೂರ್ ಛತ್ರ
ಮೆಟ್ರೋಪೋಲ್ ಸರ್ಕಲ್ ಹತ್ತಿರ, ವಿನೋಬ ರಸ್ತೆ, ಮೈಸೂರು

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು